ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


06 ಜುಲೈ 2016 ಪುಟ 16 ರೂ. 15/-

ಮಾನವ ಕುಲದ ಹೆಮ್ಮೆ ಪೈಗಂಬರ್



ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರು

ಕಾಶೀಮಠದ ಆಶ್ರಯದಲ್ಲಿ ಕೊಲೆಗಾರ






ದಾವಣಗೆರೆ

ವಂಶಾಡಳಿತವನ್ನು ಭದ್ರವಾಗಿಸಿದ ಜಾಣ








ಸಂವಿಧಾನ ರಚನಾ ಕಾರ್ಯದತ್ತಲೂ ಅಸ್ಪೃಶ್ಯತಾಚರಣೆಯ ನೋ...

"ಅಂಬೇಡ್ಕರ್ ಅವರು ಸಂವಿಧಾನ ಬರೆದಿಲ್ಲ, ಐಎಎಸ್ ಅಧಿಕಾರಿಗಳು ಗುಪ್ತಚರ ಮಾಹಿತಿಗಳನ್ನು ಕ್ರೋಢೀಕರಿಸಿ ವರದಿ ಸಿದ್ಧಪಡಿಸಿ ಪ್ರಧಾನಿಗೆ ಸಲ್ಲಿಸುವಂತೆ ಸಂವಿಧಾನದ ಕರಡು ತಿದ್ದಿ ಸಂವಿಧಾನದ ಪ್ರತಿಯನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅಂಬೇಡ್ಕರ್ ಪಾತ್ರ ಬರೀ ಕಲ್ಪನೆ" ಎಬಿವಿಪಿ ಮಾಜಿ ಪ್ರಧಾನ ಕಾರ್ಯದರ್ಶಿ ಹಾಲಿ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಅಧ್ಯಕ್ಷ ಹಿಂದೂತ್ವವಾದಿ ರಾಮ್ ಬಹದ್ದೂರ್ ರಾಯ್ ಹೇಳಿರುವ ದ್ವೇಷಪೂರಿತ ಮಾತುಗಳಿವು. ದ್ವೇಷಪೂರಿತ; ಯಾಕೆಂದರೆ ರಾಯ್‌ರ ಈ ಹೇಳಿಕೆ ಅಧ್ಯಯನರಹಿತದ, ಸಂವಿಧಾನದ ಇತಿಹಾಸವನ್ನು ಕಿಂಚಿತ್ತೂ ಅವಲೋಕಿಸದ, ಅವಲೋಕಿಸಿದರೆ ಎಲ್ಲಿ ಸತ್ಯ ಒಪ್ಪಿಕೊಳ್ಳಬೇಕಾಗುತ್ತದೆಯೋ ಎಂದು ವಾಸ್ತವವನ್ನು ನೋಡದ, 'ಅಂಬೇಡ್ಕರ್ ಸಂವಿಧಾನಶಿಲ್ಪಿ' ಎಂಬ ಅಂತಹ ವಾಸ್ತವವನ್ನು ಅರಗಿಸಿಕೊಳ್ಳಲಾರದೆ ಹೇಳಿರುವ ಮಾತುಗಳಿವು. ಒಂದು ಸಮುದಾಯದ ವಿರುದ್ಧ ಅಂದರೆ ಶೋಷಿತ ಸಮುದಾಯದ ವಿರುದ್ಧ ಹೀಗೆ ನಿರಂತರ ದ್ವೇಷವಿರದಿದ್ದರೆ ಈ ಪರಿಯ ಅದರ ಸಾಧನೆಗಳನ್ನು, ಅದರ ನೇತಾರರ ಸಾಧನೆಗಳನ್ನು ಅವಮಾನಿಸುವ ಕಾರ್ಯವನ್ನು ಯಾರೂ ಕೂಡ ಮಾಡಲಾರರು. ಆಶ್ಚರ್ಯವೆಂದರೆ ಹಿಂದೂತ್ವದ ನೇತಾರರು ಅದು ಅರುಣ್ ಶೌರಿ ಇರಬಹುದು, ರಾಮ್ ಬಹದ್ದೂರ್ ರಾಯ್ ಇರಬಹುದು ಇಂತಹದ್ದನ್ನು ಮಾಡುತ್ತಲೇ ಬಂದಿದ್ದಾರೆ. ಈ ನಿಟ್ಟಿನಲ್ಲಿ ದ್ವೇಷಭರಿತ ಇಂತಹ ಹೇಳಿಕೆಗೆ ಉತ್ತರಿಸದಿರಲು ಸಾಧ್ಯವೇ? ಉತ್ತರಿಸಲೇಬೇಕು. ಆ ಮೂಲಕ ಸತ್ಯವನ್ನು ಮತ್ತೆ ಮತ್ತೆ ಎತ್ತಿಹಿಡಿಯಲೇಬೇಕಿದೆ. ಇಲ್ಲದಿದ್ದರೆ ಅವರು ಸತ್ಯದ ಬಾಬ್ರಿ ಮಸೀದಿಯ ಮೇಲೆ ಸುಳ್ಳಿನ ರಾಮಮಂದಿರವನ್ನು ಕಟ್ಟುವ ತಮ್ಮ ಚಾಳಿಯನ್ನು ಸಂವಿಧಾನದ ಮೇಲೂ ಹೇರುವ ಸಾಧ್ಯತೆ ಇದೆ.

ಈ ಹಿನ್ನೆಲೆಯಲ್ಲಿ ಸಂವಿಧಾನ ಬರೆದ ಆ ಸಂದರ್ಭದಲ್ಲಿ ಅದನ್ನು ಅರ್ಪಿಸುತ್ತಿದ್ದ ದಿನ (1949 ನವೆಂಬರ್ 26) ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ.ಬಾಬು ರಾಜೇಂದ್ರ ಪ್ರಸಾದ್‌ರವರ ಹೇಳಿಕೆ ಮೂಲಕ ನಾವು ಇಂತಹ ಹಿಂದೂತ್ವವಾದಿಗಳಿಗೆ ಪ್ರತ್ಯುತ್ತರವನ್ನು ಪ್ರಾರಂಭಿಸುವುದಾದರೆ... ಡಾ.ಬಾಬು ರಾಜೇಂದ್ರ ಪ್ರಸಾದ್‌ರವರು ಹೇಳುತ್ತಾರೆ "ಅಧ್ಯಕ್ಷೀಯ ಸ್ಥಾನದಲ್ಲಿ ಕುಳಿತು ಇತರರಿಗಿಂತ ಅನುದಿನದ ಸಭೆಯ ನಡಾವಳಿಯನ್ನು ಗಮನಿಸುತ್ತಾ ಬಂದಿರುವ ನನಗೆ ಅರಿವಾದದ್ದೆಂದರೆ ಕರಡು ಸಮಿತಿಯ ಸದಸ್ಯರು ವಿಶೇಷವಾಗಿ ಅದರ ಅಧ್ಯಕ್ಷರಾದ ಡಾ.ಅಂಬೇಡ್ಕರ್‌ರವರು ತಮ್ಮ ವೈರುಧ್ಯದ ಆರೋಗ್ಯದ ಹೊರತಾಗಿಯೂ ಅದೆಂತಹ ಅತ್ಯಪರೂಪದ ಶ್ರದ್ಧೆ ಮತ್ತು ಉತ್ಸಾಹದಿಂದ ಕೆಲಸ ಮಾಡಿದ್ದಾರೆಂದರೆ...(ಚಪ್ಪಾಳೆ). ನಿಜಹೇಳಬೇಕೆಂದರೆ ಅಂಬೇಡ್ಕರರನ್ನು ನಾವು ಕರಡು ಸಮಿತಿಯ ಮಂಚೂಣಿಗೆ ತಂದದ್ದು ಮತ್ತು ಅವರನ್ನು ಅದರ ಅಧ್ಯಕ್ಷರನ್ನಾಗಿ ಮಾಡಿದ್ದು ಅದೆಷ್ಟು ಸಮರ್ಪಕವಾಗಿತ್ತೆಂದರೆ, ಖಂಡಿತ ಅದಕ್ಕಿಂತ ಸೂಕ್ತ ನಿರ್ಧಾರ ನಮ್ಮಿಂದ ಸಾಧ್ಯವೇ ಇರಲಿಲ್ಲ, ಆಶ್ಚರ್ಯವೆಂಬಂತೆ ಅಂಬೇಡ್ಕರರು ತಮ್ಮ ಈ ಆಯ್ಕೆಗೆ ಬರೀ ನ್ಯಾಯ ಒದಗಿಸಿದ್ದಷ್ಟೇ ಅಲ್ಲ, ಅವರು ಮಾಡಿರುವಂತಹ ಒಟ್ಟಾರೆ (ಸಂವಿಧಾನ ರಚನೆಯ) ಈ ಕಾರ್ಯಕ್ಕೇ ಅವರು ಒಂದು ರೀತಿಯ ಹೊಳಪನ್ನು ತುಂಬಿದ್ದಾರೆ." ಸಂವಿಧಾನವನ್ನು ಅಂಗೀಕರಿಸಿದ ಸಂದರ್ಭದ ಬಾಬು ರಾಜೇಂದ್ರಪ್ರಸಾದರ ಸಹಜ ಮಾತುಗಳಿವು. ಡಾ.ಬಾಬು ರಾಜೇಂದ್ರಪ್ರಸಾದರ ಈ ಮಾತುಗಳು ಸಂವಿಧಾನ ಸಭಾ ಚರ್ಚಾ ನಡಾವಳಿ ಕಚೇರಿ ದಾಖಲಾತಿ, ದಿನಾಂಕ: 26-11-1949, ಸಂಪುಟ.11, ಪುಟ.994ರಲ್ಲಿ ಅಕ್ಷರಶಃ ದಾಖಲಾಗಿದೆ. ಪ್ರಶ್ನೆ ಎಂದರೆ ಡಾ.ಬಾಬು ರಾಜೇಂದ್ರಪ್ರಸಾದರೇಕೆ ಹೀಗೆ ಹೇಳಿದರು? ವಿಶೇಷವಾಗಿ ಇಂತಹ ಮಹತ್ವದ ಕಾರ್ಯಕ್ಕೆ ಅಂಬೇಡ್ಕರರನ್ನೇಕೆ ಅವರು ಆ ಪರಿ ಕೊಂಡಾಡಿದರು? ಅಂಬೇಡ್ಕರರ ಸಂವಿಧಾನ ರಚನೆಯ ಕಾರ್ಯವನ್ನು ಖುದ್ದು ಬಾಬು ರಾಜೇಂದ್ರಪ್ರಸಾದರು ಗಮನಿಸಿದ್ದರಿಂದಲೇ ತಾನೇ ಅವರು ಹೀಗೆ ಹೇಳಿರುವುದು? ಆಶ್ಚರ್ಯವೆಂದರೆ ರಾಮಬಹದ್ದೂರ್ ರಾಯ್‌ರಂತಹ ಈಗಿನ ಹಿಂದೂತ್ವವಾದಿಗಳು ಸಂವಿಧಾನ ರಚನೆಯ ಇಂತಹ ಪ್ರತ್ಯಕ್ಷ ಐತಿಹಾಸಿಕ ಸಾಕ್ಷಿಗಳ ಹೇಳಿಕೆಗಳತ್ತ, ನಡಾವಳಿಗಳತ್ತ ಕಣ್ಣೆತ್ತಿ ನೋಡುವ ವ್ಯವಧಾನವನ್ನೇ ತೆಗೆದುಕೊಳ್ಳುವುದಿಲ್ಲ!

ಇನ್ನು ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ಎಂ.ಅನಂತಶಯನಂ ಅಯ್ಯಂಗಾರ್‌ರವರ ಹೇಳಿಕೆಯನ್ನು ದಾಖಲಿಸುವುದಾದರೆ ಅಯ್ಯಂಗಾರ್‌ರವರು ಹೇಳುತ್ತಾರೆ "ಡಾ.ಅಂಬೇಡ್ಕರ್‌ರವರು ಸಂವಿಧಾನ ರಚನೆಯ ಕಾರ್ಯವನ್ನು ಕೇವಲ ಅವಲೋಕಿಸಲಷ್ಟೆ ಬಂದರು. ಆದರೆ ಅದರ ರಚನೆಯಲ್ಲಿ ಅವರೇ ಮುಖ್ಯ ಭೂಮಿಕೆ ನಿಭಾಯಿಸಿದರು ಮತ್ತು ಇಂದು ನಾವು ಅಂಗೀಕರಿಸುತ್ತಿರುವ ಸಂವಿಧಾನದ ಶಿಲ್ಪಿಗಳಲ್ಲಿ ಅವರೂ ಕೂಡ ಒಬ್ಬರಾದರು. ಈ ನಿಟ್ಟಿನಲ್ಲಿ ಯಾವ ವ್ಯಕ್ತಿ ಟೀಕೆಯ ಸುರಿಮಳೆ ಸುರಿಸಲು ಮತ್ತು ನಮ್ಮನ್ನು ಅನುಮಾನದಿಂದ ನೋಡಲು ಬಂದರೋ ಅಂತಿಮವಾಗಿ ಅದೇ ವ್ಯಕ್ತಿ ಈ ಸಂವಿಧಾನದ ಹೊಣೆ ಹೊತ್ತುಕೊಂಡರು ಮತ್ತು ಅದನ್ನು ರಚಿಸಿದರು. ಆ ಕಾರಣದಿಂದಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.



ಇದಲ್ಲದೆ ಈ ದಿಸೆಯಲ್ಲಿ ನಾವು ಅವರಿಗೆ ತೋರಿಸಿದ ಪ್ರೀತಿ, ಅದನ್ನು ಅವರು ಒಟ್ಟುಗೂಡಿಸಿಕೊಂಡ ಬಗೆ ಈ ಕಾರಣಕ್ಕಾಗಿ ನಮ್ಮನ್ನೂ ಕೂಡ ನಾವು ಅಭಿನಂದಿಸಿಕೊಳ್ಳಬೇಕಿದೆ."

ಹಿಂದೂತ್ವವಾದಿ ರಾಮ್ ಬಹದ್ದೂರ್ ರಾಯ್ ಅನಂತಶಯನ ಅಯ್ಯಂಗಾರ್‌ರವರ ಈ ಹೇಳಿಕೆಯನ್ನು ಮತ್ತೆ ಮತ್ತೆ ಓದಬೇಕು. ಅಂದಹಾಗೆ ಅನಂತಶಯನಂ ಅಯ್ಯಂಗಾರ್‌ರವರು ಅಂಬೇಡ್ಕರ್‌ರವರ ಬಗ್ಗೆ ಹೀಗೆ ಹೊಗಳಿಕೆ ರೀತಿಯ ಹೇಳಿಕೆ ನೀಡಿದ್ದಾರೆ ಎಂದೆನಿಸುತ್ತದೆಯಾ? ಖಂಡಿತ ಇಲ್ಲ, ಯಾಕೆಂದರೆ ಅನಂತಶಯನಂ ಅಯ್ಯಂಗಾರ್‌ರವರು ದೂರದ ಮದ್ರಾಸಿನವರಾದರೆ ಅಂಬೇಡ್ಕರ್‌ರವರು ಮುಂಬೈನವರು. ಪರಸ್ಪರ ಪರಿಚಿತರಲ್ಲದ ಅವರಿಬ್ಬರು ಮತ್ತು ಸಭೆಯ ಇತರ ಸದಸ್ಯರು ಹೀಗೆ ಒಟ್ಟಿಗೆ ದೆಹಲಿಯಲ್ಲಿ ಸೇರಿದ್ದು ದೇಶದ ಹಿತದೃಷ್ಟಿಯಿಂದ. ಈ ಹಿನ್ನೆಲೆಯಲ್ಲಿ ಹೀಗೆ ಮೆಚ್ಚುಗೆಯ ಮಾತುಗಳನ್ನು ಅಯ್ಯಂಗಾರ್‌ರವರು ಅಂಬೇಡ್ಕರ್ ಅವರ ಬಗ್ಗೆ ಹೇಳಿದ್ದು ಅವರ ಸಂವಿಧಾನ ರಚನೆಯ ಕಾರ್ಯವನ್ನು ನೋಡಿಯೇ ಹೊರತು ಮತ್ತೇನನ್ನು ಅಲ್ಲ ಎಂಬುದು ಎಂಥವರಿಗಾದರೂ ಅರ್ಥವಾಗುತ್ತದೆ.

ಇನ್ನು ಪಂಜಾಬ್‌ನ ಪಂಡಿತ್ ಠಾಕೂರ್ ದಾಸ್ ಭಾರ್ಗವ ಅವರ ಹೇಳಿಕೆಯನ್ನು ಉಲ್ಲೇಖಿಸುವುದಾದರೆ "ಕರಡು ಸಮಿತಿಗೆ ವಂದನೆಗಳನ್ನು ಸಲ್ಲಿಸಲು ಯಾವ ರೀತಿಯ ಪದಗಳನ್ನು ಬಳಸಬೇಕು ಎಂಬುದು ನನಗೆ ಹೊಳೆಯುತ್ತಿಲ್ಲ, ಅದರಲ್ಲೂ ನಿರ್ದಿಷ್ಟವಾಗಿ ಕರಡು ಸಮಿತಿಯ ಅಧ್ಯಕ್ಷರು (ಡಾ.ಅಂಬೇಡ್ಕರ್) ಈ ಸಂವಿಧಾನವನ್ನು ಮುನ್ನಡೆಸಿರುವ ಬಗೆ, ಕಾನೂನು ಬಗೆಗಿನ ಅವರ ಕುಶಾಗ್ರ ಬುದ್ಧಿ, ದಣಿವರಿಯದ ಶ್ರಮ, ಹದಭರಿತ ಸಾಮರ್ಥ್ಯದ ಜೊತೆ ರಚನಾ ಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿನ ಅವರ ದೃಢತೆ ಮತ್ತು ಕೌಶಲ, ಖಂಡಿತ ಅವರಿಗೆ ಕೃತಜ್ಞತೆ ಸಲ್ಲಿಸಲು ಪದಗಳೇ ವಿಫಲಗೊಳ್ಳುತ್ತಿವೆ! ಆ ಕಾರಣದಿಂದ ಅತ್ಯಂತ ಶ್ರೇಷ್ಠ ಮಟ್ಟದ ತಮ್ಮ ಈ ಸಾರ್ವಜನಿಕ ಸ್ಫೂರ್ತಿಯನ್ನು ಇಡೀ ದೇಶಕ್ಕೆ ತೋರಿಸಿಕೊಟ್ಟಿರುವುದರಿಂದ ಡಾ.ಅಂಬೇಡ್ಕರ್‌ರವರಿಗೆ (ನನ್ನ ದುರದೃಷ್ಟ ಇವತ್ತು ಅವರು ಈ ಸದನದಲ್ಲಿ ಉಪಸ್ಥಿತರಿಲ್ಲ, ಆದರೂ ಕೂಡ) ಮನವಿ ಮಾಡಿಕೊಳ್ಳುವುದೇನೆಂದರೆ ಇದುವರೆವಿಗೂ ಅವರು ತಮ್ಮಷ್ಟಕ್ಕೆ ತಾವು ಕೇವಲ ಪರಿಶಿಷ್ಟ ಜಾತಿಯ ನಾಯಕ ಎಂದುಕೊಂಡಿದ್ದರು. ಆದರೆ ಇನ್ನಾದರೂ ಅವರು ಕಾಂಗ್ರೆಸ್ ಸೇರಲಿ. ನಿಜಹೇಳಬೇಕೆಂದರೆ ತಮ್ಮ ಪರಿಶ್ರಮದಿಂದ ನಮ್ಮ ಹೃದಯಗಳಲ್ಲಿ ಅವರು ಇಂದು ಅತ್ಯುನ್ನತ ಸ್ಥಾನ ಅಲಂಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ (ಕಾಂಗ್ರೆಸ್ ಸೇರಿದರೆ) ಅವರು ಕಾಂಗ್ರೆಸ್ ಹೈಕಮಾಂಡ್‌ನಂತಹ ಇದಕ್ಕಿಂತ ಉನ್ನತ ಸ್ಥಾನವನ್ನು ಖಂಡಿತ ಅಲಂಕರಿಸುವರು. ಆ ಭರವಸೆ ನನಗೆ ಇದೆ."

ಮತ್ತೆ ಪ್ರಶ್ನೆ ಏನೆಂದರೆ ಅಂಬೇಡ್ಕರರ ಸಂವಿಧಾನ ರಚನಾ ಕಾರ್ಯದ ಶ್ರೇಷ್ಠತೆಯನ್ನು ಸಾರಲು ಠಾಕೂರ್‌ದಾಸ್ ಭಾರ್ಗವರ ಈ ಮೇಲಿನ ಮಾತುಗಳಿಗಿಂತ ಬೇರೆ ಉದಾಹರಣೆ ಬೇಕೆ? ಅಂಬೇಡ್ಕರರನ್ನು ಹೊಗಳಲೇಬೇಕಿತ್ತು ಆ ಕಾರಣಕ್ಕೆ ಭಾರ್ಗವರು ಈ ಮಾತುಗಳನ್ನು ಹೇಳಿದ್ದಾರೆ ಎಂದುಕೊಳ್ಳೋಣವೆಂದರೆ ಅಂಬೇಡ್ಕರ್ ಅಂದು ಸದನದಲ್ಲಿ ಉಪಸ್ಥಿತರಿರಲೇ ಇಲ್ಲ! ಈ ನಿಟ್ಟಿನಲ್ಲಿ ಇಲ್ಲಿ ಸ್ಪಷ್ಟವಾಗಿ ಭಾರ್ಗವರವರು ಗುರುತಿಸಿರುವುದು ಅಂಬೇಡ್ಕರರನ್ನೋ ಅಥವ ಅವರ ಸಂವಿಧಾನ ರಚನೆಯ ಕಾರ್ಯವನ್ನೋ? ಆಶ್ಚರ್ಯವೆಂದರೆ ಕಾಂಗ್ರೆಸ್ ಪಕ್ಷದ ಭಾರ್ಗವರವರು ತಮ್ಮ ಈ ನಿಷ್ಕಲ್ಮಶ ನುಡಿಯಲ್ಲಿ ತಮ್ಮ ಪಕ್ಷದ ಹೈಕಮಾಂಡ್ ಏನೆಂದುಕೊಳ್ಳುತ್ತದೋ ಎಂಬ ಅಂಜಿಕೆಯ ಲವಲೇಶವೂ ಇಲ್ಲದೆ ತಮ್ಮ ಪಕ್ಷಕ್ಕೆ, ಕಾಂಗ್ರೆಸ್ ಪಕ್ಷಕ್ಕೆ ಅಂಬೇಡ್ಕರರನ್ನು ಆಹ್ವಾನಿಸುತ್ತಾರೆ. ಹಾಗೆಯೇ ನೀವೇ ಹೈಕಮಾಂಡ್ ಆಗಿ ಎಂದು ಕೇಳಿಕೊಳ್ಳುತ್ತಾರೆ!

ಇನ್ನು ಮುನಿಸ್ವಾಮಿ ಪಿಳ್ಳೈ ಎಂಬುವವರು ಹೇಳುತ್ತಾರೆ, "ಪರಿಶಿಷ್ಟ ಜಾತಿಯು ನಂದನಾರ್, ತಿರುಪಳನಾಳ್ವರ್, ತಿರುವಳ್ಳುವರ್ ಹೀಗೆ ಶ್ರೇಷ್ಠ ಸಂತರನ್ನು, ಜ್ಞಾನಿಗಳನ್ನು ನೀಡಿದೆ. ನಿಸ್ಸಂಶಯವಾಗಿ ಡಾ.ಅಂಬೇಡ್ಕರರು ಅಂತಹವರ ಸಾಲಿಗೆ ಸೇರ್ಪಡೆಯಾಗುತ್ತಾರೆ. ಅವಕಾಶ ಸಿಕ್ಕರೆ ಪರಿಶಿಷ್ಟರು ಎಷ್ಟು ಎತ್ತರಕ್ಕೆ ಏರಬಲ್ಲರು ಎಂಬುದನ್ನು ಅಂಬೇಡ್ಕರರು (ತಮ್ಮ ಈ ಸಾಧನೆಯ ಮೂಲಕ) ಇಡೀ ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ." (ರಾಮ್ ಬಹದ್ದೂರ್ ರಾಯ್ ಅಥವ ಅಂತಹ ಮನಸ್ಥಿತಿಯವರು ಇದಕ್ಕುತ್ತರಿಸಬೇಕು!) ಮುಂದುವರಿದು ಸೇಠ್ ಗೋವಿಂದದಾಸ್ ಎನ್ನುವವರು "ಡಾ.ಅಂಬೇಡ್ಕರರನ್ನು 'ವರ್ತಮಾನ ಕಾಲದ ಮನು' ಎನ್ನಬಹುದು" ಎನ್ನುತ್ತಾರೆ! ಹಾಗೆಯೇ ಮತ್ತೋರ್ವ ಸದಸ್ಯರಾದ ಟಿ.ಪ್ರಕಾಶಂ "ತಮ್ಮ ಈ ಕಾರ್ಯದ ಮೂಲಕ ಡಾ.ಅಂಬೇಡ್ಕರರು ತಾವು ಗ್ರೇಟ್ ಬ್ರಿಟನ್ನಿನ ರಾಜನ ಸಲಹೆಗಾರನಾಗಿ ಅಲ್ಲಿಯ ಆಸ್ಥಾನ ವೂಲ್‌ಸ್ಯಾಕ್‌ನಲ್ಲಿ ಕುಳಿತುಕೊಳ್ಳುವಷ್ಟು ಸಮರ್ಥರು ಎಂದು ತೋರಿಸಿಕೊಟ್ಟಿದ್ದಾರೆ" ಎನ್ನುತ್ತಾರೆ. ಕಡೆಯದಾಗಿ ಹೆಚ್.ಜೆ.ಖಾಂಡೇಕರ್ ಎಂಬುವವರ ಹೇಳಿಕೆಯನ್ನು ಇಲ್ಲಿ ದಾಖಲಿಸುವುದಾದರೆ "ಮಾನ್ಯರೆ, ನಾವು ಅಂಬೇಡ್ಕರರಂತಹ ಪ್ರತಿಭಾಶಾಲಿಯಿಂದ ರೂಪಿತಗೊಂಡ ಕಾನೂನನ್ನು ಸ್ವತಂತ್ರ ಭಾರತದಲ್ಲಿ ಇಂದು ಕಾರ್ಯಾಚರಣೆಗಿಳಿಸುತ್ತಿದ್ದೇವೆ. ಹಾಗೆ ಈ ಕಾನೂನನ್ನು ನಾನು ಮಹಾರ್ ಕಾನೂನು ಎನ್ನಲಿಚ್ಛಿಸುತ್ತೇನೆ. ಯಾಕೆಂದರೆ ಡಾ.ಅಂಬೇಡ್ಕರರು ಮಹಾರ್ ಸಮುದಾಯದವರು ಮತ್ತು ಮುಂದೆ 1950 ಜನವರಿ 26ರಂದು ಈ ಕಾನೂನು ಉದ್ಘಾಟನೆಗೊಂಡ... ಮನುವಿನ ಕಾನೂನಿನ ಬದಲು ಮಹಾರರ ... ಹೊಂದುತ್ತೇವೆ. ಮನುವಿನ ಕಾನೂನಿನ ಅಡಿ... ದೇಶದಲ್ಲಿ ಸುಖ ನೆಮ್ಮದಿಯೇ ಇರಲಿಲ್ಲ, ಆದರೆ ... ಕಾನೂನು ಖಂಡಿತ ಈ ದೇಶವನ್ನು ಸ್ವ... ಮಾಡುತ್ತದೆ... ನನಗೆ ಆ ಭರವಸೆ ಇದೆ." ಹಿಂದೂತ್ವವಾದಿಗಳು, ಅಂಬೇಡ್ಕರರ ಸಂವಿಧಾನ ಸಾ... ಅಲ್ಲಗಳೆಯುವವರು ಖಾಂಡೇಕರರ "ಅಂಬೇಡ... ಪ್ರತಿಭಾಶಾಲಿಯಿಂದ ರೂಪಿತಗೊಂಡ ಕಾನೂನ... ಭಾರತದಲ್ಲಿ ಇಂದು ಕಾರ್ಯಾಚರಣೆಗಿಳಿಸುತ್ತಿದ್ದೇ... ಹೇಳಿಕೆಯನ್ನು ಮತ್ತೆ ಮತ್ತೆ ಗಮನಿಸಬೇಕು ಸ... ಸತ್ತಿರುವ ಖಾಂಡೇಕರರನ್ನು ಗೋರಿಯಿಂದ ಎಬ್ಬ... ಹೀಗೆ ಹೇಳಿದಿರಿ ಎಂದು ತರಾಟೆಗೆ ತೆಗೆದುಕೊ... ಸಾಧ್ಯವಾದರೆ ಅವರನ್ನು ಈ ಹೇಳಿಕೆ ವಾಪಸ್ ಪಡ... ಎಂದು ಕೇಳಿಕೊಳ್ಳಬೇಕು! ಆಗಷ್ಟೆ ರಾಮ್ ಬಹ... ರಾಯ್‌ರಂತಹವರ ಹೇಳಿಕೆಗಳಿಗೆ ಅರ್ಥ ಬರು...

ಈ ಹಿನ್ನೆಲೆಯಲ್ಲಿ ಇಲ್ಲಿ ಉಲ್ಲೇಖಿಸಿರುವ ... ಹೇಳಿಕೆಗಳ ಪ್ರಕಾರ ಅರ್ಥವಾಗುವುದೆಂದರೆ ಅಂ... ಸಂವಿಧಾನ ರಚನೆಯ ಕಾರ್ಯ, ಶ್ರಮ, ತೆಗೆ... ರಿಸ್ಕ್, ಪ್ರತಿಯೊಂದೂ ಅಂದಿನ ಸದಸ್ಯರಿಗೆ ಸ್ಪಷ್ಟವಾಗಿ... ಮತ್ತು ಅದನ್ನು ಅವರು ನಿಷ್ಕಲ್ಮಶವಾಗಿ ... ಹೋಗಿದ್ದಾರೆ. ಅಂದಹಾಗೆ ಅಂಬೇಡ್ಕರರ ಈ ... ಕಾರ್ಯಕ್ಕೆ ಅಂದು ವಿವಿಧ ಪಕ್ಷಗಳ, ದೇಶದ... ಭಾಗಗಳ, ವಿವಿಧ ಸಮೂಹಗಳ ಸದಸ್ಯರು ... ಅಭಿನಂದನಾ ಆ ನುಡಿಗಳೇ ಒಂದು ಉದ್ಧ... ತ್ತದೆಂದರೆ...! ಈ ಎಲ್ಲ ಅಭಿನಂದನೆಯ ನ... ಸಂವಿಧಾನ ರಚನೆಯ ಸಂಪೂರ್ಣ ನಡಾವಳಿ, ... ವಾಗ್ವಾದ, ಸಲ್ಲಿಸಿದ ತಿದ್ದುಪಡಿ, ಅದಕ್ಕೆ ಅಂಬೇ... ನೀಡಿರುವ ಕಾನೂನು ಸ್ಫೂರ್ತಿಯ ಉತ್ತರ ಎಲ್ಲ... ಭಾರತ ಸರ್ಕಾರವೇ ಪ್ರಕಟಿಸಿರುವ "ಡಾ.ಅಂಬೇಡ್ಕರ್... ಸಂವಿಧಾನದ ಪ್ರಧಾನ ಶಿಲ್ಪಿ" ಎಂಬ ಕೃತಿಯಲ್ಲಿ ಭ... ಮತ್ತೂ ಒಂದು ವಾಸ್ತವವೆಂದರೆ ಅಂಬೇಡ್ಕರರ ಈ ... ರಚನೆಯ ಕಾರ್ಯಕ್ಕೆ, ಅವರ ಕಾನೂನಿನ ಜ್ಞಾನ... ಕಾಂಗ್ರೆಸ್ ಪಕ್ಷವೇ ಅಂದು ನೀಡಿದ ಗೌರವ ... ಅದು ತನ್ನ ಸಂಪುಟದಲ್ಲಿ ಈ ದೇಶದ ಪ್ರಥಮ ... ಮಂತ್ರಿಯಾಗಿ ನೇಮಿಸಿಕೊಂಡಿದ್ದು! ಹೀಗಿರುವಾ... ಬಹದ್ದೂರ್ ರಾಯ್‌ರಂತಹವರು ಈಗ ಹೀಗೆ ಹೇ... ನೀಡುವುದು ದ್ವೇಷಪೂರಿತ. ಇಂತಹ ದ್ವೇಷ... ಹೇಳಿಕೆಗಳಿಗೆ ಕಾರಣ? ಉತ್ತರ ಮತ್ತದೇ ಖಾಂ... ಹೇಳಿಕೆಯಲ್ಲಿದೆ. ಅಂದರೆ ಮನುಸ್ಮೃತಿಯ ಕಾ... ಹೊರಟುಹೋಗಿ ಮಹಾರರ ಕಾನೂನು ಜಾರಿ... ಇದಕ್ಕೆಲ್ಲ ಕಾರಣ.

ಅಂದರೆ ಕಾನೂನಿನತ್ತಲೂ ಅಸ್ಪೃಶ್ಯತಾಚರಣೆಯ ... ಈ ನಿಟ್ಟಿನಲ್ಲಿ ಇಂತಹ ನೋಟದ ಮೂಲಕ ಈ ... ಇಂತಹ ಮಹತ್ವದ ಸಾಧನೆಯನ್ನು ಅಳೆಯುವುದು ... ಸರಿ? ಯಾಕೆಂದರೆ ಸಂವಿಧಾನ, ಇದು ಬರೇ ಅಂ... ರೊಬ್ಬರ ಸಾಧನೆಯಲ್ಲ ತನ್ನನ್ನು ತಾನು ಒಂದು ಸ... ಹಳಿಗೆ ತಂದುಕೊಂಡ ಈ ದೇಶದ ಒಟ್ಟಾರೆ ... ಇದು. ಭಾರತ ಸರ್ಕಾರದ ಪ್ರಕಾರವೇ ಅಂಬೇ... ಅಂತಹ ಸಾಧನೆಯ 'ಪ್ರಧಾನ ಶಿಲ್ಪಿ'ಯಾಗಿದ್ದಾರೆ... ಈ ದಿಸೆಯಲ್ಲಿ ಇಂತಹ ಸಾಧನೆಗೆ ಅಪಮಾನ ಮಾಡ... ಅಂಬೇಡ್ಕರರಂತಹ ಅಪರೂಪದ ಪ್ರತಿಭೆ... ಅಗೌರವಿಸುವುದು, ಅಕ್ಷರಶಃ ತಕ್ಕುದಲ್ಲ. ಇಂತಹ... ಚಾಳಿ ನಿಲ್ಲಲಿ. ಅಂಬೇಡ್ಕರರನ್ನು, ಅವರ ಸಾಧನೆ... ಅಸ್ಪೃಶ್ಯತಾಚರಣೆಯ ಹಿನ್ನೆಲೆಯಲ್ಲಿ ನೋಡುವ ಹಿಂ... ಚಾಳಿ ತೊಲಗಲಿ ಎಂಬುದಷ್ಟೆ ಸದ್ಯದ ಕಳಕಳಿ.

● ರಘೋತ್ತಮ ಹ...

ಅಂಬಿ ಎಂಬ ಹೊಣೆಗೇಡಿ ರಾಜಕಾರಣಿ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com


ಕನ್ನಡ ಚಿತ್ರರಂಗ ಕಂಡಿರುವ ಹಲವು ಉತ್ತಮ ನಟರಲ್ಲಿ ಅಂಬರೀಶ್ ಕೂಡ ಒಬ್ಬರು. 'ನಾಗರಹಾವು' ಮತ್ತು 'ರಂಗನಾಯಕಿ' ತರಹದ ಚಿತ್ರಗಳಲ್ಲಿ ಅವರ ಅಭಿನಯವನ್ನು ಮೆಚ್ಚದೇ ಇರುವವರೇ ಇಲ್ಲವೇನೋ. ಆದರೆ ರಾಜಕೀಯ ರಂಗದಲ್ಲಿ ಅವರ ಸಾಧನೆ ಅತ್ಯಲ್ಪದ್ದು. ಅಂಬರೀಶ್ ಅವರಿಗೆ ಸಿಕ್ಕಿರುವ ಜನಪ್ರಿಯತೆ ಮತ್ತು ಮನ್ನಣೆ ಹಾಗೂ ರಾಜಕೀಯದಲ್ಲಿ ಅವರಿಗೆ ಸಿಕ್ಕ ಸ್ಥಾನಮಾನ ಮತ್ತು ಅಧಿಕಾರಕ್ಕೆ ಹೋಲಿಸಿದರೆ ಅವರಿಂದ ರಾಜ್ಯಕ್ಕೆ ಆದ ಪ್ರಯೋಜನ ಅಷ್ಟಕ್ಕಷ್ಟೇ.

ಅಂಬಿಯನ್ನು ಸಂಪುಟದಿಂದ ಕೈಬಿಟ್ಟಿದ್ದಕ್ಕೆ ಕಳೆದ ಮೂರು ದಿನಗಳಿಂದ ಅಂಬಿ 'ಭಕ್ತರು' ಮಂಡ್ಯದಲ್ಲಿ ಗದ್ದಲ ಮಾಡುತ್ತಿದ್ದಾರೆ. ಅವರ ಜೊತೆಗೆ ಕನ್ನಡ ಚಿತ್ರರಂಗದ ಕೆಲವರು ಮಂಡ್ಯ ಜಿಲ್ಲೆ, ರಾಜ್ಯ ಮತ್ತು ಕಾಂಗ್ರೆಸ್ ಪಕ್ಷ ಉದ್ಧಾರವಾಗಬೇಕಾದರೆ ಅಂಬಿಯನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಬೇಕೆಂದು ಟಿವಿ ಚಾನೆಲ್‌ಗಳಲ್ಲಿ ವಾದ ಮಾಡುತ್ತಿದ್ದಾರೆ. ಸ್ವತಃ ಅಂಬಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುವ ಡ್ರಾಮಾ ಆಡಿದ್ದಾರೆ. ಆದರೆ ವಾಸ್ತವವಾಗಿ ಅಂಬಿಯಿಂದ ಮಂಡ್ಯ ಜಿಲ್ಲೆಗಾಗಲಿ, ರಾಜ್ಯಕ್ಕಾಗಲಿ, ಕಾಂಗ್ರೆಸ್ ಪಕ್ಷಕ್ಕಾಗಲಿ ಆಗಿರುವ ಲಾಭ ಏನು ಎಂದು ನೋಡಿದರೆ ಅಚ್ಚರಿ ಆಗುತ್ತದೆ.

ಯಾಕೆಂದರೆ ಮೂರು ಬಾರಿ ಸಂಸತ್ತಿಗೆ ಗೆದ್ದ ಅಂಬರೀಶ್ ಅಲ್ಲಿ ತಮ್ಮ ಕ್ಷೇತ್ರದ ಮತ್ತು ರಾಜ್ಯದ ಕುಂದುಕೊರತೆಗಳನ್ನು ನಿವಾರಿಸಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ, ಬದಲಾಗಿ ಸಂಸತ್ತಿನ ನಡಾವಳಿಯಲ್ಲಿ ಭಾಗವಹಿಸದೆ ಹೆಚ್ಚು ಕಾಲ ಗೈರುಹಾಜರಾದವರ ಪಟ್ಟಿಯಲ್ಲಿ ಕಂಗೊಳಿಸಿದ್ದರು. ಆದರೂ ಯುಪಿಎ 1 ಸರ್ಕಾರದಲ್ಲಿ ಅವರಿಗೆ ವಾರ್ತಾ ಮತ್ತು ಪ್ರಸಾರ ಇಲಾಖೆಯ ಮಂತ್ರಿ ಹುದ್ದೆಯನ್ನು ಕೊಡಲಾಗಿತ್ತು. ಆ ಹುದ್ದೆಯನ್ನು ಅಂಬಿ ಸರಿಯಾಗಿ ನಿಭಾಯಿಸಿದ ಕುರುಹುಗಳೇ ಇಲ್ಲ. ತಮಿಳುನಾಡು ಕಾವೇರಿ ನೀರು ಹಂಚಿಕೆ ಬಗ್ಗೆ ತಕರಾರು ಎತ್ತಿದಾಗ ಅದನ್ನೇ ನೆಪ ಮಾಡಿಕೊಂಡ ಅಂಬಿ ತನ್ನ ಸಚಿವ ಸ್ಥಾನಕ್ಕೆ ರಾಜೀನಾಮೆ ಗುಜರಾಯಿಸಿ ಮಂಡ್ಯದ ಜನರಲ್ಲಿ 'ಹೀರೋ' ಆಗಿ ಮೆರೆಯಲು ಯತ್ನಿಸಿದರು. ಆ ರಾಜೀನಾಮೆಯನ್ನು ಮನಮೋಹನ್ ಸಿಂಗ್ ಅಂಗೀಕರಿಸಲಿಲ್ಲ. ಅದನ್ನು ಯಾಕೆ ಅಂಗೀಕರಿಸಿಲ್ಲ ಎಂದು ಪ್ರಶ್ನಿಸದ ಅಂಬಿ ತನ್ನ ಎಂದಿನ ಉಡಾಫೆ ಪ್ರವೃತ್ತಿಯನ್ನು ಮೆರೆದಿದ್ದರು.

ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ವಿರೋಧ ಪಕ್ಷಗಳು "ಅಂಬರೀಶ್ ಅವರನ್ನು ಗೆಲ್ಲಿಸಿದರೆ ಅವರು ನಿಮ್ಮ ಕೈಗೆ ಸಿಗದೆ ತಮ್ಮ ಜೆಪಿ ನಗರದ ಮನೆಯಲ್ಲಿರುತ್ತಾರೆ" ಎಂದು ಎಚ್ಚರಿಸಿದ್ದರು. ಆಗ ಅಂಬಿ ಮತ್ತು ಅವರ ಪತ್ನಿ ಸುಮಲತಾ "ಇಲ್ಲಾ, ನಾವು ಇಲ್ಲಿನ ಜನರ ನಡುವೆಯೇ ಇರುತ್ತೇವೆ" ಎಂದು ಮಾತು ಕೊಟ್ಟರಲ್ಲದೆ ಮಂಡ್ಯ ನಗರದಲ್ಲಿ ಒಂದು ಮನೆಯನ್ನೂ ಬಾಡಿಗೆಗೆ ಹಿಡಿದರು. ಆ ಮನೆಯಲ್ಲಿ ಸುಮಲತಾ ಅಡುಗೆ ಮಾಡುತ್ತಿದ್ದದ್ದು, ಅಂಬಿ ಸ್ಥಳೀಯರನ್ನು ಮಾತನಾಡಿಸುತ್ತಿದ್ದದ್ದು ಎಲ್ಲವೂ ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾದವು. ಸುಮಲತಾ ಅವರು "ವಾರಕ್ಕೊಮ್ಮೆ ನಾನು ಮಂಡ್ಯಕ್ಕೆ ಬಂದು ಜನರ ಸಮಸ್ಯೆಗಳನ್ನು ಆಲಿಸುತ್ತೇನೆ" ಎಂದೆಲ್ಲ ಭರವಸೆ ನೀಡಿದ್ದರು. ಮತದಾರರು ಅದನ್ನೆಲ್ಲ ನಂಬಿ, ಅಂಬಿಯ ಸ್ಟಾರ್‌ಗಿರಿಗೆ ಮಾರುಹೋಗಿ, ಜಾತಿ ವ್ಯಾಮೋಹಕ್ಕೆ ಬಲಿಯಾಗಿ ಅವರನ್ನು ದೊಡ್ಡ ಅಂತರದಿಂದ ಗೆಲ್ಲಿಸಿದರು. ಆದರೆ ಆಮೇಲೆ ಆದದ್ದೇನು? ಚುನಾವಣಾ ಫಲಿತಾಂಶ ಹೊರಬಿದ್ದ ನಂತರ ಬೆಂಗಳೂರಿನ ತಮ್ಮ ಜೆಪಿ ನಗರದ ಮನೆಗೆ ಹಿಂದಿರುಗಿದ ಅಂಬಿ ಮತ್ತು ಸುಮಲತಾ ಅವತ್ತಿನಿಂದ ತಮ್ಮ ಮಂಡ್ಯದ ಮನೆಗೆ ಕಾಲಿಟ್ಟಿಲ್ಲ. ಹಲವರ ಪ್ರಕಾರ ಕಳೆದ ಆರು ತಿಂಗಳುಗಳಿಂದ ಅದರ ಬಾಡಿಗೆಯನ್ನೂ ಕಟ್ಟಿಲ್ಲವಂತೆ.

ಕೇಂದ್ರದಲ್ಲಿ ಅಂಬಿ ಸಚಿವರಾಗಿ ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇತ್ತಾದರೂ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲೇಬೇಕು ಎಂಬ ಒತ್ತಾಯಗಳು ಶುರುವಾದವು. ಸಿದ್ದರಾಮಯ್ಯ ಅವರಿಗೆ ವಸತಿ ಇಲಾಖೆಯೊಂದಿಗೆ ಜಿಲ್ಲಾ ಮಂತ್ರಿ ಸ್ಥಾನವನ್ನೂ ದಯಪಾಲಿಸಿದರು. ಅದಾದ ಹಲವು ದಿವಸಗಳ ನಂತರ ಅಂಬಿ ಮಂಡ್ಯದ ಡಿಸಿ ಕಚೇರಿ ಆವರಣದಲ್ಲೇ 'ಜಿಲ್ಲಾ ಮಂತ್ರಿಯ ಕಚೇರಿ'ಯನ್ನು ಉದ್ಘಾಟಿಸಿದರು. ಆದರೆ ಅವರು ತಮ್ಮ ಆ ಕಚೇರಿಯಲ್ಲಿ ಒಂದೇ ಒಂದು ಸಭೆಯನ್ನೂ ಕಳೆದ ಮೂರು ವರ್ಷಗಳಲ್ಲಿ ನಡೆಸಿಲ್ಲ. ನಮ್ಮ ಮಂಡ್ಯ ವರದಿಗಾರ ನಾಗೇಶ್ ಅವರು ಹಲವಾರು ಬಾರಿ ಬರೆದಿರುವಂತೆ ಜಿಲ್ಲಾ ಅಧಿಕಾರಿಗಳೊಂದಿಗೆ ಅಂಬಿಯ ಸಭೆ ಮತ್ತು ಚರ್ಚೆಗಳೆಲ್ಲ ನಡೆಯುತ್ತಿದ್ದದ್ದು ಅವರ ಭಂಟ ಚಂದ್ರಶೇಖರನ 'ಅಮರಾವತಿ ಹೊಟೇಲ್'ನಲ್ಲಿ. ಮಂಡ್ಯದಲ್ಲಿ ವಾಸ ಇಲ್ಲ, ಆಫೀಸಿಗೆ ಭೇಟಿ ಇಲ್ಲ ಎಂದಾದರೆ ಜನ ತಮ್ಮ ಪ್ರತಿನಿಧಿ



ಅಂಬರೀಶರನ್ನು ಸಂಧಿಸುವುದಾದರೂ ಎಲ್ಲಿ?

ಕಳೆದ ವಾರ ನಮ್ಮ ನಾಗೇಶ್ ಬರೆದಂತೆ ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಹಲವಾರು ಸಮಸ್ಯೆಗಳಿಗೆ ತುತ್ತಾಗಿದೆ. ಉದಾಹರಣೆಗೆ ಕಳೆದ ಒಂದು ವರ್ಷದಲ್ಲಿ 150ಕ್ಕೂ ಹೆಚ್ಚು ರೈತರು ಮಂಡ್ಯ ಜಿಲ್ಲೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಅಂಥವರ ಮನೆಗಳಿಗೆ ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ, ಎಸ್.ಎಂ. ಕೃಷ್ಣ ರಮ್ಯಾ ಇತ್ಯಾದಿ ನಾಯಕರು ಭೇಟಿ ನೀಡಿ ತಮ್ಮ ಕೈಲಾದಷ್ಟು ಧನಸಹಾಯ ಮಾಡಿದ್ದಾರೆ. ಆದರೆ 'ಮಂಡ್ಯದ ಗಂಡು' ಅಂಬಿ ಮೃತ ರೈತರ ಮನೆಗೆ ಭೇಟಿ ನೀಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಎಐಸಿಸಿ ನಾಯಕ ರಾಹುಲ್ ಗಾಂಧಿ ಭೇಟಿ ಕೊಟ್ಟಾಗ ಮಾತ್ರ.

ಜೊತೆಗೆ ಒಂದು ಕಾಲದಲ್ಲಿ ಮಂಡ್ಯ ಜಿಲ್ಲೆಗೆ ಆಧಾರಸ್ತಂಭದಂತಿದ್ದ ಮೈಶುಗರ್ ಕಾರ್ಖಾನೆ ಈಗ ಬಾಗಿಲು ಮುಚ್ಚುವ ಅಂಚಿನಲ್ಲಿದೆ. ಈ ವರ್ಷ ಅದು ಕಬ್ಬು ಅರೆಯುವ ಕೆಲಸವನ್ನೇ ಪ್ರಾರಂಭಿಸಿಲ್ಲ. ಕಾರ್ಖಾನೆಯಿಂದ ಹಣ ಸಿಗದೇ ಅಲ್ಲಿನ ಕಾರ್ಮಿಕರು ಮತ್ತು ರೈತರು ತಿಂಗಳುಗಟ್ಟಲೆ ಪ್ರತಿಭಟನೆಗಳನ್ನು ನಡೆಸಿದ್ದಾರೆ. ಆದರೆ ಅವರ ಯಾವ ಬೇಡಿಕೆಯೂ ಅಂಬಿಯ ಕಿವಿಗಳ ಮೇಲೆ ಬೀಳಲೇ ಇಲ್ಲ.

ಈ ಹಿಂದೆ ನಮ್ಮ ಅಂಕಣಕಾರ ಎಚ್. ವಾಸು ಬರೆದಂತೆ ಮಂಡ್ಯದ ಹಾಲಹಳ್ಳಿ ಕೆರೆ ಸ್ಲಮ್ ಜನರು ಕಳೆದ ಹಲವಾರು ವರ್ಷಗಳಿಂದ ಮನೆಗಳನ್ನು ನಿರ್ಮಿಸಿಕೊಡಬೇಕೆಂದು ಹೋರಾಟ ನಡೆಸಿದ್ದರು. ಅದರ ಫಲವಾಗಿ ಕೆಲವರ್ಷಗಳ ಹಿಂದೆ ಆ ಪ್ರದೇಶದಲ್ಲಿ 720 ಮನೆಗಳನ್ನು ನಿರ್ಮಿಸಲು ಹಣವೂ ಬಿಡುಗಡೆ ಆಗಿತ್ತು. ಸ್ವತಃ ಅಂಬಿಯೇ ವಸತಿ ಇಲಾಖೆಯ ಮಂತ್ರಿ ಆಗಿದ್ದರೂ ಇಲ್ಲಿಯತನಕ ಅಲ್ಲಿ ಯಾವ ನಿರ್ಮಾಣ ಕಾಮಗಾರಿಯೂ ಪ್ರಾರಂಭವಾಗಿಲ್ಲ. ಇವೆಲ್ಲ ಅಂಬಿ ಶಾಸಕನಾಗಿ, ವಸತಿಮಂತ್ರಿಯಾಗಿ, ಜಿಲ್ಲಾ ಮಂತ್ರಿಯಾಗಿ ಮಂಡ್ಯದ ಜನರಿಗೆ ಸಲ್ಲಿಸಿರುವ 'ಸೇವೆ'.

ಹೋಗಲಿ, ತನ್ನ ಜಿಲ್ಲೆಗಲ್ಲದಿದ್ದರೂ ತನ್ನ ರಾಜ್ಯದ ಜನರಿಗಾಗಿ ಅಂಬಿ ಯಾವ ಕೊಡುಗೆ ನೀಡಿದ್ದಾರೆ ಎಂದು ನೋಡಿದರೆ ಅಲ್ಲೂ ನಿರಾಶೆ ಮೂಡುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಅಂಬಿ ಎದ್ದೇಳುವುದೇ 12 ಗಂಟೆಯ ನಂತರ. ಅವರು ರೆಡಿಯಾಗಿ ಮನೆಯಿಂದ ಹೊರಡುವುದೇ ಮಧ್ಯಾಹ್ನ ಎರಡು ಗಂಟೆಗೆ. ಹೀಗಿದ್ದರೂ ಅಂಬಿ ತನ್ನ ಇಲಾಖೆಯ ಹಲವು ಸಭೆಗಳಲ್ಲಿ ಭಾಗವಹಿಸಿದ್ದರು ಎಂಬುದೇ ಅಚ್ಚರಿ ಮೂಡಿಸುತ್ತದೆ. ಆದರೆ ವಾಸ್ತವವೇನೆಂದರೆ ಅವರು ಯಾವ ನಿರ್ಧಾರವನ್ನೂ ತೆಗೆದುಕೊಳ್ಳದೆ ಕಾಲದೂಡಿದರು. ತನ್ನ ಕೆಲ ಹಿಂಬಾಲಕರಿಗೆ ಒಂದಿಷ್ಟು ಕೆಲಸ ಮಾಡಿಕೊಟ್ಟಿದ್ದು ಬಿಟ್ಟರೆ ಅಂಬಿ ರಾಜ್ಯದ ಜನರಿಗೆ ಉಪಯೋಗ ಆಗುವಂತಹ ಕೆಲಸಗಳನ್ನು ಮಾಡಲೇ ಇಲ್ಲ. ಅದೇ ಇವತ್ತು ಅವರ ಸಚಿವ ಸ್ಥಾನಕ್ಕೆ ಕುತ್ತಾಗಿರುವುದು.


ಹೀಗೆ ತನ್ನ ಊರಿಗೂ ಉಪಯೋಗವಾಗಲಿಲ್ಲ, ತನ್ನ ರಾಜ್ಯಕ್ಕೂ ನೆರವಾಗಲಿಲ್ಲ ಎಂಬಂತಿದ್ದ ಅಂಬಿ ಕಾಂಗ್ರೆಸ್ ಪಕ್ಷಕ್ಕೆ ಸಲ್ಲಿಸಿದ ಸೇವೆಯಾದರೂ ಎಂಥದ್ದು? ಹೋದ ವಾರ ನಾಗೇಶ್ ವರದಿ ಮಾಡಿದಂತೆ "ಅಂಬಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಕಟ್ಟುವ ಪ್ರಯತ್ನಕ್ಕೆ ಕೈಹಾಕಲೇ ಇಲ್ಲ. ಮಂತ್ರಿಯಾಗಿ ತನ್ನ ಸ್ವಕ್ಷೇತ್ರ ಮಂಡ್ಯ ತಾಲ್ಲೂಕು ಪಂಚಾಯತ್ ಅಧಿಕಾರವನ್ನೇ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇನ್ನು ಜಿ.ಪಂ. ಚುನಾವಣೆಯಲ್ಲಿ ಅಂಬರೀಶ್ ಸಾಧನೆ ಶೂನ್ಯ. ಈತನ ಕ್ಷೇತ್ರದಲ್ಲೇ ಎಲ್ಲಾ ಜಿ.ಪಂ. ಅಭ್ಯರ್ಥಿಗಳು ಹೀನಾಯವಾಗಿ ಸೋತುಹೋದರು. ಅಂಬಿಯ ನಾಯಕತ್ವ ಅಷ್ಟರಮಟ್ಟಿಗೆ ಅಸಮರ್ಥತೆಗೆ ಬಂದು ಕೂತಿದೆ. ಮಂತ್ರಿಯಾದ ನಂತರ ಒಮ್ಮೆಯೂ ಕಾಂಗ್ರೆಸ್ ಕಚೇರಿಗೆ ಕಾಲಿಡದ ಅಂಬರೀಶ್ ಅದು ಹೇಗೆ ಪಕ್ಷ ಕಟ್ಟಲು ಸಾಧ್ಯ? ಜಿಲ್ಲಾಧ್ಯಕ್ಷ ಆತ್ಮಾನಂದ ಸೇರಿದಂತೆ ಎಸ್.ಎಂ. ಕೃಷ್ಣ ಬಣದ ಮುಖಂಡರೊಡನೆ ಸಾಮರಸ್ಯ ಸಾಧಿಸದ ಅಂಬರೀಶ್‌ಗೆ ಕಾಂಗ್ರೆಸ್ ಪಕ್ಷವನ್ನು ಕಟ್ಟುವ ಮನಸ್ಸಿಲ್ಲ. ಲೋಕಸಭೆ ಚುನಾವಣೆ ಸೇರಿದಂತೆ ಹಲವು ಸ್ಥಳೀಯ ಚುನಾವಣೆಗಳಲ್ಲಿ ಜೆಡಿಎಸ್ ಪಕ್ಷದ ಜೊತೆ ಕೈಜೋಡಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿರುವ ಕೀರ್ತಿ ಅಂಬರೀಶ್‌ಗೆ ಸಲ್ಲುತ್ತದೆ." ಒಟ್ಟಾರೆ ಅಂಬಿಯಿಂದಾಗಿ ಕಾಂಗ್ರೆಸ್ ಪಕ್ಷವೂ ಉದ್ಧಾರವಾಗಿಲ್ಲ.

ಆದರೂ ಇಂತಹ ಅಂಬಿ ತನ್ನ ಹವ್ಯಾಸಗಳಿಂದಾಗಿಯೇ ಎರಡು ವರ್ಷಗಳ ಹಿಂದೆ ಆಸ್ಪತ್ರೆ ಸೇರಿದಾಗ, ಆನಂತರ ಅಲ್ಲಿ ಗುಣಮುಖರಾದರೂ ಅಭಿಮಾನಿಗಳ 'ಕಾಟ'ದಿಂದ ತಪ್ಪಿಸಿಕೊಳ್ಳಲು ಸಿಂಗಾಪುರದ ಆಸ್ಪತ್ರೆ ಸೇರಿದಾಗ ಅವರ ಎಲ್ಲಾ ಖರ್ಚುವೆಚ್ಚಗಳನ್ನು ಸರ್ಕಾರದ ತಿಜೋರಿಯಿಂದ ಭರಿಸಲಾಗಿತ್ತು. ಅದೂ ಅಷ್ಟಿಷ್ಟಲ್ಲ, ಬರೋಬ್ಬರಿ 1.16 ಕೋಟಿ ರೂಪಾಯಿಗಳು.

ಅಂಬಿಯ ಸ್ಟಾರ್‌ಗಿರಿ, ಒಕ್ಕಲಿಗರ ಬೆಂಬಲದ ಜೊತೆಗೆ ಅಂಬಿ ನಿಜವಾಗಲೂ ಜನೋಪಯೋಗಿ ಆಗಿ ತಮ್ಮ ಕರ್ತವ್ಯ ನಿಭಾಯಿಸಿದ್ದರೆ ಇವತ್ತು ಅವರ ಪರವಾಗಿ ಸಾವಿರಾರು ಜನ ಬೀದಿಗೆ ಬರುತ್ತಿದ್ದರು. ಅಷ್ಟೇ ಅಲ್ಲ, ಹಾಲಹಳ್ಳಿಯ ಸ್ಲಂನಲ್ಲಿ ವಾಸಿಸುತ್ತಿರುವ ಸಾವಿರಾರು ಜನರೇ ತಮ್ಮ ಪೋಷಕನ ಪರವಾಗಿ ಹೋರಾಡುತ್ತಿದ್ದರು. ಆದರೆ ಮೊನ್ನೆ ಅಂಬಿಯ ಪರವಾಗಿ ಮಂಡ್ಯದಲ್ಲಿ ಚೀರಾಡುತ್ತಿದ್ದವರ, ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಬೆದರಿಸುತ್ತಿದವರ ಸಂಖ್ಯೆ ಇನ್ನೂರನ್ನೂ ದಾಟಲಿಲ್ಲ. ಅವರಲ್ಲಿ ಕೆಲವರು ಅಂಥ ಭಕ್ತರಿದ್ದರೆ ಹೆಚ್ಚಿನವರು ಅಮರಾವತಿ ಚಂದ್ರಶೇಖರ್ ಹಣ ಕೊಟ್ಟು ಬೀದಿಗಿಳಿಸಿದ್ದ ಪುಂಡರೇ ಇದ್ದರು.

ಇದು ಬೆಳ್ಳಿತೆರೆಯ ಮೇಲೆ ಹೀರೋ ಆಗಿ ಮೆರೆದಿದ್ದ ಅಂಬರೀಶ್ ಈಗ ರಾಜಕಾರಣಿಯಾಗಿ ಜೀರೋ ಸಾಧಿಸಿದ ಪರಿ ಎಂದರೆ ತಪ್ಪಾಗಲಾರದು.

ಸಚಿವ ಸ್ಥಾನ ಹೋಯಿತು ಅಥವಾ ಸಿಗಲಿಲ್ಲ ಎಂಬ ಕಾರಣಕ್ಕೆ ಅಂಬಿಯ ಭಕ್ತರು, ಶ್ರೀನಿವಾಸ್



ಪ್ರಸಾದರ ಹಿಂಬಾಲಕರು, ಖಮರುಲ್ ಇಸ್ಲಾಮರ ಬೆಂಬಲಿಗರು, ಇತರರ ಪುಂಡರು ರಾಜ್ಯದಾದ್ಯಂತ ಗಲಾಟೆ ಮಾಡುತ್ತಿರುವಾಗ ಅತ್ಯಂತ ಸಜ್ಜನಿಕೆಯಿಂದ ವರ್ತಿಸಿದ್ದು ಕಿಮ್ಮನೆ ರತ್ನಾಕರ್ ಅವರು ಮಾತ್ರ. ಅವರು ತಮ್ಮ ಫೇಸ್‌ಬುಕ್‌ನಲ್ಲಿ ಹೀಗೆ ಬರೆದಿದ್ದರು:

"ಸಚಿವನಾಗಿ ಮೊದಲ ದಿನದಿಂದಲೂ ಶಿಕ್ಷಣ ಕ್ಷೇತ್ರಕ್ಕೆ ಪ್ರಾಮಾಣಿಕತೆಯಿಂದ ಶ್ರಮಿಸಿದ್ದೇನೆ. ಭ್ರಷ್ಟರಹಿತ ಪಾರದರ್ಶಕ ಆಡಳಿತ ಕೊಟ್ಟಿರುವ ತೃಪ್ತಿ ನನಗಿದೆ. ಸರ್ಕಾರದ ಅರ್ಧ ಭಾಗ ಸರ್ಕಾರಿ ನೌಕರರು ಶಿಕ್ಷಣ ಇಲಾಖೆ ಅಡಿ ಬರುತ್ತಾರೆ, ಇಂತಹ ದೊಡ್ಡ ಇಲಾಖೆಯ ಸುಧಾರಣೆಯ ಜವಾಬ್ದಾರಿ ನನ್ನ ಮೇಲೆ ಇತ್ತು. ಅದನ್ನು ನಾನು ನನ್ನ ಶಕ್ತಿಮೀರಿ ಪ್ರಯತ್ನ ಮಾಡಿದ್ದೇನೆ. ಸಹಕರಿಸಿದ ಎಲ್ಲ ನನ್ನ ಸಹಮಿತ್ರರಿಗೆ ವಂದನೆ ಹೇಳುತ್ತ ತೀರ್ಥಹಳ್ಳಿ ಕ್ಷೇತ್ರಕ್ಕೆ ಮೂರು ವರ್ಷ ಸಚಿವ ಸ್ಥಾನ ಕಲ್ಪಿಸಿದ ರಾಜ್ಯದ ಮುಖ್ಯಮಂತ್ರಿಗಳಿಗೆ ತೀರ್ಥಹಳ್ಳಿಯ ಜನತೆಯ ಪರವಾಗಿ ಹೃತ್ಪೂರ್ವಕವಾದ ವಂದನೆಗಳು."


ಅಷ್ಟೇ ಅಲ್ಲ, ಹೊಸ ಸಚಿವ ಸಂಪುಟಕ್ಕೂ ಅವರು ಶುಭಾಶಯಗಳನ್ನು ಕೋರಿದರು. "ಪ್ರಮಾಣವಚನ ಸ್ವೀಕರಿಸುತ್ತಿರುವ ಎಲ್ಲಾ ನೂತನ ಸಚಿವ ಮಿತ್ರರಿಗೆ ಶುಭ ಹಾರೈಕೆಗಳು... ಬಾಕಿ ಉಳಿದ ಜನಪರ ಕಾರ್ಯಕ್ರಮಗಳು ನಿಮ್ಮಿಂದ ಈಡೇರಲಿ. ಎಲ್ಲರೂ ಸಮರ್ಥರಿದ್ದಾರೆ ಎಲ್ಲರಿಂದಲೂ ಉತ್ಕೃಷ್ಟ ಸೇವೆ ಅಪೇಕ್ಷಿಸಬಹುದು.. ನಮ್ಮ ಕ್ಷೇತ್ರಕ್ಕೆ ಹೆಚ್ಚಿನ ಅನುದಾನದ ನಿರೀಕ್ಷೆಯಲ್ಲಿ ನಾನಿದ್ದೇನೆ.. ಜನಪರ ಕಾಳಜಿಯ ನಮ್ಮ ನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಗಳ ಸಾರಥ್ಯದ ನೂತನ ಸಚಿವಸಂಪುಟ ಅನುಭವಿಗಳಿಂದ ಹಿರಿಯರಿಂದ ಕ್ರಿಯಾಶೀಲ ಯುವಕರಿಂದ ಸಮತೋಲನದಿಂದ ಕೂಡಿದೆ.." ಎಂದು ಹೇಳುವ ಮೂಲಕ ಎಲ್ಲ ಪ್ರಜ್ಞಾವಂತರ ಮೆಚ್ಚುಗೆಗೆ ಪಾತ್ರರಾದರು.

ಖರ್ಗೆ ವಿರುದ್ಧ ಶ್ರೀನಿವಾಸ್ ಪ್ರಸಾದ್. ಡಿ.ಕೆ. ಶಿವಕುಮಾರ್ ವಿರುದ್ಧ ಎಂ. ಕೃಷ್ಣಪ್ಪ ಇತ್ಯಾದಿಗಳು ಕೆಂಡಕಾರುತ್ತಿರುವಾಗ ಕಿಮ್ಮನೆ ರತ್ನಾಕರ್ ಅವರು ಕಾಗೋಡು ತಿಮ್ಮಪ್ಪನವರಿಗೂ ಶುಭ ಹಾರೈಸಿದರು. ಅವರ ಫೇಸ್‌ಬುಕ್ ಪೋಸ್ಟ್ ಹೀಗಿದೆ: "2008ರ ಚುನಾವಣೆಯಲ್ಲಿ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಶಾಸಕನಾಗಿ ನಾನೊಬ್ಬನೆ ಗೆಲುವು ಸಾಧಿಸಿದ್ದೆ. ಆಘಾತಕಾರಿ ಹಾಗು ಅಚ್ಚರಿ ಎಂಬಂತೆ ನನ್ನ ಪಕ್ಕದ ಕ್ಷೇತ್ರ ಸಾಗರದಿಂದ ಸ್ಪರ್ಧಿಸಿದ್ದ ಶ್ರೀ ಕಾಗೋಡು ತಿಮ್ಮಪ್ಪನವರು ಸೋಲನ್ನು ಅನುಭವಿಸಿದ್ದರು. ಅನುಭವಿ ಹಾಗು ಸಮಾಜವಾದಿ ಸಿದ್ಧಾಂತದಿಂದ ಬಂದಂತಹ ಶ್ರೀಯುತರ ಬಳಿ ನಾನು ಭಿನ್ನಹಿಸಿದ್ದೆ. 'ನಿಮ್ಮಂತಹ ಮುತ್ಸದ್ಧಿಗಳು ಸದನದ ಒಳಗಿರಬೇಕು. ಆದ್ದರಿಂದ ನೀವು ಒಪ್ಪಿಗೆ ನೀಡಿದರೆ ನಾನು ನಿಮಗಾಗಿ ನನ್ನ ಸ್ಥಾನ ಬಿಟ್ಟುಕೊಡಲು ಸಿದ್ಧನಿದ್ದೇನೆ. ತೀರ್ಥಹಳ್ಳಿ ಕ್ಷೇತ್ರದಿಂದ ಸ್ಪರ್ಧೆಮಾಡಿ' ಎಂದರೆ ಶ್ರೀಯುತರು ಒಪ್ಪಿಕೊಳ್ಳಲಿಲ್ಲ ಪ್ರೀತಿಯಿಂದಲೇ ಗದರಿ ನಿರಾಕರಿಸಿದ್ದರು. ಕಳೆದಬಾರಿ ಚುನಾವಣೆಯಲ್ಲಿ ಶ್ರೀಯುತರು ಭಾರಿ ಅಂತರದಿಂದ ಜಯಗಳಿಸಿದ್ದರು. ಶ್ರೀಯುತರು ಸಭಾಪತಿಯಾಗಿ ಸಮರ್ಥವಾಗಿ ಮಾರ್ಗದರ್ಶನ ನೀಡಿದ್ದರು. ಈಗ ಅವರಿಗೆ ಸಚಿವರಾಗುವ ಅವಕಾಶ ಬಂದಿದೆ. ಸಮಸ್ತ ರಾಜಕಾರಣಿಗಳಿಗೆ ಸಂದ ಗೌರವವಿದು. ಐದು ಬಾರಿ ಶಾಸಕರಾಗಿ, ಒಮ್ಮೆ ವಿಧಾನ ಪರಿಷತ್ ಸದಸ್ಯರಾಗಿ, ಸಚಿವರಾಗಿ ವ್ಯವಸ್ಥೆ ಹಾಗು ಆಡಳಿತದ ಬಗ್ಗೆ ಸುಧೀರ್ಘ ಅನುಭವ ಹೊಂದಿರುವ ಇವರಿಗೆ ಸಚಿವ ಸ್ಥಾನ ನೀಡಿ ಸಮಾಜವಾದಿ ಸಿದ್ಧಾಂತವನ್ನು ಜೀವಂತವಾಗಿರಿಸಿದ ಕಾಂಗ್ರೆಸ್ ಪಕ್ಷದ ಹಿರಿಯರಿಗೆ, ವರಿಷ್ಠರಿಗೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುವೆ. ಇಂತಹ ಹಿರಿಯರ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುವುದು ನನ್ನ ಭಾಗ್ಯವೇ ಸರಿ. ಮನಸ್ಸಿನಲ್ಲೆಲ್ಲೋ ಅನುಭವಿ ಹಿರಿಯರ ಅವಕಾಶವನ್ನು ನಾನು ಪರೋಕ್ಷವಾಗಿ ಅನುಭವಿಸಿದ ಅಳುಕು ಇತ್ತು. ಈಗ ಸರಿಯಾಗಿದೆ. ಅವರ ಜಾಗದಲ್ಲಿ ನನ್ನನ್ನು ಕಲ್ಪಿಸುವುದು ನನ್ನ ಮೂರ್ಖತನವಾಗಬಹುದು. ಅವರ ಎದುರು ಅಧಿಕಾರ ಬಯಸುವುದು ಉದ್ಧಟತನ ಹಾಗು ಅವಕಾಶವಾದಿಯಾಗಿಸಬಹುದು. ಈ ಇಳಿವಯಸ್ಸಿನಲ್ಲೂ ಅವರ ಕ್ರಿಯಾಶೀಲತೆ ಹಾಗು ದೃಢ ಮನಸ್ಥಿತಿ ಅಪರೂಪ. ಹಿರಿಯರಾದ ಶ್ರೀ ಕಾಗೋಡು ತಿಮ್ಮಪ್ಪನವರ ಕಾರ್ಯವೈಖರಿ ಬಗ್ಗೆ ಯಾವುದೇ ಅನುಮಾನ ಬೇಡ. ಅಭಿಮಾನವಿರಲಿ. ಶುಭ ಹಾರೈಕೆಗಳು ಕಾಗೋಡು ಜಿ."

ನಿಜಕ್ಕೂ ಕಿಮ್ಮನೆ ರತ್ನಾಕರ್ ಅಧಿಕಾರಕ್ಕಾಗಿ ಕಿತ್ತಾಡುತ್ತಿರುವ ಇತರೆ ರಾಜಕಾರಣಿಗಳಿಗೆ ಮಾದರಿ ಆಗಬೇಕಿದೆ.

ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ಶತ್ರು!

ಯಾರಿಗಾಗಿ ಯಾರ್‍ಯಾರ ತಲೆದಂಡ?


ಸಿದ್ದು

* ಕೆಪಿಸಿಸಿಗೆ ನಾನು ಅಧ್ಯಕ್ಷನಾಗಲೇಬೇಕು ಅನ್ನೋದಾದರೆ ಕನಿಷ್ಠ ಇನ್ನೊಂದು ವರ್ಷವಾದರೂ ನನ್ನನ್ನು ಮಂತ್ರಿಯಾಗಿರಲು ಬಿಡಿ.

- ಡಿಕೆಶಿ

* ಸಿದ್ದರಾಮಯ್ಯ ಒಬ್ಬ ಅಸಮರ್ಥ ಮತ್ತು ಸರ್ವಾಧಿಕಾರಿ. ನಾನೆಷ್ಟು ಸಮರ್ಥ ಅಂತ ಈಗಾಗಲೇ ಆಸ್ಕರ್ ಫರ್ನಾಂಡಿಸ್ ನನಗೆ ಸರ್ಟಿಫಿಕೇಟ್ ಕೊಟ್ಟಾಗಿದೆ. ಮಾಧ್ಯಮದವರಾದ ನೀವು ಕೂಡ ನನ್ನ ಸಾಧನೆಗೆ ಸರ್ಟಿಫಿಕೇಟು ಕೊಟ್ಟಿದ್ದೀರಾ. ಆದರೆ ಮುಖ್ಯಮಂತ್ರಿಯಾದವರು ಗುರುತಿಸಲಿಲ್ಲವಲ್ಲ ಅದೇ ದುರಂತ.

-ವಿ. ಶ್ರೀನಿವಾಸ್ ಪ್ರಸಾದ್

* ಸಚಿವ ಸ್ಥಾನಕ್ಕೆ ಮಾನದಂಡವಾದರೂ ಏನು? ಮುಖ್ಯಮಂತ್ರಿಗಳು ನನ್ನಂಥ ಒಳ್ಳೆಯವರನ್ನು ಹೊರಗಿಟ್ಟು ಇನ್ನೆಂಥವರಿಗೆ ಮನ್ನಣೆ ಕೊಡುತ್ತಾರೋ ಅರ್ಥವಾಗುತ್ತಿಲ್ಲ.

-ಡಾ. ಎ.ಬಿ. ಮಲಕಾ ರೆಡ್ಡಿ, ಮಾಜಿ ಮಂತ್ರಿ, ಯಾದಗಿರಿ ಶಾಸಕರು

* ಸಚಿವ ಸ್ಥಾನದಿಂದ ನನ್ನನ್ನು ಕೈಬಿಟ್ಟದ್ದರ ಹಿಂದಿನ ಪಿತೂರಿ ಏನು ಎಂದು ಸೋನಿಯಾ ಮತ್ತು ರಾಹುಲ್ ಗಾಂಧಿ ನನಗೆ ಹೇಳಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಖರ್ಗೆ, ದಿಗ್ವಿಜಯ್, ಆಸ್ಕರ್.... ಎಲ್ಲರೂ ನನ್ನ ಪ್ರಶ್ನೆಗೆ ಉತ್ತರ ಕೊಡಬೇಕು.

-ಖಮರುಲ್ ಇಸ್ಲಾಂ, ಮಾಜಿ ಮಂತ್ರಿ

* ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಧಿಕಾರ ಮದ ತಲೆಗೇರಿದೆ. ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ರಾಜ್ಯ ನಾಯಕತ್ವದ ಬದಲಾವಣೆ ಕುರಿತಂತೆ ಈಗಲಾದರೂ ಮೇಡಂ ಸೋನಿಯಾ ನಿರ್ಧರಿಸಬೇಕು.

-ಅಡಗೂರು ಎಚ್. ವಿಶ್ವನಾಥ್, ಮಾಜಿ ಸಂಸದ

* ಸಂಪುಟ ಪುನರ್ರಚನೆಯ ವಿರುದ್ಧ ಅಂಬರೀಷ್ ನೇತೃತ್ವದಲ್ಲಿ ಶ್ರೀನಿವಾಸ್ ಪ್ರಸಾದ್, ಕೆ.ಎನ್. ರಾಜಣ್ಣ ಸತೀಶ್ ಜಾರಕಿಹೊಳಿ, ಖಮರುಲ್ ಇಸ್ಲಾಂ, ಮಾಲಕ ರೆಡ್ಡಿ, ಶಿವಶಂಕರ್ ರೆಡ್ಡಿ ಎಲ್ಲರೂ ಸೇರಿ ಇಷ್ಟರಲ್ಲೇ ಸಮಾನ ಮನಸ್ಕರ ಸಭೆ ನಡೆಸಲಿದ್ದೇವೆ.

-ಎಸ್.ಟಿ. ಸೋಮಶೇಖರ್, ಭಿನ್ನಮತೀಯರ ಸಂಘಟಕ

* ಕೈಬಿಡುವ ಮುನ್ನ ಮುಖ್ಯಮಂತ್ರಿಗಳು ಸಂಬಂಧಪಟ್ಟ ಸಚಿವರ ಮನವೊಲಿಸಿ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇರುವುದು ತಪ್ಪು.


-ಬಿ.ಕೆ. ಹರಿಪ್ರಸಾದ್, ಎಐಸಿಸಿ ಪ್ರಧಾನ ಕಾರ್ಯದರ್ಶಿ


ಮೇಲ್ಕಂಡ ಎಲ್ಲಾ ಹೇಳಿಕೆ, ಬೆಳವಣಿಗೆಗಳ ನಡುವಿನ ಸೂಕ್ಷ್ಮವೇನು ಗೊತ್ತೆ? ಒಂದು ಪಕ್ಷವಾಗಿ, ಒಂದು ಸಂಘಟನೆಯಾಗಿ ಅಥವಾ ಒಂದೇ ಹಿತಾಸಕ್ತಿಯ ಕೂಟವಾಗಿಯೂ ಕಾಂಗ್ರೆಸ್‌ನಲ್ಲಿ ಕನಿಷ್ಠ ಶಿಸ್ತು ಕಾಣಿಸುತ್ತಿಲ್ಲ. ಒಂದೇ ಒಂದು ಸಂಪುಟ ವಿಸ್ತರಣೆಗೇ ಪಾರ್ಟಿಯೊಂದು ಈ ಪಾಟಿ ಒಳಕಚ್ಚಾಟಕ್ಕೀಡಾಗುತ್ತದೆಯೆಂದರೆ ಅದರ ಸಂರಚನೆಯ ದೌರ್ಬಲ್ಯ ಇನ್ನೆಂಥದ್ದಿರಬೇಡ?

ಬೀದಿ ರಂಪ!

ಜೂನ್ 19ರ ಸಂಪುಟ ಪುನರ್ರಚನೆಯ ನಂತರ ಸಂಭವಿಸಿದ ಆಕ್ರೋಶ, ಬೀದಿರಂಪ, ರಾದ್ಧಾಂತವಾದರೂ ಎಂಥಾದ್ದು?

ಶ್ರೀನಿವಾಸ್ ಪ್ರಸಾದ್ ಕೈಬಿಟ್ಟದ್ದನ್ನು ಪ್ರತಿಭಟಿಸಿ, ಅವರ ಸ್ವಕ್ಷೇತ್ರ ನಂಜನಗೂಡಿನಲ್ಲಿ ಬಂದ್ ಆಚರಿಸಲಾಗಿದೆ. ಸಿದ್ದರಾಮಯ್ಯನವರ ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ ನಡೆಸಿದ ಶ್ರೀನಿವಾಸ್ ಪ್ರಸಾದ್ ಬೆಂಬಲಿಗರು ಚಾಮರಾಜನಗರದಲ್ಲೂ ಬಂದ್ ಆಚರಿಸಿದ್ದಾರೆ. ಕೇವಲ ಮುಖ್ಯಮಂತ್ರಿ ವಿರುದ್ಧವಷ್ಟೇ ಅಲ್ಲ, ಕಾಂಗ್ರೆಸ್ ನಾಯಕ ಖರ್ಗೆ ವಿರುದ್ಧವೂ ಶ್ರೀನಿವಾಸ್ ಪ್ರಸಾದ್ ಕಿಡಿಕಾರಿದ್ದಾರೆ. ಅತ್ತ ಖಮರುಲ್ ಇಸ್ಲಾಂಗೆ ಮಂತ್ರಿಗಿರಿ ಕೈತಪ್ಪಿದ್ದರ ವಿರುದ್ಧ ಅವರ ಬೆಂಬಲಿಗರು ಕಲಬುರ್ಗಿ ಬಂದ್‌ಗೆ ಕರೆಯಿತ್ತಿದ್ದಾರೆ. ತನ್ನನ್ನು ಮಂತ್ರಿ ಮಾಡಲಿಲ್ಲ ಎಂದು ಅಫ್ಜಲಪುರದ ಶಾಸಕ ಮಾಲಿಕಯ್ಯ ಗುತ್ತೇದಾರ್ ಕಾಂಗ್ರೆಸ್ ಪಕ್ಷಕ್ಕೇ ರಾಜೀನಾಮೆ ಸಲ್ಲಿಸಿದ್ದಾರೆ. ಶಾಸಕ ಕೆ.ಎನ್. ರಾಜಣ್ಣನ


ಬಂಡೆದ್ದ ಶ್ರೀನಿವಾಸ್ ಪ್ರಸಾದ್


ಬಂಕಿಯುಗುಳಿದ ಅಂಬಿ

ಬೆಂಬಲಿಗರು ಮಧುಗಿರಿ ಬಂದ್ ಮಾಡಿದರೆ, ಮಂಡ್ಯದ ಮದ್ದೂರಿನಲ್ಲಿ ಅಂಬಿ 'ಭಕ್ತರು' ಆತ್ಮಹತ್ಯೆಗೆ ಯತ್ನಿಸಿದ್ದಾರೆ. ದಿನೇಶ್ ಗುಂಡೂರಾವ್ ಅನುಯಾಯಿಗಳು ಮುಖ್ಯಮಂತ್ರಿ ಮನೆ ಮುಂದೆ ಮಾಡಿದ ಪ್ರತಿಭಟನೆ, ಮಾಯಕೊಂಡದ ಶಾಸಕ ಶಿವಮೂರ್ತಿ ನಾಯಕ್ ವಿಧಾನಸೌಧದ ಮುಂದೆ ನಡೆಸಿದ ಏಕಾಂಗಿ ಧರಣಿ, ವಿಜಯನಗರದ ಶಾಸಕ ಲೇಔಟ್ ಕೃಷ್ಣಪ್ಪನ ಮಗ ಪ್ರಿಯಾಕೃಷ್ಣನ ರೌಡಿ ಪಡೆಗಳು ನಡೆಸಿದ ಪುಂಡಾಟಿಕೆ, ಗೌರಿಬಿದನೂರಿನಲ್ಲಿ ಶಿವಶಂಕರ್, ಕಾಪುವಿನಲ್ಲಿ ವಿನಯ್‌ಕುಮಾರ್ ಸೊರಕೆ, ಯಮಕನ ಮರಡಿಯಲ್ಲಿ ಸತೀಶ್ ಜಾರಕಿಹೊಳಿ, ಬಿಜಾಪುರದಲ್ಲಿ ಸಿ.ಎಸ್. ನಾಡಗೌಡ, ಬಳ್ಳಾರಿಯಲ್ಲಿ ಎಸ್.ವೈ. ಗೋಪಾಲಕೃಷ್ಣ ಚಿಂಚನಸೂರ್, ಶಿವರಾಜ್ ತಂಗಡಗಿ; ಹೀಗೆ ಮಂತ್ರಿಗಿರಿಯಿಂದ ಕೈಬಿಟ್ಟವರ ಬೀದಿರಂಪ ಒಂದೆಡೆಯಾದರೆ ಮಂತ್ರಿ ಮಾಡಲಿಲ್ಲ ಎಂಬ ಕಾರಣಕ್ಕೆ ಬೀದಿಗಿಳಿದವರ ಆಕ್ರೋಶ ಮತ್ತೊಂದೆಡೆ.

ಶ್ರೀನಿವಾಸ್ ಪ್ರಸಾದ್, ಖಮರುಲ್ ಥರದವರಿಗ ತಮ್ಮ ಮಂತ್ರಿಗಿರಿ ತಪ್ಪಲು ಖರ್ಗೆ ಕಾರಣವೆಂಬ ಸಿಟ್ಟಾದರೆ ಸೊರಕೆಗೆ ಆಸ್ಕರ್ ವಿರುದ್ಧ, ಲೇಔಟ್ ಕೃಷ್ಣಪ್ಪಗೆ ಡೀಕ ವಿರುದ್ಧ, ಚಿಕ್ಕಬಳ್ಳಾಪುರ ಶಾಸಕ ಸುಧಾಕರ್‌ಗೆ ಮೊಯಿ ವಿರುದ್ಧ ಶಿವಶಂಕರ್ ರೆಡ್ಡಿಗೆ ಕೆ.ಎಚ್. ಮುನಿಯಪ್ಪ ವಿರುದ್ಧ ಶಿವಮೂರ್ತಿ ನಾಯಕ್‌ಗೆ ಶಾಮನೂರು ವಿರುದ್ಧ- ಹೀಗ ಒಬ್ಬೊಬ್ಬರಿಗೂ ಮತ್ತೊಬ್ಬ ನಾಯಕರಿಂದಾಗಿಯೇ ತನ ಮಂತ್ರಿಗಿರಿ ತಪ್ಪಿತೆಂಬ ಹೊಟ್ಟೆ ಸಂಕಟ. ಅತ ಹುಮನಾಬಾದ್ ಶಾಸಕ ರಾಜಶೇಖರ್ ಪಾಟೀಲ ಬಹಿರಂಗವಾಗಿ ಧರಂಸಿಂಗ್ ವಿರುದ್ಧ ಕಿಡಿಕಾರಿ 'ನನ ಮಾವ ನಾಗಮಾರಪಲ್ಲಿಗೂ ಇದೇ ಧರಂಸಿಂಗ್ ಕಾ ಕೊಟ್ಟರು. ನನ್ನ ತಂದೆ ಬಸವರಾಜ ಪಾಟೀಲರಿಗೂ ಕಿರುಕು ಕೊಟ್ಟು ಧರಂಸಿಂಗ್ ಮಾಡಿದ ಲೂಟಿಯನ್ನೆಲ್ಲಾ ದಾಖಲ ಸಮೇತ ಬಯಲಿಗೆಳೆಯುತ್ತೇನೆ...!' ಎಂದುಬಿಟ್ಟರು.

ಖರ್ಗೆ ಎಂಟ್ರಿ?

ಬಹುಶಃ ಮುಖ್ಯಮಂತ್ರಿಯಾದಾಗಿನಿಂದ ಇಂಥಾದೊಂದು ಒಳದಾವಾನಿಲವನ್ನೇ ಸಿದ ಎದುರಿಸಿರಲಿಕ್ಕಿಲ್ಲ. ಜೂನ್ 18ರ ಹೊತ್ತಿಗೆಲ್ಲಾ ಸಂಪುಟ ಸರ್ಜರಿಯ ಹೊಸ ಪಟ್ಟಿಗೆ ಸೋನಿಯಾ ಮೇಡ ಗ್ರೀನ್‌ಸಿಗ್ನಲ್ ಕೊಟ್ಟಾಗಿತ್ತು. ಅದಕ್ಕೂ ವಾರದ ಮೊದಲೇ ಸಿದ್ದು ತಮ್ಮದೇ ಪಟ್ಟಿಯೊಂದನ್ನು ತಯಾರಿಸಿ ಅದಕ ದಿಗ್ವಿಜಯ್ ಅಂಕಿತ ಪಡೆದೇ ಮೇಡಂ ಸೋನಿಯಾ ಅನುಮತಿಗೆ ರವಾನಿಸಿದ್ದರು. ಇದೆಲ್ಲಕ್ಕೂ ಮೊದಲೇ ಆಸ್ಕರ್ ದಿಗ್ವಿಜಯ್, ಮೊಯ್ಲಿ ಮುಂತಾದವರ ಜೊತೆ ಔಪಚಾರಿಕ ಪ್ರಸ್ತಾವನೆಯನ್ನೂ ಮಾಡಿಯಾಗಿತ್ತು. ಆ ಪ್ರಕಾರ ಕೈಬಿಡಬೇಕಾದವರ ಪಟ್ಟಿಯಲ್ಲಿ ಶ್ರೀನಿವಾಸ್ ಪ್ರಸಾದ್ ಹೆಸರಿರಲಿಲ್ಲ. ಕಿಮ್ಮನೆ, ಸೊರಕೆ, ಸತೀಶ್ ಜಾರಕಿಹೊಳಿ ಯಂಥವರನ್ನು ಕೈಬಿಡಲು ಕಾರಣಗಳೂ ಇರಲಿಲ್ಲ.

ಯಾವತ್ತು ಸಿದ್ದು ಪಟ್ಟಿ ಹೈಕಮಾಂಡ್ ತಲುಪಿದ್ದು ಗೊತ್ತಾಯಿತೋ ಎದ್ದು ನಿಂತದ್ದು ಖರ್ಗೆ. ಇವತ್ತಲ್ಲಾ ನಾಳೆಯ ಮುಖ್ಯಮಂತ್ರಿ ಅಭ್ಯರ್ಥಿ. ಲೋಕಸಭೆಯಲ್ಲಿ ಕಾಂಗ್ರೆಸ್ ಗುಂಪಿನ ನಾಯಕ. ಹೈಕಮಾಂಡ್ ಮಟ್ಟಿಗೆ ಸಿದ್ದುಗಿಂತಲೂ ಆಪ್ತ. ತನ್ನ ಮಗನನ್ನು ಮಂತ್ರಿ ಮಾಡಲೇಬೇಕೆಂದು ಹಠಕ್ಕೆ ಬೀಳುವ ಮಟ್ಟಕ್ಕೆ ಖರ್ಗೆ ಇಳಿಯಲಾರರು ಎಂದೇ ಸಿದ್ದು ನಿರೀಕ್ಷೆಯಾಗಿತ್ತು. ಹೇಗೂ ಗುಲ್ಬರ್ಗಾವನ್ನು ಖಮರುಲ್ ನಿಭಾಯಿಸುತ್ತಿದ್ದರಾದ್ದರಿಂದ ಯಾವುದೇ ಬದಲಾವಣೆ ಮಾಡಿ ತಾಪತ್ರಯಕ್ಕೆ ಸಿಲುಕುವುದು ಬೇಡ ಎಂದೇ ಸಿಎಂ ತಲೆಕೆಡಿಸಿಕೊಂಡಿರಲಿಲ್ಲ. ಆದರೆ ಸಿದ್ದು ಪಟ್ಟಿ ಅಹ್ಮದ್ ಪಟೇಲ್ ಕೈಸೇರಿದ್ದು ಗೊತ್ತಾಗಿದ್ದೇ ತಡ, ಖರ್ಗೆ ಮೇಡಂ ಸೋನಿಯಾ ಸನ್ನಿಧಿಯಲ್ಲಿ ಪವಡಿಸಿಬಿಟ್ಟರು. ಒಂದೇ ಬೇಡಿಕೆ ತನ್ನ ಮಗನನ್ನು ಮಂತ್ರಿ ಮಾಡಿ.

ಇನ್ನು ಮೇಡಂ ಕೇಳಬೇಕೆ? ದಿಗ್ವಿಜಯ್ ಕರೆದಿದ್ದೇ 'ಖರ್ಗೆ ಸಾಬ್‌ಕೆ ಸಾತ್ ಡಿಸ್ಕಸ್ ಕರ್‌ಕೆ ಲಿಸ್ಟ್ ಫೈನಲ್ ಕರೋ.....' ಎಂದುಬಿಟ್ಟರು. ಹೆಬ್ಬಾಳದ ಉಪಚುನಾವಣೆಯಲ್ಲಾದ ಸೋಲಿನ ಕಹಿಯಿನ್ನೂ ಖರ್ಗೆ ಪ್ರಸಾದವೆಂಬಂತೆ ಸಿದ್ದು ಗಂಟಲಲ್ಲಿತ್ತಲ್ಲ. ಲೇಔಟ್ ಕೃಷ್ಣಪ್ಪನ ಪರವಾಗೋ ಖಮರುಲ್ ಪರ ವಹಿಸಿಯೋ ಖರ್ಗೆ ಚೌಕಾಸಿಗಿಳಿಯಬಹುದೆಂಬ ಸಿದ್ದು ನಿರೀಕ್ಷೆ ಹುಸಿಯಾಗಿದ್ದು ತನ್ನ ಮಗನ ಹೆಸರೆತ್ತಿದಾಗಲೇ!

ಪ್ರಸಾದ್ ತಲೆದಂಡ!

ಪ್ರಿಯಾಂಕ ಖರ್ಗೆಯನ್ನು ಮಂತ್ರಿ ಮಾಡುವುದಾದರೆ ಗುಲ್ಬರ್ಗ ಕೋಟಾದಲ್ಲಿ ಯಾರ ತಲೆ ಉರುಳಿಸುವುದು


⇨05


ಬೀದಿಗಿಳಿದ ಲೇಔಟ್ ಕೃಷ್ಣಪ್ಪನ ಬಂಟರು

ಕೃಷ್ಣಪ್ಪ ಮಷ್ಕಿರಿ, ಹೀಗೂ ಉಂಟೇ ಮಂತ್ರಿಗಿರಿ?

ಲೇಔಟ್ ಕೃಷ್ಣಪ್ಪ ಮಂತ್ರಿಯಾಗೇಬಿಟ್ರಂತೆ, ನಾಳೆನೇ ಪ್ರಮಾಣವಚನ ತಗೋತಾರಂತೆ, ಬೆಂಗಳೂರು ನಗರಾಭಿವೃದ್ಧಿ, ಬಿಡಿಎ, ಕಾರ್ಪೋರೇಷನ್ನು ಎಲ್ಲಾನೂ ಅವರಿಗೇ ಬಿಟ್ಟುಕೊಡ್ತಾರಂತೆ...! ಹೀಗೆ ಶುರುವಾದ ಫ್ಲೆಕ್ಸು, ಬ್ಯಾನರ್‌ಗಳೆಲ್ಲ ಇವತ್ತಿಗೂ ವಿಜಯನಗರದ ಸುತ್ತಮುತ್ತ ಬೇಕಾಬಿಟ್ಟಿ ಇಟ್ಟಾಡುತ್ತಲೇ ಇವೆ. ಫೇಸ್‌ಬುಕ್ಕು, ವಾಟ್ಸಪ್ಪುಗಳ ತುಂಬೆಲ್ಲ ಅವರ ಭಟ್ಟಂಗಿಗಳು ಹೋಗಿ ಹೂಗುಚ್ಛ ನೀಡಿ ಅಭಿನಂದಿಸುತ್ತಿರುವ, ಶಾಲು ಹೊದಿಸಿ ಸನ್ಮಾನಿಸುತ್ತಿರುವ ಫೋಟೋಗಳೇ ವಿಜೃಂಭಿಸುತ್ತಿದ್ದವು. ಇದೊಂಥರದ ಹುಲಿ ಬಂತು ಹುಲಿಯ ಕತೆಯಂತೆ. ಕೃಷ್ಣಪ್ಪನವರನ್ನು ಮಂತ್ರಿ ಮಾಡ್ತೀವಿ ಅಂತ ಹೇಳಿದ್ದು ಯಾರು? ಅದಕ್ಕೆ ಆಧಾರವೇನು? ಇತ್ಯಾದಿ ಏನೊಂದೂ ಸ್ಪಷ್ಟವಿಲ್ಲದೆ 'ಮಂತ್ರಿಯಾಗೇ ಬಿಟ್ರಂತೆ' ಎಂದು ಭಕ್ತಾದಿಗಳು ಬ್ಯಾನರ್ ಹಾಕಿದ್ದೇ ಹಾಕಿದ್ದು...

ಹಾಗೆ ಕೃಷ್ಣಪ್ಪನವರನ್ನು ಯಾರಾದರೂ ಮಂತ್ರಿ ಮಾಡುವುದಾದರೆ ಒಂದೋ ಸೀನಿಯಾರಿಟಿ ಮೇಲೆ ಮಾಡಬೇಕು ಅಥವಾ ಜಾತಿ ಕೋಟಾ ನೆರವಿಗೆ ಬರಬೇಕು ತಾನೆ? ಜಾತಿ ಕೋಟಾದ ಮೇಲೇ ಆಗುವುದಾದರೆ ಕಾಂಗ್ರೆಸ್ ಅಧಿನಾಯಕ ಅಂತಿರುವುದು ಡಿಕೆ, ಕೃಷ್ಣ ಭೈರೇಗೌಡ, ಜಯಚಂದ್ರ, ಅರಕಲಗೂಡು ಮಂಜು ಮುಂತಾದ ಸೀನಿಯರ್ ಗೌಡರನ್ನೆಲ್ಲ ಕೈಬಿಟ್ಟು ಅದ್ಯಾವ ಕಾರಣಕ್ಕೆಂದು ಕೃಷ್ಣಪ್ಪನನ್ನು ಮಂತ್ರಿ ಮಾಡ್ತಾರೆ? ಬೆಂಗಳೂರಿನ ವಿಷಯಕ್ಕೆ ಬಂದರೆ ಕೃಷ್ಣಪ್ಪಗಿಂತಲೂ ಆರ್.ವಿ. ದೇವರಾಜ್, ಹ್ಯಾರೀಸ್ ಸೀನಿಯರ್‌ಗಳು. ದೇವರಾಜ್ ಇದೂ ಸೇರಿ ಗೆದ್ದಿರುವುದು ಮೂರನೇ ಬಾರಿ. ಎರಡನೇ ಬಾರಿ ಎಮ್ಮೆಲ್ಲೆಯಾದ ಮಾತ್ರಕ್ಕೇ ಕೃಷ್ಣಪ್ಪ ಮಂತ್ರಿಯಾಗ್ತಾರೆ ಅಂದರೆ ಯಾರಾದರೂ ನಂಬಲು ಸಾಧ್ಯವೇ?



ಹಕೀಕತ್ತೇನೆಂದರೆ ತಾನು ಮಂತ್ರಿಯಾಗುವುದು ಸಾಧ್ಯವೇ ಇಲ್ಲವೆಂಬುದು ಕೃಷ್ಣಪ್ಪನವರಿಗೆ ಚೆನ್ನಾಗೇ ಗೊತ್ತಿತ್ತು. ಗುಂಪಿನಲ್ಲಿ ಗೋವಿಂದ ತಂತ್ರಕ್ಕೆ ಕೈಯಿಟ್ಟದ್ದೇ ಕಾಗೆ ಹಾರಿಸಿಬಿಟ್ಟರು. ಅದನ್ನೇ ಪ್ರಸಾದವೆಂಬಂತೆ ನಂಬಿಕೊಂಡ ಒಂದೆರಡು ಚಾನಲ್‌ಗಳು ಮುಖ್ಯಮಂತ್ರಿಗಳೇ ಕೃಷ್ಣಪ್ಪರ ಹೆಸರನ್ನು ಸ್ಪಷ್ಟಪಡಿಸಿದ್ದಾರೆಂಬಂತೆ ಫೇಯ್ಡ್‌ನ್ಯೂಸ್ ಬಿತ್ತರಿಸಿದವು. ಒಂದೆರಡು ಪತ್ರಿಕೆಗಳೂ ಇದಕ್ಕೆ ಕೈಜೋಡಿಸಿದವು. ಏನೇ ಗಿಮ್ಮಿಕ್ಕು, ಸರ್ಕಸ್ಸು ಮಾಡಿದರೂ ಮಂತ್ರಿಸ್ಥಾನ ಕಲ್ಪಿಸಬೇಕಾದದ್ದು ಮುಖ್ಯಮಂತ್ರಿ ತಾನೆ? ಘಟಾನುಘಟಿಗಳನ್ನೇ ಸಂಪುಟದಲ್ಲಿ ಉಳಿಸಿಕೊಳ್ಳಲಾಗದ ಸಿಎಂ ಮುಷ್ಕಿರಿಗಿಳಿದ ಕೃಷ್ಣಪ್ಪನಿಗೆಲ್ಲಿ ಮಂತ್ರಿಗಿರಿ ಕೊಡಲು ಸಾಧ್ಯ?

ಯಾವಾಗ ತನ್ನ ತಂತ್ರವೇ ತಿರುಗುಬಾಣವಾಗಿ ಫಜೀತಿ ತಂತೋ ಅದರ ಮುಖಭಂಗದಿಂದ ಬಚಾವಾಗಬೇಕಲ್ಲ; ಕೃಷ್ಣಪ್ಪ ಮತ್ತವರ ಮಗ ಸೇರಿಕೊಂಡಿದ್ದೇ ಚೇಲಾಗಳನ್ನು ಛೂಬಿಟ್ಟರು. ಭಟ್ಟಂಗಿ ಪಡೆ ಕೇಳಬೇಕೆ? ಕೃಷ್ಣಪ್ಪ ಮನೆ ಮುಂದೆಯೇ ಜಮಾಯಿಸಿ ಸಿಕ್ಕಸಿಕ್ಕ ಬಸ್ಸುಗಳಿಗೆ ಬೆಂಕಿಯಿಟ್ಟರು. ಮೆಟ್ರೋ ಸ್ಟೇಷನ್ನಿಗೇ ನುಗ್ಗಿ ಚಿಂದಿಯೆಬ್ಬಿಸಿದರು. ಅತ್ತ ಮೈಸೂರು ರಸ್ತೆಯೂ ಜಾಮ್. ಇತ್ತ ವಿಜಯನಗರಕ್ಕೂ ಬೆಂಕಿ. ವಾಸ್ತವವಾಗಿ ದಿಗ್ವಿಜಯ್‌ಸಿಂಗ್ ಚಿಕ್ಕಪೇಟೆ ಶಾಸಕ ಆರ್.ವಿ. ದೇವರಾಜ್‌ರನ್ನು ಮಂತ್ರಿ ಮಾಡುವತ್ತ ಆಸಕ್ತಿ ವಹಿಸಿದ್ದರು. ಮಂತ್ರಿ ಆಕಾಂಕ್ಷಿಗಳ ಪಟ್ಟಿಯಲ್ಲಾಗಲಿ, ಒಕ್ಕಲಿಗರ ಕೋಟಾದಲ್ಲಾಗಲಿ ಕೃಷ್ಣಪ್ಪ ಎಂಬ ಹೆಸರೇ ಬೋರ್ಡಿಗಿರಲಿಲ್ಲ. ಸದ್ಯ ಕೃಷ್ಣಪ್ಪ 'ತನಗೆ ಡೀಕೆಯಿಂದಾಗಿಯೇ ಮಂತ್ರಿಗಿರಿ ತಪ್ಪಿಹೋಯ್ತು ಡಿಕೇನ ಮುಗಿಸದೇ ಬಿಡಲ್ಲ...' ಎಂದು ಗಾಯ ನೆಕ್ಕುತ್ತಿದ್ದಾರಂತೆ! ಮಷ್ಕಿರಿ ಹೀಗೂ ಉಂಟೆ?

ಸಿದ್ದಣ್ಣನ ರಿಸ್ಕು ಈಗ ಸುರುವಾಯ್ತು ಸಾರ್

ಥೂತ್ತೇರಿ

ಯ್ಹಾಹೂ

ಅಮೆರಿಕಕ್ಕೆ ಹೋಗಿದ್ದ ನಮ್ಮ ಮಾತಿನಮಲ್ಲ ಭಾಷಣ ಮಾಡುತ್ತಿದ್ದ ಹೊಡೆತಕ್ಕೆ ಅಮೆರಿಕನ್ನರಿಂದ ಸರಿಯಾಗಿಯೇ ಚಪ್ಪಾಳೆ ಬಿದ್ದವಂತಲ್ಲಾ. ಇದರಿಂದ ರೋಮಾಂಚನಗೊಂಡ ಭಾರತದ ಚೆಡ್ಡಿ ಪತ್ರಕರ್ತರು ಮನಮೋಹನ್ ಸಿಂಗ್ ಹೋಗಿ ಭಾಷಣ ಮಾಡಿದಾಗ ಎಷ್ಟು ಚಪ್ಪಾಳೆ ಬಿದ್ದಿದ್ದವು ಎಂದು ಲೆಕ್ಕ ಹಾಕಿದರಂತಲ್ಲಾ. ಮನಮೋಹನರಿಗೆ ಬಿದ್ದ ಚಪ್ಪಾಳೆಯಲ್ಲಿ ಮೋದಿ ಚಪ್ಪಾಳೆಯನ್ನು ಕಳೆದು ನೋಡಿದಾಗ ಮೋದಿಗೇ ಹದಿಮೂರು ಚಪ್ಪಾಳೆ ಜಾಸ್ತಿ ಬಿದ್ದಿವೆಯೆಂದು ಚೆಡ್ಡಿ ಪತ್ರಕರ್ತರು ಭಾರತದ ಉದ್ದಗಲಕ್ಕೂ ಚಪ್ಪಾಳೆ ತಟ್ಟಿದವಂತಲ್ಲಾ.


ಇದಕ್ಕೆ ಕಾರಣವೇನೆಂದು ಕೇಳಿದ ಕಾಂಗ್ರೆಗಳು ಪಕಾರೆಂದು ನಗಾಡಿ "ಅಯ್ಯೋ, ಚೆಡ್ಡಿ ಬಡ್ಡೆತ್ತವಾ, ಅಮೆರಿಕದೋರು ನಗಾಡಿದ್ದು ಮೋದಿ ಇಂಗ್ಲಿಷ್‌ಗೆ. ಇಂಗ್ಲಿಷ್‌ನ ಗುಜರಾತಿ ತರ ಜಡಾಯಿಸಿದ್ರೆ ಚಪ್ಪಾಳೆ ವಡಿಯಂಗಾಯ್ತದೆ. ಅಷ್ಟಕ್ಕೂ ಮೋದಿ ಮಹಾತ್ಮ ಹಿಸ್ಟರಿ ಮೇಷ್ಟ್ರ ತರ ಒಂದು ಗಂಟೆ ಮಾತಾಡ್ತಾನೆ. ಅದೇ ನಮ್ಮ ಮನಮೋಹನ್ ಹದಿನೈದು ನಿಮಿಷ ಗೊಣಗುತಿದ್ರು. ಹದಿನೈದು ನಿಮಿಷಕ್ಕೆ 30 ಚಪ್ಪಾಳೆ ಬಿದ್ರೆ, ಮೋದಿ 60 ನಿಮಿಷಕ್ಕೆ 54 ಬಿದ್ದವೆ. ಯಾರದು ಜಾಸ್ತಿಯಾಯ್ತು ನೀವೇ ಲೋಟ್ಟು ಮಾಡಿಕಳಿ" ಎಂದವಂತಲ್ಲಾ, ಥೂತ್ತೇರಿ!

* * *

ಸಿದ್ದು ಸಂಪುಟದಲ್ಲಿ ಸತ್ತಂತಿದ್ದ ಸಚಿವರನ್ನು ಕೈಬಿಟ್ಟು ಮಂತ್ರಿಯಾಗುವ ಕನಸಿನಲ್ಲೇ ಕಾಲ ದೂಡುತ್ತಿದ್ದ ಹಲವರನ್ನು ಸಂಜೆ ಇಳಿಹೊತ್ತಿನಲ್ಲಿ ಸಂಪುಟಕ್ಕೆ ಸೇರಿಸಿಕೊಂಡರಲ್ಲಾ. ಇದರಿಂದ ಸತ್ತಂತಿದ್ದ ಸಚಿವರ ಹಿಂಬಾಲಕರು ಅಲ್ಲಲ್ಲಿ ದಾಂಧಲೆ ಮಾಡಿ ಸಾರ್ವಜನಿಕರಿಗೆ ಕಿರಿಕಿರಿ ಕೊಟ್ಟರಂತಲ್ಲಾ. ಇಂತಹ ಜನಗಳನ್ನು ಸಾಕಿಕೊಂಡಿದ್ದ ಅಂತಹ ಸಚಿವರನ್ನು ಕೈಬಿಟ್ಟಿದ್ದೇ ಸರಿ ಎಂದು ಸಾರ್ವಜನಿಕರು ಮಾತನಾಡಿಕೊಂಡರಂತಲ್ಲಾ. ಸಚಿವ ಸಂಪುಟದ ವಿಸ್ತರಣೆ ಸುದ್ದಿಗಿಂತ ಪ್ರತಿಭಟಿಸಿದ ಸುದ್ದಿಯನ್ನೇ ಪ್ರಧಾನವಾಗಿ ಕಂಡ ಪ್ರಜಾವಾಣಿಯ ಜನಕ್ಕೆ ಗಲಭೆಯೇ ಪರಮಾನಂದವಾಗಿ ಕಂಡಿದೆಯಂತಲ್ಲಾ. ನಂದಿ ಮಾರ್ಕಿನ ಪೇಪರ್ ಸುದ್ದಿ ನೋಡುತ್ತಿದ್ದರೆ ಇದೇನು ಹೊಸ ದಿಗಂತವೋ ಅಥವಾ ಆರ್ಗನೈಸರ್ ತರ್ಜುಮೆಯೋ ಅಥವಾ ವಿಕ್ರಮದ ವಿಸ್ತರಣೆಯೋ ಎಂಬ ಕನ್‌ಫ್ಯೂಸಾಗುತ್ತಿದೆಯೆಂದು ಕಾಂಗ್ರೆಗಳು ಆಡಿಕೊಳ್ಳುತ್ತಿವೆಯಂತಲ್ಲಾ. "ಸದ್ಯ ಊರಿಗೊಬ್ಬಳೇ ಪದ್ಮಾವತಿಯಂತೆ ಇದೊಂದೇ ಪತ್ರಿಕೆಯಿಲ್ಲವಲ್ಲ, ಅದೇ ಸಮಾಧಾನ" ಎಂದುಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!!

* * *

ಸಿದ್ದು ಸಂಪುಟ ವಿಸ್ತರಣೆ ವಿಚಾರವಾಗಿ ಸಾರ್ವಜನಿಕರ ಅಭಿಪ್ರಾಯ ಕೇಳಿದರೆ ಹೇಗೆ ಎಂದು ಯೋಚಿಸುತ್ತಿರುವಾಗ ವಾಟಿಸ್ಸೆ ನೆನಪಾಯಿತು. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್ ಟೋನ್: "ಟರ್‌ರ್... ಟರ್‌ರ್... ಟರ್‌ರ್... ಟರ್‌ರ್."

"ಹಲೋ ಯಾರು?"

"ನಾನು ವಾಟಿಸ್ಸೆ ಯ್ಹಾಹು."

"ನಮಸ್ಕಾರ ಸಾರ್. ಒಂದು ಪರಸೋನಲ್ ರಿಕ್ವೆಸ್ಟು ಸಾರ್."

"ನೂರ್ರುಪಾಯಿ ಕರೆನ್ಸಿ ಹಾಕುಸ್ತಿನಿ."

"ತುಂಬಾ ಥ್ಯಾಂಕ್ಸ್. ಅದೇನೇಳಿ ಸಾರ್."

"ಸಿದ್ದರಾಮಯ್ಯನೋರು ಕೆಲವರನ್ನು ಮಂತ್ರಿ ಮಾಡಿದ್ರು."

"ಸಿದ್ದಣ್ಣನ ರಿಸ್ಕು ಈಗ ಸುರುವಾಯ್ತು ಸಾರ್, ಈ ಕೆಲಸ ಸ್ಟಾರ್ಟಿಂಗ್‌ನಲ್ಲೇ ಮಾಡಿದ್ರೆ ಇಂತ ಟ್ರಬಲ್ಲಾಯ್ತಿರಲಿಲ್ಲ ಸಾರ್."

"ಟ್ರಬಲ್ಲು ಅಂತಿಯಾ?"

"ಓಯೆಸ್, ಸರ್ಕಾರಿ ಖರ್ಚಿನಲ್ಲಿ ಮಾತ್ರೆ, ಔಷಧಿ ತಗೋತಿದ್ದೋರು ಸುಮ್ಮನಿರಲ್ಲ."

"ಸರ್ಕಾರಿ ಖರ್ಚಲ್ಲಿ ಮಾತ್ರ ನುಂಗತಿದ್ದೋರ್‍ಯಾರು?"

"ಎಲ್ಲಾರು ನುಂಗತಿದ್ರು ಸಾರ್. ಮಂತ್ರಿಗಳಾಗಿದ್ದ ಕಾರಣಕ್ಕೆ ಮುಂದೂ ನುಂಗತರೆ. ಒಂದು ಸಲ ಮಂತ್ರಿಯಾದ್ರೆ ಸಾಕು ಸಾಯೋವರೆಗೂ ಮೆಡಿಕಲ್ ಬಿಲ್ಲು ಮಾಡಬಹುದಂತೆ."

"ಈಗ ತೆಗೆದಿರೋ ಮಂತ್ರಿಗಳಲ್ಲಿ ಯಾರ್‍ಯಾರು ಇರಬೇಕಿತ್ತು?"

"ಕಿಮ್ಮನೆ ಇರಬೇಕಿತ್ತು ಸಾರ್."

"ಯಾಕೆ?"

"ಅವರು ಕ್ಲೀನ್‌ಹ್ಯಾಂಡ್ ಸಾರ್."

"ಆದ್ರು ತಗದ್ರಲ್ಲ?"

"ಯಾಕೆ ಅಂದ್ರೆ ತಗಿಯದ್ರಿಂದ ಅವರು ಬೇಜಾರು ಮಾಡಿಕಳಲ್ಲ, ಗಲಾಟೆನೂ ಮಾಡಸಲ್ಲ ಅಂತ ಗೊತ್ತಾಗಿ ತಗದಿರಬೇಕು ಸಾರ್."

"ಅಂಬರೀಶ್ ತಗದಿರದ್ರಿಂದ ಬೇಜಾರಾಯ್ತಾ?"

"ಇಲ್ಲ ಸಾರ್, ಏನೋ ಒಂಥರ ಸಮಾಧಾನಾಯ್ತು."

"ಯಾಕೆ?"

"ನೋಡಿ ಸಾರ್, ಅಂಬರೀಸಣ್ಣ ಗುಡ್‌ಪರಸನ್ನು. ಆದ್ರೆ ಯೂಸ್‌ಲೆಸ್. ವಸತಿ ಖಾತೆ ಅಂದ್ರೆ ಬಡಬಗ್ಗರಿಗೆ ಮನೆ ಕೊಡೊ ಖಾತೆ. ಅಂತ ಖಾತೆ ತಗಂಡಮ್ಯಾಲೆ ತನ್ನ ಮನೆ ಕಟ್ಟಕ್ಕೆ ಓಡಾಡಿದಂಗೇ ಓಡಾಡಬೇಕು. ಆದ್ರೆ ಅಂಬಣ್ಣ ಆರಾಮಾಗಿದ್ದ. ಅವ್ರುನಾಯ್ತು ಅವ್ರುನ ಪಟಾಲಮ್ಮಾಯ್ತು. ಆ ಪಟಾಲಮ್ಮಲ್ಲಿ ಅಮರಾವತಿ ಚಂದ್ರಶೇಕ್ರ ಅಂತ ಇದ್ದ ಸಾರ್. ಅವುನೆಂಥೋನು ಅಂದ್ರೆ, ಎ.ಸಿ. ನಾಗರಾಜನ್ನ ವರ್ಗ ಮಾಡಸಕ್ಕೆ ಓಡಾಡತಿದ್ದ. ಆ ನಾಗರಾಜನಂಥ ಅಧಿಕಾರಿನೇ ನೋಡಲಿಲ್ಲ ನಾನು. ಎಲ್ಲ ಬಡವರ ಕೆಲಸ ಮಾಡೋನು. ಬಡವರು ಮಕ್ಕಳ ಫೀಜು ಕಟ್ಟೋನು. ಚುಂಚನಗಿರಿ ಸ್ವಾಮೀನೆ ಮೆಚ್ಚಿದ್ರು. ಅದ್ಕೆ ಒಂದು ಸಲ ಹೋಗಿ ಸ್ವಾಮಿನ್ನೆ ಆಗಿಬುಟ್ಟಿದ್ದ. ಪಾಪ ಅವರಪ್ಪ ಅಮ್ಮ ಸ್ವಾಮಿಗಳ ಕಾಲಿಗೆ ಬಿದ್ದು ಮಗನ್ನ ಬುಡಿಸಿಗಂಡ್ರು. ಈಗ ಅವರು ಪಾಂಡವಪುರದ ಎ.ಸಿ. ಅಂಥೋರ ವರ್ಗ ಮಾಡಸಕ್ಕೆ ಈ ಅಮರಾವತಿ ಓಡಾಡಿದ. ಇಂಥೋರ ಮಾತ ಕೇಳತಿದ್ದ ಅಂಬಣ್ಣನಿಂದ ಒಳ್ಳೆ ಕೆಲಸ ಸಾಧ್ಯನಾ ಸಾರ್?"

"ಇಡೀ ಚಿತ್ರರಂಗ ಪ್ರತಿಭಟಿಸಿದೆ?"

"ಆ ಸಿನಿಮಾದವ್ರುಕೆ ತಲೆ ಕಡಮೆ ಸಾರ್. ಅವಕ್ಕೆ ಸರ್ಕಾರ, ಖಾತೆ, ಮಂತ್ರಿಗಿರಿ ಜವಾಬ್ದಾರಿ ಏನೂ ಗೊತ್ತಿಲ್ಲ. ಅಂಬರೀಶಣ್ಣ ಅಂದ್ರಾಯ್ತು ಅಷ್ಟೇ ಗೊತ್ತಿರದವ್ರುಕೆ."

"ಶ್ರೀನಿವಾಸ್ ಪ್ರಸಾದ್ ಬಗ್ಗೆ ಏನೇಳ್ತಿ?"

"ಅವ್ರುರು ಅದ್ಯಾವಾಗ್ಲೋ ವಾಜಪೇಯಿ ಗೌರಮೆಂಟಲ್ಲಿ ಮಂತ್ರಿಯಾಗಿದ್ರಂತೆ. ಅದ್ನೆ ಹೇಳಿಕೊಂಡು ಒಂದಿಡಿ ಮಾತ್ರೆ ತಿನ್ನಕಂಡು ಆಗಾಗ್ಗೆ ಆಸ್ಪತ್ರೆಲಿ ಮನಿಕಂಡೆ ಖಾತೆ ನಿಭಾಯಿಸತಿದ್ರು ಸಾರ್. ರೆವಿನ್ಯೂ ಖಾತೆ ಅಂದ್ರೇನು? ಇವತ್ತಿಗೂ ರೆವಿನ್ಯೂ ಖಾತೆ ಅಂದ್ರೆ ಬಸಲಿಂಗಪ್ಪ, ಹುಚ್ಚ ಮಾಸ್ತಿಗೌಡ, ಇಂಥೋರು ನೆನಪಿಗೆ ಬತ್ತರೆ. ಈತ ರೆವಿನ್ಯೂ ಖಾತೆಗೇ ಕಾಯಿಲೆ ಹತ್ತಿಸಿದ್ದ. ಅಂತೂ ಸಿದ್ದರಾಮಯ್ಯ ಧೈರ್ಯ ಮಾಡಿ ಕಿತಗಂಡ."

"ಖಮರುಲ್ ಇಸ್ಲಾಂ ಗೊತ್ತೆ?"

"ಗೊತ್ತು ಸಾರ್. ಸರಿಯಾಗಿ ಕನ್ನಡ ಬರದಿಲ್ಲ, ಕಣ್ಣು ಕಾಣಲ್ಲ, ಕಿವಿ ಕೇಳಲ್ಲ, ಪಾಪ ಅವ್ರುಂದೇನು ತಪ್ಪಿಲ್ಲ, ಅಂಥೋನ್ನ ಮಂತ್ರಿ ಮಾಡಿಕೊಂಡಿದ್ದ ಸಿದ್ದರಾಮಯ್ಯಂದೇ ತಪ್ಪು, ಶಿಫಾರಸ್ಸು ಮಾಡಿದ್ದ ಖರ್ಗೆದು ಇನ್ನೂ ತಪ್ಪು."

"ಶ್ಯಾಮನೂರು ಬಗ್ಗೆ ಏನೇಳ್ತಿ?"

"ಶಾಮನೂರು ದೊಡ್ಡ ಮನ್ಸ ಸಾರ್. ದಾವಣಗೆರೆ ಕಟ್ಟಿದ ಮನ್ಸ. ಸುಮ್ಮನೆ ಅವ್ರುನ್ನ ಮಂತ್ರಿಮಾಡಿ ವಯಸ್ಸಿಗೆ ಒಂದು ಗೌರವ ಕೊಟ್ಟಿದ್ರು ಅಷ್ಟೆ. ಅವರ ಮಗ ಅವ್ರುರಿಗಿಂತ ಓಕೆ. ಆದ್ರೆ ಜನ ಬಳಕೆ ಕಮ್ಮಿ. ಅದ್ಕೆ ದಾವಣಗೆರೆ ಜನ್ನಲ್ಲಿ ಬಿಜೆಪಿಗೋದದ್ದು. ಈಗೇನಾರ ಅವ್ರುರ ವಾಪಸ್ ಕರಕಂಡು ಬತ್ತನೊ ಯಂಗೆ ನೋಡಬೇಕು ಸಾರ್."

"ಹೊಸದಾಗಿ ಮಂತ್ರಿಗಳಾದೋರ ಪೈಕಿ ಯಾರಿಷ್ಟ ನಿನಗೆ?"

"ಕಾಗೋಡು ತಿಮ್ಮಪ್ಪ ಸಾರ್."

"ಯಾಕೆ?"

"ಅವ್ರುರಿಗೆ ಜನಗಳಿಗೆ ಅನುಕೂಲ ಮಾಡದು ಗೊತ್ತು, ಖಾತೆ ಚೆನ್ನಾಗಿ ತಿಳಕಂಡಿರತರೆ. ಅಧಿಕಾರಿಗಳು ಹೆದರತರೆ. ಅಂಥವರಿಂದ ಸರ್ಕಾರಕ್ಕೆ ಒಳ್ಳೆ ಹೆಸರು ಬತ್ತದೆ ಸಾರ್."

"ರಮೇಶ್ ಕುಮಾರ್?"

"ಬುದ್ಧಿವಂತ ಬ್ರಾಹ್ಮಣ. ಸಮಯ ಸಂದರ್ಭ ನೋಡಿ ಮಾತಾಡ್ತಾನೆ."


"ಎಂ. ಕೃಷ್ಣಪ್ಪನ್ನ ಕೈಬುಟ್ಟಿದ್ರ ಬಗ್ಗೆ ಏನೇಳ್ತಿ?"

"ಬುಡಬಾರದಿತ್ತು ಸಾರ್. ದುಡ್ಡು ಜಾಸ್ತಿಯಾಗಿರೋ ಮನ್ಸ ಅವುನು. ಮಂತ್ರಿಯಾಗಿದ್ರೆ ಲಂಚ ವಡಿತಿರಲಿಲ್ಲ. ಅವ್ರುನ ಮನಿಗೋದ್ರೆ ಮದ್ದು ತಿಂಡಿ ಕೊಟ್ಟು ಆಮ್ಯಾಲೆ ಮಾತಾಡುಸ್ತನೆ."

"ಅಂಗಾದ್ರೆ ಬೆಂಗಳೂರ ವಿಜಯನಗರದಲ್ಲಿ ಪ್ರತಿಭಟನೆ ಮಾಡಿದೋರ್‍ಯಲ್ಲ ಅವ್ರುನ ಮನೆ ತಿಂಡಿ ತಿಂದೋರ?"

"ಹೌದು ಸಾರ್. ನಮ್ಮ ಜನ ಅನ್ನದ ಋಣ ಇಟಗಳದಿಲ್ಲ. ಅದ್ಕೆ ಮೆಟ್ರೋ ರೈಲಿಗೆ ನುಗ್ಗಿ ಮಕ್ಕಳನ್ನಲ್ಲ ಅಳಿಸಿರೊದು."

"ಥೂತ್ತೇರಿ!!!"


ಅಂಬಿ ಭಕ್ತರ ಆಕ್ರೋಶ

04⇦

ಮತ್ತು ದಲಿತ ಕೋಟಾ ಸರಿದೂಗಿಸಲು ಯಾರನ್ನು ಕೈಬಿಡುವುದು? ಬೇರೆ ವಿಧಿಯಿಲ್ಲದೆ ಸಿದ್ದು ಖಮರುಲ್‌ಗೆ ಕೊಕ್ ಕೊಟ್ಟು ಮೈಸೂರಿನ ತನ್ವೀರ್ ಸೇಠ್ ಹೆಸರು ಸೇರಿಸಬೇಕಾಯಿತು. ಇನ್ನು ದಲಿತರಲ್ಲಿ ಸಂಖ್ಯೆ ಸರಿದೂಗಿಸಬೇಕೆಂದರೆ ಅದರಲ್ಲೂ ಒಂದಲ್ಲ ಒಂದು ಕುರ್ಚಿ ಖಾಲಿಯಾಗಲೇಬೇಕಲ್ಲ, Easy ಟಾರ್ಗೆಟ್ಟಾಗಿದ್ದೇ ಶ್ರೀನಿವಾಸ್ ಪ್ರಸಾದ್. ಮಹದೇವಪ್ಪ, ಎಚ್. ಆಂಜನೇಯರಂಥವರನ್ನಂತೂ ಅಲ್ಲಾಡಿಸಲಾಗದು. ಆಂಜನೇಯ ಎಡಗೈ ಮತ್ತು ಯುವಕ. ಇದ್ದುದರಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಸಿದ್ದು ಪರವಾಗಿ ನುಗ್ಗಬಲ್ಲ ಧೈರ್ಯಶಾಲಿ.

ಸಹಜವಾಗೇ ಜಾಗ ಖಾಲಿಮಾಡಬೇಕಾಗಿದ್ದು ಶ್ರೀನಿವಾಸ್ ಪ್ರಸಾದರೇ. ವರ್ಷದ ಹಿಂದೆಯೇ ಅನೇಕ ಪತ್ರಿಕೆಗಳು ಅದಕ್ಷ ಮತ್ತು ನಿಷ್ಕ್ರಿಯ ಮಂತ್ರಿಗಳ ಸಮೀಕ್ಷೆ ಮಾಡಿದ್ದವಲ್ಲ, ಅದರಲ್ಲಿ ಮುಂಚೂಣಿಯಲ್ಲಿದ್ದದ್ದು ಅಂಬರೀಶ್, ಶ್ರೀನಿವಾಸ್‌ಪ್ರಸಾದ್, ಚಿಂಚನಸೂರ್, ಖಮರುಲ್, ಶಾಮನೂರ್, ದಿನೇಶ್ ಗುಂಡೂರಾವ್, ತಂಗಡಗಿ, ತಹಸೀಲ್ದಾರ್ ಇತ್ಯಾದಿ ಹೆಸರುಗಳೇ ತಾನೆ? ಸಾಲದ್ದಕ್ಕೆ ಸೋಮಶೇಖರ್ ನೇತೃತ್ವದ ಸಮಾನ ಮನಸ್ಕ ಅತೃಪ್ತರು ಕೂಡ ಅಸಮರ್ಥರನ್ನು ಕಿತ್ತಾಕುವಂತೆ ಒತ್ತಾಯಿಸುತ್ತಲೇ ಇದ್ದರಲ್ಲ, ಈ ಎಲ್ಲಾ ಒತ್ತಡಗಳಲ್ಲೂ ತಮ್ಮ ನಿಷ್ಕ್ರಿಯತೆಯೇ ಎದ್ದು ಕಂಡಾಗಲೂ ಅಂಬಿಯಾಗಲಿ, ಪ್ರಸಾದ್, ಖಮರುಲ್, ಶಾಮನೂರು, ಚಿಂಚನಸೂರು ಇತ್ಯಾದಿಗಳ್ಯಾರಾದರೂ ಎಚ್ಚೆತ್ತುಕೊಂಡರೆ?

ಸಹಜವಾಗೇ ಹೊಸಬರಿಗಾಗಿ ಇಂಥ ನಿಷ್ಕ್ರಿಯರೆಲ್ಲ ಸ್ಥಾನಬಿಟ್ಟುಕೊಟ್ಟು ತಮ್ಮ ಗೌರವವನ್ನೂ ಪಕ್ಷದ ಗೌರವವನ್ನೂ ಉಳಿಸಿದ್ದರೆ ಆ ಮಾತು ಬೇರೆ. ಇಲ್ಲಿ ಮುಖ್ಯಮಂತ್ರಿಯಾಗಿ ಸಿದ್ದು ಕೂಡ ಮುತ್ಸದ್ದಿತನ ಮೆರೆಯಲಿಲ್ಲ. ಒಂದೋ ಯಾರೆಲ್ಲ ಜಾಗ ಬಿಟ್ಟುಕೊಡಬೇಕಿತ್ತೋ ಅಂಥವರನ್ನೆಲ್ಲ ಪ್ರತ್ಯೇಕವಾಗಿ ಕರೆಸಿಕೊಂಡು ತನ್ನ ಅನಿವಾರ್ಯತೆಯನ್ನು ವಿವರಿಸಬೇಕಿತ್ತು. ಮನವೊಲಿಸಬೇಕಿತ್ತು. ಅಥವಾ ಮುಖ್ಯಮಂತ್ರಿಯಾಗಿ ಇನ್ನೂ ಒಂದು ತಂತ್ರ ಬಳಸಬಹುದಿತ್ತು, ಹೇಗೂ ಅವರ ಆಪ್ತರೆಂದೇ ಆಂಜನೇಯ, ಎಚ್.ಕೆ. ಪಾಟೀಲ್, ಮಹದೇವಪ್ಪ, ಮಹದೇವ ಪ್ರಸಾದ್, ಕೃಷ್ಣ ಭೈರೇಗೌಡ, ಜಯಚಂದ್ರ, ದೇಶಪಾಂಡೆ, ಖಾದರ್ ಇತ್ಯಾದಿ ಹದಿನಾಲ್ಕು ಮಂದಿ ಮಂತ್ರಿಗಳಿದ್ದರಲ್ಲ.

ಸಂಪುಟ ಪುನರಚನೆಗೂ ಮುನ್ನ ಎಲ್ಲ ಸಚಿವರಿಂದಲೂ ರಾಜೀನಾಮೆ ಪಡೆದಿದ್ದರೆ ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲ. ಆನಂತರ ತನಗೆ ಬೇಕಾದವರನ್ನಷ್ಟೇ ಮುಂದುವರೆಸಿ ಮಿಕ್ಕವರನ್ನು ಕೈಬಿಡಬಹುದಿತ್ತು. ಆಗ ಯಾರಿಗೂ ಅಸಮಾಧಾನವಾಗುತ್ತಿರಲಿಲ್ಲ. ಸಮಸ್ಯೆಯೆಂದರೆ ಒಂದೆಡೆ ಹೈಕಮಾಂಡ್ ಒತ್ತಡ, ಮತ್ತೊಂದೆಡೆ ಹಿರಿಯ ನಾಯಕರ ಜಗ್ಗಾಟ, ಮಗದೊಂದೆಡೆ ಮಂತ್ರಿಗಿರಿಗಾಗಿ ಹೊಸಬರ ಲಾಬಿ, ಇನ್ನೊಂದೆಡೆ ಮಂತ್ರಿಯಾಗೇ ಜಗ್ಗಾಟ, ಮಗದೊಂದೆಡೆ ಮಂತ್ರಿಗಿರಿಗಾಗಿ ಹೊಸಬರ ಲಾಬಿ, ಇನ್ನೊಂದೆಡೆ ಮಂತ್ರಿಯಾಗೇ ಉಳಿಯಲು ಮಿಕ್ಕದವರ ನಾನಾತಂತ್ರಗಳಿಂದಾಗಿ ಸಿದ್ದು ದಿಕ್ಕೇ ತೋಚದಂತಾದರು. ಇಲ್ಲಿ ಯಾರಿಗೂ ಪಕ್ಷ ಮುಖ್ಯವಾಗಲಿಲ್ಲ. ಪ್ರತಿಯೊಬ್ಬರೂ ಮಂತ್ರಿಯಾಗಬೇಕು, ಈಗಾಗಲೇ ಮಂತ್ರಿಯಾಗಿರುವವರಿಗೆ ಕಾಯಮ್ಮಾಗಿ ತಾವು ಅದೇ ಹುದ್ದೆಯಲ್ಲಿರಬೇಕು.


ಹಾಳಾಗಲಿ ತಮ್ಮ ಅಸಂತುಷ್ಟಿ, ಆಕ್ರೋಶವನ್ನಂತೂ ಬೀದಿಗೆ ತರದೇ ಜನರೆದುರು ನಗೆಪಾಟಲಾಗಬಾರದೆಂಬ ಕನಿಷ್ಠ ಪರಿವೆಯಾದರೂ ಇರಬೇಕಲ್ಲವೆ? ತನ್ನನ್ನು ಮೂರು ವರ್ಷಗಳ ಕಾಲ ಸಹಿಸಿಕೊಂಡು ಜನರ ಕೋಪಕ್ಕೆ ಗುರಿಯಾದ ಸರ್ಕಾರದ ಬಗ್ಗೆಯಾಗಲಿ, ಪಕ್ಷದ ಬಗ್ಗೆಯಾಗಲಿ ಅಂಬಿಗೆ ಕನಿಷ್ಠ ಕೃತಜ್ಞತೆಯಿಲ್ಲ, ತನ್ನ ಮಂತ್ರಿಗಿರಿ ಹೋಗಲು ಖರ್ಗೆ ಕಾರಣವೆಂದು ಗೊತ್ತಿದ್ದೂ ಶ್ರೀನಿವಾಸ್ ಪ್ರಸಾದ್ ಸಿದ್ದು ವಿರುದ್ಧ ಅನಗತ್ಯವಾಗಿ ಯುದ್ಧ ಘೋಷಿಸುತ್ತಾರೆ. ಚಿಂಚನಸೂರ್‌ಗೆ ಈತನಕ ತಾನು ಮಂತ್ರಿಯಾಗಿದ್ದೇ ಪಕ್ಷಕ್ಕಾದ ದೊಡ್ಡ ನಷ್ಟವೆಂಬ ಪರಿಜ್ಞಾನವಿಲ್ಲ, ಪಕ್ಷನಿಷ್ಠೆ, ಸಿದ್ಧಾಂತ, ಜನ ಏನೆಂದುಕೊಂಡಾರೆಂಬ ಅಳುಕು. ಇದೆಲ್ಲದರಿಂದ ಮುಂದೊಮ್ಮೆ ತಮಗೆ ಹಾನಿಯೆಂಬ ಕನಿಷ್ಠ ಪ್ರಜ್ಞೆಯಿಲ್ಲದೆ ಬೀದಿಗಿಳಿದು ಬೆಂಕಿ ಹಚ್ಚ ಹೊರಟ ಕಾಂಗ್ರೆಸ್ಸಿಗರಿಗಿಂತ ಬೇರೆ ಯಾವ ಶತ್ರು ತಾನೇ ಕಾಂಗ್ರೆಸ್ಸಿಗರಲು ಸಾಧ್ಯ?

ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಶತ್ರುವಾಗಿ ಪರಿಣಮಿಸಿದ ವಿಪರ್ಯಾಸಕ್ಕೆ ಏನೆನ್ನಬೇಕು?

● ರಾ. ಸೋಮನಾಥ್


ಖಮರುಲ್ ಬೀದಿರಂಪ

ದಾವಣಗೆರೆ: ವಂಶಾಡಳಿತವನ್ನು ಭದ್ರವಾಗಿಸಿದ ಜಾಣ



ಶಾಮನೂರು ಶಿವಶಂಕರಪ್ಪ


ಅಂತೂಇಂತೂ ಮೂರು ವರ್ಷಗಳ ನಂತರ ಸಿದ್ದರಾಮಯ್ಯನ ಮಂತ್ರಿಮಂಡಲ ಚೂರುಪಾರು ಬದಲಾಗಿದೆ; ಜೊತೆಗೆ ಬೇಗುದಿಯೂ ಭರ್ಜರಿಯಾಗಿಯೇ ಭುಗಿಲೆದ್ದಿದೆ. ಮಂತ್ರಿಗಿರಿಗಾಗಿ ತಮ್ಮ ಬೆಂಬಲಿಗರಿಂದ ರಾಜಕಾರಣಿಗಳು ನಡೆಸುತ್ತಿರುವ 'ಬೆದರಿಕೆ' ಆಟಗಳನ್ನು ಕಂಡು ಜನ ಅಸಹ್ಯ ಪಟ್ಟುಕೊಳ್ಳುತ್ತಿದ್ದಾರೆ. ಅಂತದ್ದರಲ್ಲಿ ಸಚಿವಗಿರಿ ಕಳೆದುಕೊಂಡೂ ತಣ್ಣಗಿದ್ದ ಎರಡು ಕ್ಷೇತ್ರಗಳೆಂದರೆ ಒಂದು ಸಾಗರ ಮತ್ತೊಂದು ದಾವಣಗೆರೆ. ಸಾಗರವನ್ನು ಪ್ರತಿನಿಧಿಸುವ ಕಿಮ್ಮನೆ ರತ್ನಾಕರ್, ರಾಜಕೀಯದಲ್ಲಿದ್ದು ಕೊಂಡೂ 'ರಾಜ'ಕಾರಣದಿಂದ ಅಂತರ ಕಾಯ್ದುಕೊಂಡವರು. ಹಾಗಾಗಿ ಸಂಪುಟದಿಂದ ತಮ್ಮ ವಿದಾಯವನ್ನು ಮುತ್ಸದ್ಧಿತನದಿಂದಲೇ ಸ್ವೀಕರಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸರ್ಕಾರ ತಮಗೆ ನೀಡಿದ್ದ ಗೂಟದ ಕಾರನ್ನು ತೊರೆದು ಖಾಸಗಿ ಕಾರಿನಲ್ಲಿ ಮನೆಗೆ ಮರಳುವ ಮುನ್ನ ತಮ್ಮ ಭದ್ರತಾ ಸಿಬ್ಬಂದಿಗೆ ಊಟಕ್ಕೆ ಕಾಸುಕೊಟ್ಟು ಧನ್ಯವಾದ ಅರ್ಪಿಸುವುದನ್ನು ಅವರು ಮರೆತಿರಲಿಲ್ಲ. ನಿಜಕ್ಕೂ ಇಂತಹ ರಾಜಕಾರಣಿಗಳು ಅಬ್ಬರಗಳ ಮುಂದೆ ನೇಪಥ್ಯಕ್ಕೆ ಸರಿಯುವುದು ದುರಂತ. ಆದರೆ ದಾವಣಗೆರೆ ಲೆಕ್ಕಾಚಾರವೇ ಬೇರೆಯದ್ದು. ಅಲ್ಲಿ ಶಾಮನೂರು ಶಿವಶಂಕರಪ್ಪನಿಗೆ ಮಂತ್ರಿಗಿರಿ ಕೈತಪ್ಪಿದರೂ ಅವರ ಮಗ ಎಸ್.ಎಸ್.ಮಲ್ಲಿಕಾರ್ಜುನ್‌ಗೆ ಸಂಪುಟಭಾಗ್ಯ ದಕ್ಕಿದ್ದರಿಂದ ಅದು ತಣ್ಣಗಿತ್ತು. ಅಪ್ಪನಿಗಿದ್ದ ಅಧಿಕಾರ ಮಗನಿಗೆ ಶಿಫ್ಟಾಗಿದೆ ಅನ್ನೋದನ್ನು ಬಿಟ್ಟರೆ 'ಶಾಮನೂರು' ಫ್ಯಾಮಿಲಿ ಕಳೆದುಕೊಂಡದ್ದು ಏನೂ ಇಲ್ಲ. ಆದಾಗ್ಯೂ ಈ ಪಿತ್ರಾರ್ಜಿತ ಹಸ್ತಾಂತರ ಇನ್ನು ಶಾಮನೂರು ಶಿವಶಂಕರಪ್ಪನವರ ರಾಜಕೀಯ ಬದುಕು ವಿಶ್ರಾಂತದತ್ತ ಜಾರುವುದನ್ನು ಸ್ಪಷ್ಟವಾಗಿ ಸಾಬೀತುಮಾಡಿದೆ.

ಶಿವಶಂಕರಪ್ಪ 65ರ ದಶಕದಿಂದಲೂ ಕಾಂಗ್ರೆಸಿನ ಕಟ್ಟಾಳುವಾಗಿ ದುಡಿದಂತಹ ಮನುಷ್ಯ. ಕಾಂಗ್ರೆಸ್ 'ವಂಶವೃಕ್ಷ'ದ ಇಂದಿರಾ, ರಾಜೀವ್, ಸೋನಿಯಾಗಳಂತಹ ಬೇರುಗಳ ಜೊತೆ ಒಡನಾಡುತ್ತಲೇ ದೇವರಾಜ ಅರಸು, ನಿಜಲಿಂಗಪ್ಪರಂತಹ ಬಿಳಲು ಬೇರುಗಳಲ್ಲೂ ಜೀಕಾಡಿದವರು. ದಾವಣಗೆರೆಯೆಂಬ ಮ್ಯಾಂಚೆಸ್ಟರ್ ನಗರದ ರಾಜಕಾರಣದಲ್ಲಿ ತೆವಳುತ್ತಲೇ ರಾಜಕೀಯ ಶಿಖರ ಏರಿದ ಶಿವಶಂಕರಪ್ಪ 80ರ ದಶಕದ ಕಮ್ಯುನಿಸ್ಟ್ ಕಾರ್ಮಿಕ ಚಳವಳಿಯ ಅಬ್ಬರದ ಹೊಡೆತದಲ್ಲಿ ತರಗುಟ್ಟಿದರೂ ಕಾಂಗ್ರೆಸು ಮತ್ತು ಕಮ್ಯುನಿಸ್ಟ್‌ನ ಹೊಂದಾಣಿಕೆಯ ರಾಜಕಾರಣದಲ್ಲೇ ತಮ್ಮನ್ನು ತಾವು ಜಾಣತನದಿಂದ ರಾಜಕೀಯವಾಗಿ ಉಳಿಸಿಕೊಂಡು ಬಂದವರು. ದಿವಂಗತ ಕಾಂ. ಪಂಪಾಪತಿ 80ರ ದಶಕದಲ್ಲಿ ದಾವಣಗೆರೆಯ ಕಾರ್ಮಿಕ ವರ್ಗದ ಪಾಲಿಗೆ ಮೇರುನಾಯಕ. ನಗರಸಭೆಯಲ್ಲಿ ಅಧಿಕಾರದ ಮೇಲಾಟಕ್ಕೆ ಕಮ್ಯುನಿಸ್ಟ್ ಪಕ್ಷವೇ ಆಗ ನಿರ್ಣಾಯಕವೆನಿಸಿತ್ತು. ಪ್ರಬಲ ಲಿಂಗಾಯತ ಲೆಕ್ಕಾಚಾರಗಳ ನಡುವೆಯೂ ತಮಿಳು ಅಲ್ಪಸಂಖ್ಯಾತನಾಗಿದ್ದ ಕಾಂ. ಪಂಪಾಪತಿ ಮೂರು ಬಾರಿ ದಾವಣಗೆರೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗುವಷ್ಟರಮಟ್ಟಿಗೆ ಇಲ್ಲಿ ದುಡಿಯುವ ಕೈಗಳು ಒಗ್ಗೂಡಿದ್ದವು. ಶಿವಶಂಕರಪ್ಪ, ಮುದೇಗೌಡರು, ಮೋತಿ ಮನೆತನದವರು, ಹರಳೆಣ್ಣೆ ಕೊಟ್ರಬಸಪ್ಪ, ಶಿವಾನಂದಸ್ವಾಮಿ ಮುಂತಾದ ಬಣಜಿಗ ಮತ್ತು ಸಾಧು ಲಿಂಗಾಯತ ಪ್ರಭಾವಿಗಳಿದ್ದರೂ ಕಮ್ಯುನಿಸ್ಟ್ ಹೋರಾಟವನ್ನು ಕಟ್ಟಿಹಾಕಲಿಕ್ಕಾಗದ ಸ್ಥಿತಿ ಆಗ ನಿರ್ಮಾಣವಾಗಿತ್ತು. ಕೇಶವಮೂರ್ತಿಯಂತಹ ಚಾಣಾಕ್ಷ ರಾಜಕಾರಣಿಯೂ ಆಗ ಹಿನ್ನಡೆ ಅನುಭವಿಸಬೇಕಾಗಿ ಬಂದಿತ್ತು.

ಆದರೆ 85ರ ನಂತರ ಕಮ್ಯುನಿಸ್ಟ್ ಪಾರ್ಟಿ ತನ್ನ ಪ್ರಖರತೆ ಕಳೆದುಕೊಳ್ಳಲಾರಂಭಿಸಿತು. ಜಾತಿ ಪ್ರಚೋದಿತ ಬಂಡವಾಳಶಾಹಿ ರಾಜಕಾರಣ ಪಂಪಾಪತಿಯಂತಹ ಎಡಪಂಥೀಯನನ್ನು ಸಹಿಸಿಕೊಳ್ಳದೆ ಮಾಡಿದ ಕುತಂತ್ರಕ್ಕೂ, ಡಂಕೆಲ್ ಎಂಬ ಜಾಗತೀಕರಣ ಹೆಮ್ಮಾರಿ ವಕ್ಕರಿಸಿಕೊಳ್ಳುವುದಕ್ಕೂ ಸರಿಹೋಯ್ತು. ದಾವಣಗೆರೆಯಲ್ಲಿದ್ದ ಹತ್ತಾರು ಕಾಟನ್‌ಮಿಲ್‌ಗಳು ಮುಚ್ಚಿಹೋದವು. ಆ ಕಾರ್ಮಿಕ ಶ್ರಮಜೀವಿಗಳ ಶ್ರಮದಿಂದ ಎದ್ದುನಿಂತಿದ್ದ ಕಮ್ಯುನಿಸ್ಟ್ ಚಳವಳಿ 85ರ ವೇಳೆಗೆ ಮಂಜಿನಂತೆ ಕರಗತೊಡಗಿತು. ಅಲ್ಲಿವರೆಗೂ ತೆವಳುತ್ತಲೇ ರಾಜಕಾರಣ ಮಾಡಿಕೊಂಡಿದ್ದ ಶಿವಶಂಕರಪ್ಪ ಎದ್ದುನಿಂತದ್ದು ಕಮ್ಯುನಿಸ್ಟ್ ಪಾರ್ಟಿ ಸಂಪೂರ್ಣವಾಗಿ ನೆಲಕಚ್ಚಿದ ಮೇಲೆಯೇ!

ಹೆಚ್ಚೂಕಮ್ಮಿ 70ರ ದಶಕದಿಂದ 85ರ ತನಕ ಶಾಮನೂರು ಶಿವಶಂಕರಪ್ಪನವರ ರಾಜಕಾರಣ ನಗರಸಭೆ ಮಟ್ಟಕ್ಕಷ್ಟೇ ಸೀಮಿತವಾಗಿತ್ತು. ಯಾವಾಗ ದೇವರಾಜ ಅರಸು, ದಿಲ್ಲಿಯ ಇಂದಿರಮ್ಮನ ವಿರುದ್ಧ ಬಂಡೆದ್ದು ತಮ್ಮದೇ ಸ್ವಂತ ಪಾರ್ಟಿ ಕಟ್ಟಿಕೊಂಡು ಅಖಾಡಕ್ಕಿಳಿದರೋ ಆಗಲೇ ಶಾಮನೂರು ಶಿವಶಂಕರಪ್ಪ ರಾಜ್ಯ ರಾಜಕಾರಣಕ್ಕೆ ಎಂಟ್ರಿಯಾದದ್ದು. ಅರಸು ಪಾರ್ಟಿಯ ಪರವಾಗಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಶಿವಶಂಕರಪ್ಪ ಸೋಲಬೇಕಾಗಿ ಬಂದರೂ ರಾಜಕಾರಣದ ಹೊಸ ವಿಸ್ತಾರ ಅವರ ಮುಂದೆ ತೆರೆದುಕೊಂಡಿತ್ತು. ಅದಕ್ಕೂ ಮುನ್ನ ದಿವಂಗತ ಗಾಂಜೀವೀರಪ್ಪ, ದಿ|| ಸಿದ್ದವೀರಪ್ಪರ ರಾಜಕೀಯ ವೈರತ್ವವನ್ನು ಸಮೀಪದಿಂದ ಗಮನಿಸುತ್ತಲೇ ಪಳಗಿದ್ದ ಶಿವಶಂಕರಪ್ಪ ಲೋಕಸಭೆ ಸೋಲಿನ ನಂತರ ವಾಪಾಸ್ ಮೂಲ ಕಾಂಗ್ರೆಸ್ಸಿಗೆ ಬಂದು ದಾವಣಗೆರೆ ಕ್ಷೇತ್ರದಿಂದ ಎಂಎಲ್‌ಎ ಆಗಿ ಆಯ್ಕೆಗೊಂಡರು.

ಶಿವಶಂಕರಪ್ಪನ ರಾಜಕೀಯ ನಾಗಾಲೋಟಕ್ಕೆ ಸಾಥ್ ನೀಡಿದ್ದು ದಾವಣಗೆರೆಯ ಜಾತಿ ರಾಜಕಾರಣ. ಸಾಧು ಲಿಂಗಾಯತರು, ಬಣಜಿಗ ಮತ್ತು ಪಂಚಮಸಾಲಿ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎನ್ನುವುದಕ್ಕಿಂತ ಈ ಸಮುದಾಯಗಳ ಸಿರಿವಂತ ಬಂಡವಾಳಶಾಹಿಗಳು ರಾಜಕಾರಣದ ಮೇಲೆ ಪ್ರಭಾವ ಉಳಿಸಿಕೊಂಡು ಬಂದಿದ್ದರು. ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು ವೀರಶೈವ ಮಠಗಳಿದ್ದರೂ ಸಾಧು ಲಿಂಗಾಯತರನ್ನು ಪ್ರತಿನಿಧಿಸುವ ಸಿರಿಗೆರೆಯ ತರಳಬಾಳು ಮಠ ರಾಜಕೀಯದಲ್ಲಿ ಚಿತ್ತ ಹಿಡಿದು ನಿಂತಿದ್ದರೆ, ಬಣಜಿಗರು ಮತ್ತು ಪಂಚಮಸಾಲಿ ಲಿಂಗಾಯತರನ್ನು ಪ್ರತಿನಿಧಿಸುವ ಚಿತ್ರದುರ್ಗದ ಮುರುಘ ಮಠ ರಾಜಕೀಯದಿಂದ ದೂರ ಉಳಿದಿದ್ದರಿಂದ ಸಾಧು ಲಿಂಗಾಯತರು ಇಲ್ಲಿ ಮತ್ತಷ್ಟು ಪ್ರಬಲಗೊಳ್ಳುವುದಕ್ಕೆ ನೆರವಾಯ್ತು. ಅಸಲಿಗೆ ದಾವಣಗೆರೆಯ ಬ್ಯಾಂಕು, ಶೈಕ್ಷಣಿಕ ಸಂಸ್ಥೆಗಳು ಇದ್ದುದೇ ಬಣಜಿಗ ಸಮುದಾಯದ ಕೈಲಿ. ಬಾಪೂಜಿ ಬ್ಯಾಂಕು, ಜೆ.ಜೆ.ಎಂ. ವೈದ್ಯಕೀಯ ಕಾಲೇಜುಗಳು ಹುಟ್ಟಿಕೊಂಡದ್ದೇ ಬಣಜಿಗ ಸಮುದಾಯದ (ಕೊಟ್ರಬಸಪ್ಪ) ಆಶಯದಿಂದ. ಆದರೆ ನಂತರದಲ್ಲಿ ಅವೆಲ್ಲ ಬಣಜಿಗರ ಕೈತಪ್ಪಿ ಸಾಧು ಲಿಂಗಾಯತರ ಕೈಗೆ, ಅದರಲ್ಲೂ ಶಾಮನೂರು ಶಿವಶಂಕರಪ್ಪನಂತಹ ವ್ಯಾಪಾರಸ್ಥನ ಕೈಗೆ ಬಂದದ್ದು ರೋಚಕ ಇತಿಹಾಸ. ಹೀಗೆ ಶ್ರೀಮಂತವಾಗುತ್ತಲೇ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ರಾಜಕಾರಣವನ್ನೇ ನಿಯಂತ್ರಿಸುವಷ್ಟು ತಾಕತ್ತೂ ಶಿವಶಂಕರಪ್ಪನಿಗೆ ಒಲಿದುಬಂತು.



ಎಸ್.ಎಸ್. ಮಲ್ಲಿಕಾರ್ಜುನ್

1997ರಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಕತ್ತರಿಸಿ ತೆಗೆದು ದಾವಣಗೆರೆಯನ್ನು ಸ್ವತಂತ್ರ ಜಿಲ್ಲೆಯನ್ನಾಗಿ ಘೋಷಿಸಿದ ಮೇಲಂತೂ ಶಿವಶಂಕರಪ್ಪ ಹೊಸ ಜಿಲ್ಲೆಯ ರಾಜಕೀಯ ಚಕ್ರವರ್ತಿಯಂತೆ ಎದ್ದುನಿಂತರು. ಜಿಲ್ಲೆಯ ತುಂಬಾ ತಮ್ಮ ಹಣಕಾಸು, ಕೈಗಾರಿಕೆ, ಶೈಕ್ಷಣಿಕ ರಂಗದಿಂದಲೇ ಹೆಸರು ಮಾಡಿದ್ದಲ್ಲದೇ ಈ ಭಾಗದ ರಾಜಕೀಯವಾಗಿ ಪ್ರಶ್ನಾತೀತ ನಾಯಕರಾಗಿ ಬೆಳೆದರು. ಇಲ್ಲಿ ಜೆ.ಎಚ್. ಪಟೇಲ್ ಮಾಡಿಕೊಂಡ ಒಂದು ಯಡವಟ್ಟೂ ಇದೆ. ಶಿವಮೊಗ್ಗದಲ್ಲಿದ್ದ ಚನ್ನಗಿರಿ, ಹೊನ್ನಾಳಿಗಳನ್ನು ಪಟೇಲ್ ದಾವಣಗೆರೆ ಜಿಲ್ಲೆಗೆ ತಂದದ್ದೇ ತಮ್ಮ ರಾಜಕೀಯ ಪ್ರಭಾವವನ್ನು ಸ್ಥಿರಗೊಳಿಸಿಕೊಳ್ಳಲು. ಸಾಧು ಲಿಂಗಾಯತರ ಶಿವಶಂಕರಪ್ಪನಿಗೆ ಬಣಜಿಗರ ರಾಜಕಾರಣ ಸರಿಸಾಟಿಯಾಗಿ ಬೆಳೆಸುವ ಇರಾದೆ ಅವರಿಗಿತ್ತು. ಆದರೆ ಪಟೇಲರ ನಸೀಬು ಸರಿ ಇರಲಿಲ್ಲ. ಇನ್ನು ಅವರ ಪುತ್ರ ಮಹಿಮಾ ಪಟೇಲ್‌ನಾದರೂ ತಂದೆಯ ಆಸೆ ಈಡೇರಿಸಿಯಾನೆ ಎಂದುಕೊಂಡರೆ ಅವನೂ ಕಲ್ಕಿ ಭಗವಾನನ ಹಿಂದೆ ಜಾಗಟೆ ಬಾರಿಸುತ್ತಲೇ ನೇಪತ್ಯಕ್ಕೆ ಸರಿದ. ಅಲ್ಲಿಗೆ ಶಾಮನೂರು ಶಿವಶಂಕರಪ್ಪನ ಕೈ ರಾಜಕಾರಣಕ್ಕೆ ಯಾರೂ ಎದುರು ನಿಲ್ಲಲು ಸಾಧ್ಯವಾಗಲೇ ಇಲ್ಲ. ಶಿವಶಂಕರಪ್ಪ ನಿಧಾನಕ್ಕೆ ಕೈ ಪಕ್ಷದಲ್ಲಿ ಯಜಮಾನ ಸಂಸ್ಕೃತಿಯ ರಾಜಕಾರಣದ ಹವಾ ಎಬ್ಬಿಸಿದರು. ಅಷ್ಟೊತ್ತಿಗಾಗಲೇ ಅಪ್ಪನೊಂದಿಗೆ ಮಗ ಮಲ್ಲಿಕಾರ್ಜುನ್ ಕೂಡಾ ರಾಜಕಾರಣಕ್ಕೆ ಎಂಟ್ರಿ ಕೊಟ್ಟು, ತಂದೆಯ ಪೊಲಿಟಿಕಲ್ ಪಾಳೆಗಾರಿಕೆಗೆ ಒತ್ತಾಸೆಯಾಗಿ ನಿಂತ. ಒಂದಾಗಿದ್ದ ದಾವಣಗೆರೆ ವಿಧಾನಸಭಾ ಕ್ಷೇತ್ರ ಎರಡು (ಉತ್ತರ ಮತ್ತು ದಕ್ಷಿಣ) ಕ್ಷೇತ್ರವಾದದ್ದಂತೂ ಶಾಮನೂರು ಫ್ಯಾಮಿಲಿಗೆ ಅದೃಷ್ಟವನ್ನೇ ಹೊತ್ತು ತಂದಿತ್ತು. ಅಪ್ಪ ಒಂದು ಕ್ಷೇತ್ರದಲ್ಲಿ ಶಾಸಕನಾದರೆ, ಮಗ ಮತ್ತೊಂದು ಕ್ಷೇತ್ರದಲ್ಲಿ ಶಾಸಕ.

ಕಾಂಗ್ರೆಸ್ ಖಜಾಂಚಿಯಾಗಿದ್ದ ತಮ್ಮ ಪ್ರಭಾವವನ್ನೆಲ್ಲ ಪಣಕ್ಕಿಟ್ಟು ಮಗ ಮಲ್ಲಿಕಾರ್ಜುನನನ್ನು ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಕ್ರೀಡಾ ಸಚಿವನನ್ನಾಗಿಸಿದ ಶಿವಶಂಕರಪ್ಪ



ಶಿವಮೂರ್ತಿ ನಾಯ್ಕ

ಮಾಯಕೊಂಡ ನಾಯ್ಕನ ಒಂಟಿರೋದನ

ಸಿದ್ದರಾಮಯ್ಯನ ಸಂಪುಟ ಪುನಾರಚನೆಯಾದದ್ದೇ ತಡ 'ಅತೃಪ್ತ' ಆತ್ಮಗಳ ಹೊಯ್ದಾಟ ಮುಗಿಲುಮುಟ್ಟುತ್ತಿದೆ. ತಮ್ಮ ಬೆಂಬಲಿಗರನ್ನು ಮುಂದಿಟ್ಟುಕೊಂಡು ನಡೆಸುತ್ತಿರುವ ರೇಜಿಗೆಗಳು ಅಸಹ್ಯ ಹುಟ್ಟಿಸುತ್ತಿವೆ. ಅವುಗಳಲ್ಲಿ ಮಾಯಕೊಂಡದ ಎಂಎಲ್‌ಎ ಶಿವಮೂರ್ತಿ ನಾಯ್ಕನ ಒಂಟಿರೋದನ ನಗೆಪಾಟಲಿಗೆ ಈಡಾಗಿರೋದು ರಂಜನೀಯವಾಗಿದೆ. ತಮ್ಮ ನಾಯಕನಿಗೆ ಮಂತ್ರಿಗಿರಿ ತಪ್ಪಿತು ಅಂತ ಬೀದಿಗಿಳಿಯಲು ಒಬ್ಬೇ ಒಬ್ಬ ಬೆಂಬಲಿಗನನ್ನೂ ಸಂಪಾದಿಸಿಕೊಳ್ಳದ ನಾಯ್ಕ, ವಿಧಾನಸೌಧದ ಮುಂದೆ ಚಕ್ಕಮಕ್ಕಳ ಹಾಕಿ ಕೂತು ಶಾಮನೂರು ಶಿವಶಂಕರಪ್ಪನ ಫ್ಯಾಮಿಲಿ ವಿರುದ್ಧ ಲಬೋಲಬೋ ಬಾಯಿಬಡಿದುಕೊಳ್ಳುತ್ತಿದ್ದರೆ, ಖುದ್ದು ಮಾಯಕೊಂಡದ ಮಂದಿಯೇ ಮುಸಿಮುಸಿ ನಗಾಡುತ್ತಿದ್ದರು. ಮಂತ್ರಿಯಾಗುವುದೇ ಶತಮಾನದ ಸಾಧನೆಯೆಂಬ ಹುಂಬತನದಲ್ಲಿ ದೆಹಲಿಯಲ್ಲಿ ಮಂತ್ರಿಗಿರಿಗೆ ಲಾಬಿ ಶುರು ಹಚ್ಚಿಕುಂತಿದ್ದ ಶಿವಮೂರ್ತಿ ನಾಯ್ಕನ ಪರ ಬ್ಯಾಟ್ ಬೀಸಲು ಹೈಕಮಾಂಡ್ ಪಡಸಾಲೆಯಲ್ಲಿರಲಿ, ರಾಜ್ಯದ ಕೆಪಿಸಿಸಿ ಅಂಗಳದಲ್ಲೂ ಒಬ್ಬ ನಾಯಕನಿರಲಿಲ್ಲ. ಆದರೂ ಹೊಸ ಸಚಿವರ ಪಟ್ಟಿಯಲ್ಲಿ ನನ್ನ ಹೆಸರಿದೆ ಎನ್ನುವಂತೆ ಪ್ರಚಾರ ಗಿಟ್ಟಿಸಿಬಿಟ್ಟಿದ್ದ. ಅಷ್ಟಕ್ಕೂ, ಶಿವಮೂರ್ತಿ ನಾಯ್ಕನ ನರಿಬುದ್ಧಿ ಸಿದ್ದರಾಮಯ್ಯನಿಗೆ ತಿಳಿಯದುದೇನಲ್ಲ. ಹಿಂದೆ ಬಂಗಾರಪ್ಪನಂತಹ ಬಂಗಾರಪ್ಪನಿಗೇ ನೀರು ಕುಡಿಸಿ ಬಂದ ಶಿವಮೂರ್ತಿಯನ್ನು ಸಿದ್ದರಾಮಯ್ಯ ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ.

ಹುಸಿ ಹುಂಬತನ ಹುಟ್ಟಿಸಿಕೊಂಡು ಕೊಸರಾಟ ಶುರುಹಚ್ಚಿಕೊಂಡಿದ್ದ ಶಿವಮೂರ್ತಿಗೆ ಯಾವಾಗ ರಾಜಭವನದ ಅಂಗಳದಲ್ಲಿ ಹೊಸ ಸಚಿವರ ಪ್ರಮಾಣವಚನವೂ ಮುಗಿದುಹೋಯ್ತೋ ಆಗ ವಿಪರೀತ ಆಶಾಭಂಗವಾಗಿತ್ತು. ಅವನ ಅಧಿಕಾರದ ಹಪಾಹಪಿ ಸೀದಾ ವಿಧಾನಸೌಧದ ಆವರಣಕ್ಕೆ ತಂದು ಅವನನ್ನು ಕೆಡವಿತ್ತು. ಕೆಂಗಲ್ ಹನುಮಂತಯ್ಯನ ಪ್ರತಿಮೆಯೆದುರು ಒಬ್ಬನೇ ಅಬ್ಬೇಪಾರಿಯಂತೆ ಕೂತು "ನನ್ನನ್ನು ಮಂತ್ರಿ ಮಾಡಲಿಲ್ಲ" ಅಂತ ಕಣ್ಣೀರಿಟ್ಟ. "ಶಾಮನೂರು ಮನೆತನದವರು ನನ್ನನ್ನು ರಾಜಕೀಯವಾಗಿ ತುಳಿದರು, ನನಗೆ ಮಂತ್ರಿ ಮಂಡಲದಲ್ಲಿ ಸ್ಥಾನ ಸಿಗುವುದನ್ನೂ ತಪ್ಪಿಸಿದರು" ಅಂತೆಲ್ಲ ಬಡಬಡಿಸುತ್ತಿದ್ದ ನಾಯ್ಕ ಕಾಮಿಡಿಪೀಸ್ ಆಗಿದ್ದಲ್ಲದೆ ತನಗೆ ಮತಹಾಕಿದ ಇಡೀ ಮಾಯಕೊಂಡದ ಜನರ ಮರ್ಯಾದೆಯನ್ನೇ ಮೂರು ಕಾಸಿಗೆ ಹರಾಜು ಹಾಕಿದ್ದಾನೆ. ಕ್ಷೇತ್ರದ ಅನುದಾನಕ್ಕಾಗೊ, ಅಭಿವೃದ್ಧಿಗಾಗೊ ಹೀಗೆ ಬೀದಿಗೆ ಬರುವ ಮನಸ್ಸು ಮಾಡಿದ್ದರೆ ನಿಜಕ್ಕೂ ಆತ ಹೀರೊ ಆಗಿಬಿಡುತ್ತಿದ್ದ. ಆದರೆ ಗೆದ್ದು ಶಾಸಕನಾದ ನಂತರ ಕ್ಷೇತ್ರದತ್ತ ಮುಖವನ್ನೇ ಮಾಡದ, ಮಗ-ಹೆಂಡತಿಯನ್ನು ಬಿಟ್ಟು ಕ್ಷೇತ್ರದ ಅಧಿಕಾರಿಗಳಿಂದ ವಸೂಲಿಗಿಳಿದ ಶಿವಮೂರ್ತಿ ನಾಯ್ಕ ಬೀದಿಗೆ ಬಂದದ್ದು ತನಗೆ ಅಧಿಕಾರ ಸಿಗಲಿಲ್ಲ ಅಂತ!

ಶಿವಮೂರ್ತಿ ಮಂತ್ರಿಯಾಗಲೆಂದು ಅವನಿಗೆ ಮತ ಹಾಕಿ ಗೆಲ್ಲಿಸಿದ ಮತದಾರನಿಗೇ ಅನ್ನಿಸಲಿಲ್ಲ, ಹೋಗಲಿ, ಮಂತ್ರಿಮಂಡಲದಲ್ಲಿ ಅವಕಾಶ ಸಿಗಲಿಲ್ಲ ಅಂತಾ ಮಾಯಕೊಂಡದಲ್ಲಿ ಅವನ ಅಭಿಮಾನಿಗಳು ಏನಾದರೂ ದನಿ ಎತ್ತಿ ಅನ್ಯಾಯ ಎಂದರಾ, ಅದೂ ಇಲ್ಲ. ಇವನಿಗಾದ 'ಅನ್ಯಾಯ'ಕ್ಕೆ ಮಾಯಕೊಂಡದ ಒಂದೇ ಒಂದು ಹುಲ್ಲುಕಡ್ಡಿಯೂ ಸೊರಗಲಿಲ್ಲ. ಮಾನಮರ್ಯಾದೆ ಬಿಟ್ಟು ವಿಧಾನಸೌಧದೆದುರು ಒಂಟಿ ಪಿಶಾಚಿಯಂತೆ ಧರಣಿ ಕೂತ ಇವನಿಗೆ ಮತ ಹಾಕಿ ಗೆಲ್ಲಿಸಿದ್ದ ತಪ್ಪಿಗೆ ಕ್ಷೇತ್ರದ ಮತದಾರ ಪಶ್ಚಾತ್ತಾಪ ಪಡುವಂತಾಯಿತು. ಇವನ ಹಪಾಹಪಿತನ ಕಂಡು ಅಯ್ಯೋ ಪಾಪ ಅಂತ ಸಾಂತ್ವನ ಹೇಳುವುದಕ್ಕೂ ಯಾರೊಬ್ಬರು ಬರಲಿಲ್ಲ ಎನ್ನುವುದು ಶಿವಮೂರ್ತಿ ನಾಯ್ಕನ ಯೋಗ್ಯತೆಯನ್ನು ಎತ್ತಿ ತೋರಿಸುತ್ತದೆ. 'ಅಂದಹಾಗೆ, ಈ ಶಿವಮೂರ್ತಿ ನಾಯ್ಕ ಅದೆಂತಹ ಖತರ್ನಾಕ್ ಆಸಾಮಿಯೆಂದರೆ ತನ್ನ ಚೇರ್ಮನ್‌ಗಿರಿಯಲ್ಲಿ ನಡೆಸುವ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ನೂರಾರು ಶಿಕ್ಷಕ ಸಿಬ್ಬಂದಿಗಳಿಂದಲೇ ಲಕ್ಷಾಂತರ ರೂಪಾಯಿ ಲಪಟಾಯಿಸಿದಂತವನು.

ಸರ್ವಿಸ್ ಸರ್ಟಿಫಿಕೇಟ್ ಕೊಟ್ಟು ಕಾಯಂ ಮಾಡಿಕೊಳ್ಳಲು ಶಿಫಾರಸ್ಸು ಮಾಡುತ್ತೇನೆ ಅಂತ ಒಬ್ಬೊಬ್ಬರಿಂದಲೂ ಐವತ್ತರಿಂದ ಒಂದು ಲಕ್ಷ ಕಿತ್ತಿದ್ದ. ಆದರೆ ಕೊನೆಗೆ ಬೇರೆಯವರ ಬಳಿ ಹಣ ಪಡೆದು ಸರ್ಟಿಫಿಕೇಟುಗಳನ್ನೇ ಮಾರಿಕೊಂಡಿದ್ದ. ವಿಷಯ ತಿಳಿದ ಶಿಕ್ಷಕರು ಅದೊಂದು ದಿನ ಮಾಧ್ಯಮದವರ ಸಮೇತ ಮನೆಗೆ ನುಗ್ಗಿ ಶಿವಮೂರ್ತಿಗೆ ತಾರಾಮಾರ ಜಾಡಿಸಿದ್ದರು. ಅಷ್ಟೇ ಅಲ್ಲ, ಇಂತಹ ಜನಪೀಡಕನಿಗೆ ಟಿಕೆಟು ಕೊಡಬೇಡಿ ಅಂತ ಅದೇ ಶಿಕ್ಷಕರು ಕಾಂಗ್ರೆಸ್ ಪಕ್ಷಕ್ಕೆ ಪತ್ರವನ್ನೂ ಬರೆದಿದ್ದರು.

ಆದರೂ ಟಿಕೆಟ್ ಗಿಟ್ಟಿಸಿಕೊಂಡು ಅಚ್ಚರಿಯಲ್ಲಿ ಗೆದ್ದು ಬಂದ ಶಿವಮೂರ್ತಿ ನಾಯ್ಕ ಅಪ್ಪಿತಪ್ಪಿ ಮಂತ್ರಿಯಾಗಿಬಿಟ್ಟರೆ ತಮ್ಮ ಬದುಕನ್ನೆಲ್ಲ ಮೂರಾಬಟ್ಟೆ ಮಾಡಿಬಿಡುತ್ತಾನೆ ಅಂತ ಅವರೆಲ್ಲ ಸೇರಿ ಇವನನ್ನು ಮಂತ್ರಿ ಮಾಡದಂತೆ ಮುಖ್ಯಮಂತ್ರಿಗೆ ಪತ್ರವನ್ನೂ ಬರೆದಿದ್ದರು. ಇಲ್ಲಿಗೆ ವರ್ಷದ ಹಿಂದೆ ಶಿವಮೂರ್ತಿ ನಾಯ್ಕನ ಈ ಸಕಲಷ್ಟು ಭಾನ್ಗಡಿಯನ್ನು 'ಪತ್ರಿಕೆ' ಸಂಪೂರ್ಣವಾಗಿ ಬಿಚ್ಚಿಟ್ಟಿತ್ತು. ಅಂತಹ ನಾಯ್ಕ ಅದ್ಯಾವ ಭರವಸೆಯಲ್ಲಿ ತನಗೆ ಮಂತ್ರಿಗಿರಿ ಸಿಗುತ್ತೆ ಅಂತ ಆಸೆಯಿಟ್ಟುಕೊಂಡು ಇಷ್ಟೆಲ್ಲಾ ರಾದ್ಧಾಂತ ಸೃಷ್ಟಿಸುತ್ತಿದ್ದಾನೊ ಭಗವಂತನೇ ಬಲ್ಲ.


ಸಡಳಿತಕ್ಕೆ ಭದ್ರಬುನಾದಿಯನ್ನೇ ಹಾಕಿಕೊಟ್ಟಿದ್ದರು. ಸಂತಹವೆಂದರೆ ಕೈ ಪಾರ್ಟಿಯು ಕಾಯಂ ಂಟಿಯಾದರೂ ಅರಸು ಕಾಲದಿಂದ ನಿನ್ನೆಮೊನ್ನೆಯ ೯ಸಿಂಗ್ ಕಾಂಗ್ರೆಸ್ ಸರ್ಕಾರಗಳವರೆಗೆ ಶಾಮನೂರು ಂಕರಪ್ಪನಿಗೆ ಮಂತ್ರಿಭಾಗ್ಯ ಮರೀಚಿಕೆಯಾಗಿಯೇ ದಿತ್ತು. ಆದರಲ್ಲೂ ಮಗ ಮಲ್ಲಿಕಾರ್ಜುನ್ ತ್ರಿಯಾದರೂ ಶಿವಶಂಕರಪ್ಪನಿಗೆ ಅಧಿಕಾರ ಒಲಿದು ೇ ಇಲ್ಲ ಹಾಗೆನೋಡಿದರೆ, ಈ ಕಾಂಗ್ರೆಸ್ ಕುಬೇರನಿಗೆ ಕನದಲ್ಲಿ ಒಮ್ಮೆಯಾದರು ಸಿಎಂ ಗಾದಿಯಲ್ಲಿ ರಬೇಕೆನ್ನುವ ಆಸೆಯಿತ್ತು. ಜೊತೆಗೆ ಒಂದು ಯಾದರೂ ಕೆಪಿಸಿಸಿ ಪ್ರೆಸಿಡೆಂಟ್ ಆಗಬೇಕೆನ್ನುವುದು ರ ಮತ್ತೊಂದು ಮಹದಾಸೆಯಾಗಿತ್ತು. ಆಗಾಗ ಗಳನ್ನು ಹೊರಹಾಕಿದ್ದೂ ಇದೆ. ಆದರೆ ಕಾಂಗ್ರೆಸ್ ಅವಕಾಶವನ್ನೇ ಕೊಡಲಿಲ್ಲ. 2013ರ ವೇಳೆಗೆ ಾ ಪರಿವಾರದಿಂದ ಜಿಗಿದುಬಂದ ಸಿದ್ದರಾಮಯ್ಯ ಗ್ರೆಸ್‌ನ ಫ್ರಂಟ್‌ಲೈನ್ ಲೀಡರ್ ಆಗಿ ಠಳಾಯಿಸಿದ್ದಲ್ಲದೆ ಾವಣೆಗೂ ಮೊದಲೇ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ೇಪಿಸಿಕೊಂಡರೋ ಆಗ ಶಿವಶಂಕರಪ್ಪನ ಸಿಎಂ ಗೋಪುರ ಧಸಕ್ಕನೆ ಕುಸಿದಿತ್ತು. ಇದೇ ಬಗನಸಿನಲ್ಲಿದ್ದರೆ ಕಡೆಗೆ ಮಂತ್ರಿಭಾಗ್ಯವೂ ಇಲ್ಲದೆ ರಾಜಕೀಯ ಬದುಕು ಮುಗಿದುಹೋಗಬಹುದೆನ್ನುವ ಕಕ್ಕೆ ಬಿದ್ದೇ ಸಿದ್ದು ಸಂಪುಟದಲ್ಲಿ ಮಂತ್ರಿಯಾಗಲು ೂರೆದದ್ದು. 45 ವರ್ಷಗಳಿಂದ ಕೈ ಪಾರ್ಟಿಯ ನಿಷ್ಠ ಕಾರಣಿಯಾಗಿ ಧನಕನಕಗಳನ್ನು ಧಾರಾಕಾರವಾಗಿ ಸಿದ್ದಲ್ಲದೇ ಇಂದಿರಾ, ರಾಜೀವ್, ಸೋನಿಯಾರ ವರ್ತಿಯಾಗಿದ್ದರೂ ಮುಖ್ಯಮಂತ್ರಿಯಾಗಲು, ಕೆಪಿಸಿಸಿ ಯಲ್ಲಿ ಕೂರಲು ಸಾಧ್ಯವಾಗದಿದ್ದುದು ಅವರ ಕೀಯ ದುರಾದೃಷ್ಟವೆನ್ನದೆ ವಿಧಿಯಿಲ್ಲ. ಪಾರ್ಟಿಯಿಂದ ಲ್ಲಾ ರಾಜಕೀಯ ದಮನಕ್ಕೊಳಗಾದರೂ ಶಾಮನೂರು ಂಕರಪ್ಪ ಪಾರ್ಟಿಗೆ ನಿಷ್ಠೆಯಿಂದಲೇ ಇದ್ದರು.

ತನ್ನ ರಾಜಕೀಯ ಬದುಕಿನ ಕಟ್ಟಕಡೆಯ ಅವಕಾಶ ತ ಅರ್ಥವಾಗಿದ್ದರಿಂದಲೋ ಅಥವಾ ಮಗನಿಗೆ ಾದರೂ ಮಾಡಿ ಪೊಲಿಟಿಕಲ್ ಬೇಸ್ ಅನ್ನು ಭದ್ರ ಡಿ ಹೋಗಬೇಕು ಅಂತಲೋ ಸಿದ್ದು ಸರ್ಕಾರದಲ್ಲಿ ಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವ ತೋಟಗಾರಿಕೆ ಖಾತೆಗೆ ೇತುಬಿದ್ದರಾದರು ವಯೋಸಹಜ ವೃದ್ಧತೆ ಅವರಿಗೆ ಯಾಗಿ ಅಟಕಾಯಿಸಿಕೊಂಡಿತು. ಮೂರು ವರ್ಷ ವದ್ದೇ ದುಸ್ತರವಾಯಿತು. ಶಿವಶಂಕರಪ್ಪನನ್ನು ತನ್ನ ಪುಟದಿಂದ ಕೈಬಿಡಲು ಸಿದ್ದರಾಮಯ್ಯನಿಗೆ ಇದ್ದದ್ದು ೊಂದೇ ಕಾರಣ. ಹಿರಿಯ ಕಾಂಗ್ರೆಸ್ಸಿಗ, ಪಾರ್ಟಿಗೆ ು ಹಾಕಿದ್ದಾರೆ, ಪಾರ್ಟಿಯ ಆರ್ಥಿಕ ಸಂಕಷ್ಟಕ್ಕೆ ಬಂದಿದ್ದಾರೆ, ಪಾರ್ಟಿಯ ಬೃಹತ್ ಕಾರ್ಯಕ್ರಮಗಳಿಗೆ ್ ನೀಡಿದ್ದವರು, ಮಧ್ಯಕರ್ನಾಟಕದಲ್ಲಿ ಕೈ ಪಕ್ಷ ಬೇರು ುವಂತೆ ಮಾಡಿದವರು; ಇಂತವರನ್ನು ವೃದ್ಧತೆಯ ಣದಿಂದ ಹೊರಗಿಡಲು ತೀರ್ಮಾನಿಸಿದ್ದು ಹಲವರಲ್ಲಿ ಮಾಧಾನ ತರಿಸಿದೆ. ಆ ಅಸಮಾಧಾನಕ್ಕೂ ಒಂದು ಣವಿದೆ. ಶಿವಶಂಕರಪ್ಪನಿಗೆ ಈಗ 85 ವರ್ಷ. ಇಲ್ಲಿಗೆ ೂರು ವರ್ಷಗಳ ಹಿಂದೆ ಅವರನ್ನು ಸಂಪುಟಕ್ಕೆ ದುಕೊಳ್ಳುವ ಸಂದರ್ಭದಲ್ಲಿ ಅವರಿಗೆ 82 ವರ್ಷ. ಬತ್ತೆರಡು ಎನ್ನುವುದೇನು ಉತ್ಸಾಹದ ವಯಸ್ಸಲ್ಲ. ೂ ವಯೋವೃದ್ಧ ವಯಸ್ಸೇ. ಆಗ ಅವರಿಗೆ ಯಸ್ಸಾಗಿದೆ; ಸಕ್ರಿಯವಾಗಿ ಖಾತೆಯಲ್ಲಿ ಡಗಿಸಿಕೊಳ್ಳಲಾರರು ಎಂಬುದು ದ್ದರಾಮಯ್ಯನವರಿಗಾಗಲಿ ಅಥವಾ ಕಾಂಗ್ರೆಸ್ ಖಂಡರಿಗಾಗಲಿ ಗೊತ್ತಿರಲಿಲ್ಲವೇ. ಹಿರಿಯ, ಯೋವೃದ್ಧ ರಾಜಕಾರಣಿ ಅನ್ನೋ ನದಂಡವನ್ನಿಟ್ಟುಕೊಂಡು ಗೌರವ ಸಲ್ಲಿಸುವ ಸಲುವಾಗಿ ದುಕೊಂಡಿದ್ದೇ ಆದಲ್ಲಿ, ಈಗ ಆ ಗೌರವಕ್ಕೆ ಚ್ಯುತಿ ುವಂತೆ ನಡೆದುಕೊಂಡಿದ್ದೇಕೆ? ಎನ್ನುವ ಪ್ರಶ್ನೆಗಳು ಶಂಕರಪ್ಪನ ನಿಷ್ಠರನ್ನು ಕಾಡುತ್ತಿವೆಯಾದರು ಸ್ವತಃ ಶಂಕರಪ್ಪನಿಗೆ ಅದು ಬೇಕಾಗಿಲ್ಲ, ಹೇಗೋ, ಮಗನಿಗೆ ಕಾಶ ಸಿಕ್ಕಿತಲ್ಲ ಅನ್ನೋ ಸಮಾಧಾನ ಅವರದ್ದು. ಆದೇನೇ ಲಿ, ಶಾಮನೂರು ಶಿವಶಂಕರಪ್ಪನವರ ರಾಜಕಾರಣವೇ ಥಾದ್ದು, ಅತ್ತ ಆಕಾಶ ಮುಟ್ಟಲಿಲ್ಲ, ಇತ್ತ ನೆಲಕಚ್ಚಲಿಲ್ಲ. ಗ ಮಗ ಮಲ್ಲಿಕಾರ್ಜುನನ ಸರದಿ. ಅಪ್ಪನೆದುರು ಎರಡು ರಿ ಮಂತ್ರಿಯಾದ ಮಲ್ಲಿಕಾರ್ಜುನ ತಂದೆಯ ಜಕಾರಣದಷ್ಟು ಧಾರಾಳತನವಿಲ್ಲ, ರಾಜಕಾರಣಕ್ಕೆ ಹಾಕಿದ ಡವಾಳ ಯಾವ ರೀತಿ ಲಾಭ ತರಬಲ್ಲದೆಂದು ೋಚಿಸುವ ಪಕ್ಕಾ ವ್ಯವಹಾರಸ್ಥ. ಹಾಗಂತ ಜಕಾರಣವನ್ನೇ ವ್ಯಾಪಾರೀಕರಣಕ್ಕಿಳಿದುತರುವಷ್ಟು ಮುಟ್ಟಿದವನಲ್ಲ. ಏನೇ ಆಗಲಿ, ಸದ್ಯ ಆಕ್ಟೀವ್ ಲಿಟಿಕ್ಸ್‌ನಿಂದ ಶಾಮನೂರು ಶಿವಶಂಕರಪ್ಪ ಮುಕ್ತಿ ಂದುತ್ತಲೇ ಮಂಡಾಳಿತದ ಬುನಾದಿಯನ್ನು ಮಗನ ಿಲಕ ಭದ್ರಗೊಳಿಸುವ ಜಾಣತನ ಮೆರೆದಿದ್ದಾರೆ.

● ಟಿ.ಎನ್. ಷಣ್ಮುಖಿ

"ದೇವರು ಕೊಟ್ಟರೂ ಪೂಜಾರಿ ಬಿಡ"

ವಾಜಪೇಯಿ ಆರೋಗ್ಯಶ್ರೀ ಯೋಜನೆ



ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರಕಾರ ಜಾರಿಗೆ ತಂದ ಅತ್ಯುತ್ತಮ ಆರೋಗ್ಯ ಯೋಜನೆಗಳಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಬಹಳ ಮಹತ್ವದ್ದು. ಈ ಯೋಜನೆಯನುಸಾರ ಬಡತನ ರೇಖೆಯ ಕೆಳಗಿನ ಜನರಿಗೆ ತೆರೆದ ಹೃದಯದ ಶಸ್ತ್ರ ಚಿಕಿತ್ಸೆ, ಬೈಪಾಸ್ ಸರ್ಜರಿ, ಆ್ಯಂಜಿಯೋಪ್ಲಾಸ್ಟಿಯಂತಹ ಹೃದಯದ ಶಸ್ತ್ರಚಿಕಿತ್ಸೆಗಳು ಮತ್ತಿತರ ದೊಡ್ಡ ಮಟ್ಟದ ಶಸ್ತ್ರ ಚಿಕಿತ್ಸೆಗಳನ್ನು ಸರಕಾರದ ಸೂಚಿತ ಆಸ್ಪತ್ರೆಗಳಲ್ಲಿ ಉಚಿತವಾಗಿ ಮಾಡಿಸಿಕೊಳ್ಳಬಹುದು. ಹೆಚ್ಚಿನೆಲ್ಲಾ ಶಸ್ತ್ರಚಿಕಿತ್ಸೆಗಳ ಸಂಪೂರ್ಣ ಪ್ಯಾಕೇಜ್ ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ಕವರ್ ಆಗುತ್ತದೆ. ಆದರೆ ಕೆಲವು ದಗಾಕೋರ ಆಸ್ಪತ್ರೆಗಳು ಸರಕಾರದಿಂದ ಈ ಯೋಜನೆಯ ಅನುದಾನ ಪಡೆದೂ ಬಡವರನ್ನು ಲೂಟಿ ಮಾಡುತ್ತಿರುವುದು ಮಾತ್ರ ದುರದೃಷ್ಟಕರ. ಒಂದರ್ಥದಲ್ಲಿ "ದೇವರು ಕೊಟ್ಟರೂ ಪೂಜಾರಿ ಬಿಡ" ಎಂಬಂತಾಗಿಬಿಟ್ಟಿದೆ.

ವಾಜಪೇಯಿ ಆರೋಗ್ಯಶ್ರೀ ಯೋಜನೆ ಅನುಷ್ಠಾನಕ್ಕೆ ಬಂದಂದಿನಿಂದ ರಾಜ್ಯಾದ್ಯಂತ ಸಹಸ್ರಾರು ಮಂದಿ ಬಡವರು ಉನ್ನತ ಶಸ್ತ್ರ ಚಿಕಿತ್ಸೆಗಳನ್ನು ಮಾಡಿಸಿ ಆರೋಗ್ಯ ಪೂರ್ಣ ಬದುಕು ಸವೆಸುತ್ತಿದ್ದಾರೆ. ಈ ಯೋಜನೆ ಜಾರಿಗೆ ಬರುವ ಮುನ್ನ ದುಬಾರಿ ಶಸ್ತ್ರಚಿಕಿತ್ಸೆ ಕೈಗೆಟುಕದೇ ಅದೆಷ್ಟೊ ಬಡ ರೋಗಿಗಳು ಸೂಕ್ತ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲಾಗದೇ ಕಾಯಿಲೆಗಳಿಂದ ನರಳಿ ನರಳಿ ಸಾಯುತ್ತಿದ್ದರು ಎಂದರೆ ಅತಿಶಯೋಕ್ತಿಯ ಮಾತಾಗದು.

ಕೆಲವರು ತಮ್ಮ ಕುಟುಂಬದ ಆಧಾರಸ್ತಂಭವನ್ನು ಉಳಿಸುವ ಸಲುವಾಗಿ ಸಾಲಸೋಲ ಮಾಡಿ ಶಸ್ತ್ರ ಚಿಕಿತ್ಸೆ ಮಾಡಿಸಿ ಜೀವನಪರ್ಯಂತ ದುಡಿದೂ ದುಡಿದು ಅತ್ತ ಸಾಲ ಸಂದಾಯ ಮಾಡಲೂ ಆಗದೆ ಇತ್ತ ನೆಮ್ಮದಿಯಿಂದ ಬದುಕಲೂ ಆಗದೇ ನರಳಿ ನರಳಿ ಜೀವಬಿಟ್ಟದ್ದಿದೆ. ಮತ್ತೆ ಕೆಲವರು ಚಿಟ್‌ಫಂಡ್, ಸೋಡ್ತಿ, ಚೀಟಿ ಎಂದೆಲ್ಲಾ ಅರೆಹೊಟ್ಟೆ, ಹಸಿವೆ ನುಂಗಿ ಉಳಿತಾಯ ಮಾಡಿ ನಿರ್ಮಿಸಿದ ಸೂರುಗಳನ್ನು ಶಸ್ತ್ರಚಿಕಿತ್ಸೆಗಾಗಿ ಮಾರಿ ಬೀದಿಗೆ ಬಿದ್ದದ್ದೂ ಇದೆ. ಅಂತಹ ಸಂದರ್ಭಗಳಲ್ಲಿ ಬಡಜನತೆಗೆ ವಾಜಪೇಯಿ ಆರೋಗ್ಯ ಶ್ರೀ ಯೋಜನೆ ಆಶಾಕಿರಣವಾಗಿ ಪರಿಣಮಿಸಿತ್ತು.

ಒಂದೆಡೆ ಈ ಯೋಜನೆ ಅದೆಷ್ಟೋ ಜನರಿಗೆ ಜೀವದಾನ ನೀಡಿದ್ದರೆ, ಇನ್ನೊಂದೆಡೆ ಕಾರ್ಪೊರೇಟ್ ದಗಾಕೋರ ಆಸ್ಪತ್ರೆಗಳ ಮಾಲಕರಿಗೆ ಬಡವರನ್ನು ಹಿಂಡಿ ಹಿಪ್ಪೆ ಮಾಡಲು ಹೊಸ ಮಾರ್ಗವನ್ನೂ ಕಲ್ಪಿಸಿದೆ. ಅದು ಹೇಗೆಂದು ನೋಡೋಣ. ಉದಾಹರಣೆಗೆ ಹೃದಯದ ಶಸ್ತ್ರಚಿಕಿತ್ಸೆಗೆಂದು ಸರಕಾರ ಒಂದು ಲಕ್ಷ ರೂಪಾಯಿಗಳವರೆಗೆ ಅರ್ಹ ಫಲಾನುಭವಿಗಳ ಆಸ್ಪತ್ರೆಯ ಬಿಲ್ ಭರಿಸುತ್ತದೆ. ಇದರಿಂದ ಸಂಪೂರ್ಣ ಶಸ್ತ್ರಚಿಕಿತ್ಸೆ ಮಾಡಿಸಲು ಸಾಧ್ಯವಿದೆ. ಆದರೆ ಕೆಲವು ದಗಾಕೋರ ಆಸ್ಪತ್ರೆಗಳ ಮಾಲಕರು ಸರಕಾರಕ್ಕೆ ಶಸ್ತ್ರ ಚಿಕಿತ್ಸೆಯ ವರದಿ ಒಪ್ಪಿಸಿ ಲಕ್ಷಾಂತರ ರೂಪಾಯಿ ಪಡೆಯುತ್ತಾರೆ. ಮತ್ತೊಂದೆಡೆ ರೋಗಿಗಳನ್ನು ವಂಚಿಸಿ ಅವರಿಂದಲೂ ದುಡ್ಡು ಲೂಟಿ ಮಾಡುತ್ತಾರೆ. ಇದು ಒಂಥರಾ ಸರಕಾರಿ ಕಾಮಗಾರಿಗಳಲ್ಲಿ ಒಂದೇ ಕೆಲಸಕ್ಕೆ ಎರಡು ಬಿಲ್ ಮಾಡುವಂತೆ. ವಾಜಪೇಯಿ ಯೋಜನೆಯಡಿಯಲ್ಲಿ ಶಸ್ತ್ರಚಿಕಿತ್ಸೆ ಉಚಿತವಲ್ಲವೇ ಎಂದು ಕೇಳಿದರೆ "ಸರಕಾರದಿಂದ ಸಿಗುವ ದುಡ್ಡಿನಿಂದ ಶಸ್ತ್ರ ಚಿಕಿತ್ಸೆಯೇನೋ ಮಾಡಬಹುದು. ಆದರೆ ನಿಮ್ಮ ಹೃದಯಕ್ಕೆ ಅಳವಡಿಸುವ ಸ್ಟಂಟ್‌ಗಳ ಅಥವಾ ವಾಲ್ವ್‌ಗಳ ಖರ್ಚನ್ನು



ನೀವೇ ಭರಿಸಬೇಕಾಗುತ್ತದೆ" ಎಂದು ಹಸಿಹಸಿ ಸುಳ್ಳು ಹೇಳಿ ದುಡ್ಡು ಬಾಚುತ್ತಾರೆ. ವಾಸ್ತವದಲ್ಲಿ ವಾಜಪೇಯಿ ಯೋಜನೆಯಡಿ ಶಸ್ತ್ರಚಿಕಿತ್ಸೆ ಮಾಡಲು ಅನುಮತಿ ಪಡೆದ ಆಸ್ಪತ್ರೆಗಳಿಗೆ ಶಸ್ತ್ರಕ್ರಿಯೆಯ ಮತ್ತು ರೋಗಿಗೆ ಅಳವಡಿಸಲಾಗುವ ಸಾಧನಗಳ ಮೊತ್ತ ಸರಕಾರ ಮಂಜೂರು ಮಾಡುವ ದುಡ್ಡಿನಿಂದಲೇ ಕವರ್ ಆಗುತ್ತದೆ.

ಇನ್ನು ಕೆಲವು ಆಸ್ಪತ್ರೆಗಳ ದಗಾಕೋರರು ರೋಗಿಗಳಿಗೆ 'ನೋಡಿ, ಸರಕಾರದ ದುಡ್ಡಿನಲ್ಲಿ ಅಳವಡಿಸುವ ಸ್ಟಂಟ್, ವಾಲ್ವ್ ಮುಂತಾದವುಗಳು ತೀರಾ ಕಳಪೆ ಗುಣಮಟ್ಟದ್ದು. ಅದನ್ನು ಅಳವಡಿಸಿ ಶಸ್ತ್ರಕ್ರಿಯೆ ಮಾಡಿದರೂ ಒಂದೇ, ಮಾಡದಿದ್ದರೂ ಒಂದೇ" ಎಂದು ಸುಳ್ಳು ಹೇಳಿ ರೋಗಿಗಳನ್ನು ಒಂದು ವಿಧದಲ್ಲಿ ಬ್ಲ್ಯಾಕ್‌ಮೇಲ್ ಮಾಡುತ್ತಾರೆ. ಮಾತ್ರವಲ್ಲ ಲಕ್ಷಾಂತರ ರೂಪಾಯಿ ಲಾಭ ಮಾಡಿಕೊಳ್ಳುತ್ತಲೇ ಸರಕಾರವನ್ನು ದೂರುವ ನೀಚ ಕೆಲಸವನ್ನೂ ಮಾಡುತ್ತಾರೆ.

ಕೆಲವು ಆಸ್ಪತ್ರೆಗಳ ದಗಾಕೋರರ ಮಾತಿನ ವರಸೆ ಎಷ್ಟು ಅದ್ಭುತವಾಗಿರುತ್ತದೆಂದರೆ "ಸರಕಾರ ವಸತಿ ನಿರ್ಮಾಣಕ್ಕೆಂದು ನಿಮಗೆ ನೀಡುವ ದುಡ್ಡಿನಿಂದ ಮನೆಯ ಗೋಡೆಗಳನ್ನೇ ನಿರ್ಮಿಸಲು ಸಾಧ್ಯವಾಗುವುದಿಲ್ಲ, ಇನ್ನು ಮೇಲ್ಛಾವಣಿಯ ಮಾತೆಲ್ಲಿ ಬರುತ್ತದೆ? ಅಂತೆಯೇ ಸರಕಾರ ಮಂಜೂರು ಮಾಡುವ ಜುಜುಬಿ ದುಡ್ಡಿನಿಂದ ಇಷ್ಟು ದುಬಾರಿ ಶಸ್ತ್ರಕ್ರಿಯೆ ಮಾಡಲು ಸಾಧ್ಯವೇ ಇಲ್ಲ" ಇಂತಹ ಮಾತುಗಳನ್ನಾಡಿ ರೋಗಿಗಳನ್ನು ಗೊಂದಲದಲ್ಲಿ ಕೆಡವಿ ಬಿಡುತ್ತಾರೆ ಇಷ್ಟೆಲ್ಲಾ ಆದ ಬಳಿಕವೂ ಬಡರೋಗಿ "ಪರವಾಗಿಲ್ಲ, ಸರಕಾರದ ಯೋಜನೆಯಲ್ಲಿ ಬರುವ ಸಾಧನಗಳನ್ನೇ ಅಳವಡಿಸಿ" ಎಂದು ಒತ್ತಾಯಿಸಿದರೆ, ದಗಾಕೋರರು ರೋಗಿಗಳೊಂದಿಗೆ "ಸರಕಾರದಿಂದ ಮಂಜೂರಾಗುವ ದುಡ್ಡಿನ ಮೇಲೆ ಒಂದು ಲಕ್ಷ ರೂಪಾಯಿ ಖರ್ಚು ತಗಲುತ್ತದೆ, ನೀವು ಕನಿಷ್ಠ ಎಂಬತ್ತು ಸಾವಿರ ರೂಪಾಯಿಯಾದರೂ ಕಟ್ಟಿದರೆ ಶಸ್ತ್ರಚಿಕಿತ್ಸೆ ನಡೆಸಬಹುದು" ಎಂದು ಚೌಕಾಶಿಗೆ ಇಳಿಯುತ್ತಾರೆ. ರೋಗಿಯು "ನಮ್ಮಿಂದ ಅಷ್ಟು ದುಡ್ಡು ಹೊಂದಿಸಲು ಸಾಧ್ಯವೇ ಇಲ್ಲ" ಎಂದರೆ "ನಿಮ್ಮ ಜೀವ ಉಳಿಸಬೇಕಾದರೆ ಐವತ್ತು ಸಾವಿರ ರೂಪಾಯಿಯಾದರೂ ಕಟ್ಟಲೇಬೇಕು" ಎಂದು ಖಡಾಖಂಡಿತವಾಗಿ ಹೇಳಿ ರೋಗಿಯ ಮೇಲೆ ಒತ್ತಡ ಹೇರುತ್ತಾರೆ.

ಮೊದಲೇ ಕಾಯಿಲೆಯಿಂದ ನರಳಿ ಹೈರಾಣಾಗಿರುವ ರೋಗಿ ಅನಿವಾರ್ಯವಾಗಿ ಈ ವೈಟ್‌ಕಾಲರ್ ದಗಾಕೋರರ ತರ್ಕಕ್ಕೆ ಮಣಿಯಲೇಬೇಕಾಗುತ್ತದೆ. ಇವೆಲ್ಲಾ ಲೇಖಕನ ಕಲ್ಪನೆಯ ಮೂಸೆಯಲ್ಲಿ ಅರಳಿದ ಮಾತುಗಳಲ್ಲ, ದಗಾಕೋರರ ಲೂಟಿಯಿಂದ ಬಳಲಿ ಬೆಂಡಾದ ರೋಗಿಗಳ ನೋವಿನ ಮಾತುಗಳು. ಇಂತಹ ದರೋಡೆಕೋರರಿಗೆ ಯಾವ ಶಿಕ್ಷೆ ವಿಧಿಸಬೇಕು......?

ಒಂದು ಜನಪರ, ಜನಪ್ರಿಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ಮಾತ್ರ ಸರಕಾರಗಳ ಕೆಲಸವಲ್ಲ. ಜನತೆಯ ಬೆವರಿನ ದುಡ್ಡಿನಿಂದ ಸರಕಾರ ಇಂತಹ ಯೋಜನೆಗಳನ್ನು ಜಾರಿಗೆ ತರುತ್ತದೆಯೇ ಹೊರತು ಆಳುವವರು ತಮ್ಮ ಜೇಬಿನಿಂದ ನೀಡುವುದಲ್ಲ. ಜಾರಿಗೆ ತಂದ ಯೋಜನೆಯು ಎಷ್ಟರಮಟ್ಟಿಗೆ ಅರ್ಹರಿಗೆ ತಲುಪುತ್ತದೆ ಎಂದು ಅರಿತು ಜನರಿಗೆ ತಲುಪಿಸುವುದೂ ಸರಕಾರದ ಜವಾಬ್ದಾರಿ.

ಸರಕಾರವು ವಾಜಪೇಯಿ ಆರೋಗ್ಯಶ್ರೀ ಯೋಜನೆಯಡಿ ಶಸ್ತ್ರಚಿಕಿತ್ಸೆಗಳಿಗೆ ಅನುಮತಿ ನೀಡಿದ ಆಸ್ಪತ್ರೆಗಳ ಮೇಲೆ ನೇರ ನಿಗಾ ಇಡಬೇಕಾಗಿದೆ. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸರಕಾರದ ಆರೋಗ್ಯ ಯೋಜನೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಬೇಕಿದೆ. ಅದಕ್ಕಾಗಿ ಹೆಚ್ಚುವರಿ ಸಿಬ್ಬಂದಿಗಳನ್ನೇನೂ ನೇಮಿಸಬೇಕಾಗಿಲ್ಲ, ಅಲ್ಲಿನ ಸಿಬ್ಬಂದಿಗಳಿಗೇ ಸ್ವಲ್ಪ ತರಬೇತಿ ನೀಡಿದರೆ ಸಾಕು ಮತ್ತು ಯೋಜನೆಗೆ ಅನುದಾನ ಪಡೆಯುವ ಆಸ್ಪತ್ರೆಗಳಲ್ಲಿ ಕನಿಷ್ಠ ಸರಕಾರಿ ಸಹಾಯವಾಣಿ ಎಂದು ಒಂದು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ಹಾಕಬೇಕಾಗಿದೆ. ಮತ್ತು ಆ ದೂರವಾಣಿ ಎಲ್ಲಾ ಸಮಯದಲ್ಲೂ ರೋಗಿಗಳ ಅಹವಾಲು ಆಲಿಸಲು ಲಭ್ಯವಿರುವಂತೆ ನೋಡಿಕೊಳ್ಳಬೇಕಿದೆ. ಇದರಿಂದ ಸ್ವಲ್ಪ ಮಟ್ಟಿಗಾದರೂ ಫಲಾನುಭವಿಗಳಿಗೆ ಅನುಕೂಲವಾಗಬಹುದು. ನಿಯಮಗಳನ್ನು ಮೀರಿ ಬಡವರನ್ನು ಲೂಟಿ ಮಾಡುವ ಆಸ್ಪತ್ರೆಗಳ ಯೋಜನೆಯ ಅನುಮತಿಯನ್ನು ರದ್ದುಮಾಡಬೇಕು ಮತ್ತು ನಿಯಮ ಮೀರಿದವರ ಅನುದಾನವನ್ನು ಕಡ್ಡಾಯವಾಗಿ ತಡೆಹಿಡಿಯಬೇಕಾಗಿದೆ.

● ಇಸ್ಮತ್ ಫಜೀರ್

ಡೀಸೆಲ್ ದ್ಯಾವಪ್ಪ

ಅಂಬರೀಶ್‌ರನ್ನು ಸಂಪುಟದಿಂದ ಕೈಬಿಟ್ಟಿದ್ದಕ್ಕೆ ಆಕ್ರೋಶ ಗೊಂಡ ದ್ಯಾವಪ್ಪ ಮೈಮೇಲೆ ಡೀಸೆಲ್ ಎರಚಿಕೊಂಡು ಆತ್ಮಹತ್ಯೆಗೆ ಯತ್ನಿಸಿ ಸುದ್ದಿಯಾಗಿದ್ದಾರೆ. ಹಿಂದೊಮ್ಮೆ ದೇವಪ್ಪನವರು ಅಂಬರೀಶ್ ಎದುರೇ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಯಾವ ಧನಬಲವೂ ಇಲ್ಲದೆ ಕೇವಲ ತನ್ನ ಪರಿಚಿತರಿಗೆ ಕಾರ್ಡು ಬರೆಯುತ್ತಾ, ಮನೆಮನೆಗೆ ಹೋಗಿ ಮತ ಕೇಳಿ, 28 ಸಾವಿರ ಮತ ಪಡೆದಿದ್ದ ದ್ಯಾವಪ್ಪ ಪ್ರಾಮಾಣಿಕ, ಕ್ರಿಯಾಶೀಲ ವ್ಯಕ್ತಿಯಾಗಿ ಕಾಣಿಸಿಕೊಂಡು ಜನಮನ ಗೆದ್ದಿದ್ದರು.

ನಂತರ ಯಾವುದಾದರೂ ಪಾರ್ಟಿಯಲ್ಲಿ ಗುರುತಿಸಿಕೊಂಡು ಲೀಡರಾಗಬೇಕೆಂದು ಹಾತೊರೆಯುತ್ತಿದ್ದ ದ್ಯಾವಪ್ಪನವರಿಗೆ ಸಿಕ್ಕಿದ್ದು ಬಂಗಾರಪ್ಪ, ಅವರ ಕೆಸಿಪಿ ಪಾರ್ಟಿಯ ಲೀಡರಾದ ದ್ಯಾವಪ್ಪ 'ಬಂ'ರವರ ಮೆಚ್ಚಿನ ವ್ಯಕ್ತಿಯಾಗಿ ಕಾಣಿಸಿಕೊಂಡರು. ಒಂದು ಲಡಾಸ್ ಅಂಬಾಸಿಡರ್ ಕಾರು ತೆಗೆದುಕೊಂಡು ಮಂಡ್ಯದ ಸುತ್ತಮುತ್ತ ಹೀರಿಕೊಂಡವರ ಮನೆಗೆ ಹೋಗಿ ಸತ್ತವರ ಮೇಲೆ ಹಾರ ಹಾಕಿ ಸಾಂತ್ವನ ಹೇಳುತ್ತಿದ್ದರು. ಆದರೆ ಬಂಗಾರಪ್ಪನವರೇ ಊರ್ಜಿತವಾಗುವಂತೆ ಕಾಣಲಿಲ್ಲ. ಮತ್ತೆ ಕಾಂಗ್ರೆಸ್‌ಗೆ ಬಂದ ದ್ಯಾವಪ್ಪ ಮಂಡ್ಯ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು. ಆದರೆ ಅಂಬರೀಶ್‌ರವರ ರಾಜಕೀಯ ನಡೆಗಳನ್ನು ಟೀಕಿಸುತ್ತಿದ್ದ ದ್ಯಾವಪ್ಪ ಅವರಿಗೆ ಮಂತ್ರಿಗಿರಿ ತಪ್ಪಿದ್ದಕ್ಕೆ ಮೈಮೇಲೆ ಡೀಸೆಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದು ಜಿಲ್ಲೆಯ ಪ್ರಜ್ಞಾವಂತರನ್ನು ಬೆಚ್ಚಿಬೀಳಿಸಿದೆ. ದ್ಯಾವಪ್ಪನಂತವರೆ ಇಂತಹ ಕ್ರಮಕ್ಕೆ ಮುಂದಾದಾಗ ಇನ್ನ ಮುಗ್ಧ ಅಂಬಿ ಭಕ್ತರ ಕತೆಯೇನು ಎನ್ನುವಂತೆ ಮಾಡಿದ್ದಾರೆ.



ರಾಜಕಾರಣದಲ್ಲಿ ಒಂದಿಷ್ಟು ಮಹತ್ವಾಕಾಂಕ್ಷೆ ಹೊಂದಿರುವ ದ್ಯಾವಪ್ಪ ಇಂತಹ ಕೃತ್ಯಕ್ಕೆ ಕೈಹಾಕುವ ಮುನ್ನ ರಾಜಕಾರಣದ ಸ್ಥಾನಮಾನಗಳ ಕ್ಷಣಿಕತೆ ಬಗ್ಗೆ ಯೋಚಿಸಬೇಕಿತ್ತು, ಎಲ್ಲಕ್ಕಿಂತ ಮುಖ್ಯವಾಗಿ ಅಂಬರೀಶ್ ನಿರ್ವಹಿಸಿದ ವಸತಿ ಖಾತೆಯಲ್ಲಿನ ಪ್ರಗತಿಯನ್ನು ಪರಿಶೀಲಿಸಬೇಕಿತ್ತು, ಬಡಬಗ್ಗರ ಬಗ್ಗೆ ಚಿಂತಿಸುವ ದ್ಯಾವಪ್ಪ ಬಡವರ ತಲೆಯ ಮೇಲೊಂದು ಸೂರು ಮಾಡಿಕೊಡುವ ಖಾತೆಯಲ್ಲಿ ಅಂಬರೀಶ್ ಎಷ್ಟರಮಟ್ಟಿಗೆ ಹೆಸರು ಗಳಿಸಿದ್ದಾರೆಂಬುದನ್ನಾದರೂ ತಿಳಿದುಕೊಳ್ಳಬೇಕಿತ್ತು. ಅದರೆ ಇದ್ಯಾವುದನ್ನು ಪರಿಶೀಲಿಸದೆ ಅಂಬಿಯನ್ನು ಸಂಪುಟದಿಂದ ಕೈಬಿಟ್ಟ ಕೂಡಲೇ ತಮಿಳು ತಲೆಗಳಂತೆ ವರ್ತಿಸುವುದೊಂದು ವಿಪರ್ಯಾಸ!


● ಬಿ.ಚಿಂ



ವಿನಾಯಕ ಬಾಳಿಗಾ



ಕಾಶೀಮಠ ಕಟ್ಟಡ




ಸಂಯಮೀಂದ್ರ ಸ್ವಾಮಿ

ಬಾಳಿಗಾ ಮರ್ಡರ್ ಮಿಸ್ಟರಿ

ಕಾಶೀಮಠದ ಕೃಪಾಶ್ರಯದಲ್ಲಿ ಕೊಲೆಗಾರ ನರೇಶ್ ಶೆಣೈ!!

ಮಂಗಳೂರಿನ ಕೋಟಿ-ಕೋಟಿ ಚರ-ಸ್ಥಿರ ಆಸ್ತಿಯ ವೆಂಕಟರಮಣ ದೇವಸ್ಥಾನದ ಧರ್ಮರಕ್ಷಕರ ಕರ್ಮಕಾಂಡಕ್ಕೆ ಕೈಹಾಕಿದ್ದ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾರನ್ನು ಬರ್ಬರವಾಗಿ ಕೊಲ್ಲಿಸಿದ್ದು ಕೊಂಕಣಿ ಮಾಫಿಯಾದ ದುಷ್ಟ ಚತುಷ್ಟಯರೆಂಬುದಕ್ಕೆ ಈಗ ಯಾವ ಅನುಮಾನವೂ ಉಳಿದಿಲ್ಲ. ಪೊಲೀಸರ ತನಿಖೆಯೂ ಸಂಘಪರಿವಾರದ ಸಾತ್ ನಂಬರಿ ಕೇಸರಿ ಮುಂಡು, ಕೇಸರಿ ಶಾಲಿನ ಮುಖಂಡರ ಜಾಡು ಹಿಡಿದೇ ಸಾಗಿದೆ. ಆದರೆ ಆರೋಪಿ ನಂಬರ್ ಒನ್ ನರೇಶ್ ಶೆಣೈ ಎಂಬ ಸ್ಥಳೀಯ ಬಿಜೆಪಿಯ ಪ್ರಳಯಾಂತಕ ಪುಢಾರಿ ಕಮ್ ನಮೋ ಬ್ರಿಗೇಡ್ ಸಂಸ್ಥಾಪಕ ಮಾತ್ರ ದಿನಕ್ಕೆ ಮೂರ್ಮೂರು ಅಡಗುದಾಣ ಬದಲಿಸುತ್ತ ಪೊಲೀಸರ ಯಾಮಾರಿಸುತ್ತಿದ್ದಾನೆ; ಬಿಜೆಪಿಯ ಉನ್ನತ ಅಧಿಕಾರಸ್ಥರು-ಸ್ವಜಾತಿ ಕೊಂಕಣಿಗರ ಕಾಶೀಮಠ ಮಾಫಿಯಾದ ಕೃಪಾಶ್ರಯದಲ್ಲಿ ಪಿಕ್‌ನಿಕ್ ಮಾಡುತ್ತಿದ್ದಾನೆ....

ಚೆಡ್ಡಿ ಸಂಸದ ನಳಿನ್‌ಕುಮಾರ್ ಕಟೀಲ್‌ನನ್ನು ಸೂತ್ರದ ಬೊಂಬೆಯಂತೆ ಕುಣಿಸುವ ತಾಕತ್ತಿನ ನರೇಶ್ ಕಾಶೀಮಠದ ಹೇತ್ಲಾಂಡಿ ಸ್ವಾಮಿ ಸಂಯಮೀಂದ್ರನನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳುತ್ತಲೇ ಬಂದಿದ್ದ. ಮಂಗಳೂರಿನ ಕೊಂಕಣಿ ವಲಯ, ಬಿಜೆಪಿ ರಾಜಕೀಯ ಮತ್ತು ಕಾಶೀಮಠ ಸಂಸ್ಥಾನದಲ್ಲಿ ನರೇಶ್ ನಟೋರಿಯಸ್ ಆಗಿ ಕೊಬ್ಬಿದ್ದೇ ವೆಂಕಟರಮಣನ ಹುಂಡಿ ಬಲದಿಂದ. ನರೇಶ್ ಮತ್ತವನ ಅತ್ಯಾಪ್ತ ಸಹಚರರಾದ ಫೋಟೋಗ್ರಾಫರ್ ಮಂಜು ನಿರೇಶ್ವಾಲ್ಯ ಯಾನೆ ಮಂಜುನಾಥ ಶೆಣೈ, ನೆಲಗಳ್ಳ ವೇದವ್ಯಾಸ ಕಾಮತ್ ಮತ್ತು ಚಾರ್ಟರ್ಡ್ ಅಕೌಂಟೆಂಟ್ ಜಗನ್ನಾಥ ಕಾಮತ್ ಗ್ಯಾಂಗ್ ಸುಬಗರಂತೆ ಮೇಕಪ್ ಹಾಕಿಕೊಂಡು ದೇವಸ್ಥಾನ ದುಡ್ಡು-ಭೂಮಿ-ಚಿನ್ನ-ಬೆಳ್ಳಿ ನುಂಗುವುದೇ ನಿತ್ಯಕರ್ಮ ಮಾಡಿಕೊಂಡಿತ್ತು. ಈ ಘಟಿಂಗರ ಬೆನ್ನಿಗೆ ಸಾಕ್ಷಾತ್ ಕಾಶೀಮಠಾಧೀಶ ಸಂಯಮೀಂದ್ರ ನಿಂತು ಪೊರೆಯುತ್ತಿದ್ದ. ಇದೆಲ್ಲ ಸಾಕ್ಷಿ-ಪುರಾವೆ-ದಾಖಲೆ ಸಮೇತ ವಿನಾಯಕ ಬಾಳಿಗಾ ಪತ್ತೆ ಹಚ್ಚಿದ್ದರು. ಬಾಳಿಗಾರ ಬಾಯಿ ಮುಚ್ಚಿಸಲು ದೇವರ ಸನ್ನಿಧಿಯ ಚೋರರು ತಿಪ್ಪರಲಾಗ ಹಾಕಿದರು. ಇದ್ಯಾವುದೂ ಫಲ ಕೊಡದಿದ್ದಾಗ ಸುಪಾರಿ ಕೊಟ್ಟು ಕೊಲ್ಲಿಸಿದರು.



ನರೇಶ್ ಶೆಣೈ

ವೆಂಕಟರಮಣ ಗೋವಿಂದಾ!

ಕೋಟಿ-ಲಕ್ಷದ ಲೆಕ್ಕದಲ್ಲೇ ರೊಕ್ಕ-ಚಿನ್ನ-ಬೆಳ್ಳಿ ಕಾಣಿಕೆ ಹರಕೆಯಾಗಿ ಬರುವ ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನ ಸ್ಥಳೀಯ ಕೊಂಕಣಿಗರ ಶ್ರದ್ಧೆ-ಪ್ರತಿಷ್ಠೆಯ ಕೇಂದ್ರ. ಇಲ್ಲೊಂದು ಆಡಳಿತ ಮಂಡಳಿ ನಾಮಕಾವಸ್ತೆ ಅಷ್ಟೇ ಇದೆ. ಅದರ ಪಾರುಪತ್ಯ ನಡೆಸೋದು ಖತರ್‌ನಾಕ್ ನರೇಶ್ ಶೆಣೈ. ಆತನ ಆದೇಶ-ಆಶಯಂತೆ ಹಿಂಬಾಲಕರಾದ ಮಂಜು ನಿರೇಶ್ವಾಲ್ಯ, ವೇದವ್ಯಾಸ ಕಾಮತ್, ಜಗನ್ನಾಥ ಶೆಣೈ ಮತ್ತು ಹನುಮಂತ ಕಾಮತ್ ದೇವಸ್ಥಾನದ ರಥೋತ್ಸವ, ಇನ್ನಿತರ ಸಮಾರಾಧನ-ಸಮಾರಂಭ ನಿಭಾಯಿಸುತ್ತಾರೆ. ಕೋಟಿ-ಕೋಟಿಯ ಈ ದೇವರಕಾರ್ಯಕ್ರಮದಲ್ಲಿ ಸದ್ರಿ ದೆವ್ವಗಳು ಸಿಕ್ಕಷ್ಟು ಬಾಚಿ ಒಂದು ಪಾಲು ಕಾಶೀಮಠಾಧೀಶರಿಗೆ 'ಪಾದಕಾಣಿಕೆ'ಯಾಗಿ ಕೊಡುವುದು ಸಂಪ್ರದಾಯವಾಗಿ ನಡೆದುಬಂದಿರುವುದು ಬಹುತೇಕ ಅಮಾಯಕ ಕೊಂಕಣಿಗರಿಗೆ ಗೊತ್ತೇ ಇಲ್ಲ.

ಪ್ರತಿವರ್ಷ ವೆಂಕಟರಮಣನ ತೇರು ಬಂತೆಂದರೆ ನರೇಶನ ಲೂಟಿ ಬಳಗಕ್ಕೆ ಎಲ್ಲಿಲ್ಲದ ಸಂಭ್ರಮ-ಸಡಗರ. ರಥದ ಹಿಂದೆ-ಮುಂದೆ ನರೇಶನ ನಾಲ್ಕು ಖದೀಮ ಸಂಗಾತಿಗಳು ಹಿಂಬಾಲಕರ ಉಟ್ಟುಕೊಂಡು ಕೇಸರಿ ಮುಂಡು, ಕೇಸರಿ ಶಾಲಿನಿಂದ ಅಲಂಕೃತರಾಗಿ ಓಡಾಡೋದು ನೋಡಿದರೆ ಎಂಥವರಿಗೂ ಇವರ 'ಸೇವೆ'ಯ ಬಗ್ಗೆ ಸಂಶಯ ಬರಲಾರದು. ಆದರೆ ರಥೋತ್ಸವದ ಒಂದೇ ಒಂದುದಿನ ರಥ ಕಾಣಿಕೆಯಾಗಿ 12-15 ಲಕ್ಷ ಒಟ್ಟಾಗುವ ರಹಸ್ಯ ಗೊತ್ತಿರುವ ನರೇಶ ಬಳಗ ರಾತ್ರಿ ಆಗುವುದಕ್ಕೆ ಕಾಯುತ್ತಿರುತ್ತದೆ. ರಾತ್ರಿ ಒಂದು ಗಂಟೆಯ ನಂತರ ರಥ ಕಾಣಿಕೆ ಗೋಣಿಚೀಲದಲ್ಲಿ ತುಂಬುವ ನರೇಶ್ ಪಡೆ ಆತನದೇ ಕಾರಿನಲ್ಲಿ ಸಾಗಿಸುತ್ತದೆ. ಇದರಲ್ಲಿ ಒಂದು ಪೇರು ಕಾಶೀ ಮಠಾಧೀಶರಿಗೆ ಸಂದಾಯ ಮಾಡಿ ತಮ್ಮ ಹಿಡಿತದಲ್ಲಿ ಆ ಪೆದ್ದು ಸ್ವಾಮಿಯನ್ನು ಸಿಕ್ಕಿಹಾಕಿಸಿಕೊಳ್ಳುತ್ತಾರೆ. ಇದು ಲಾಗಾಯ್ತಿ ವಾರ್ಷಿಕ ಕರ್ಮ!!

ಇಂಥ ಲೂಟಿ ತುಂಬ ವ್ಯವಸ್ಥಿತವಾಗಿ ನಡೆಸುತ್ತ ಬಂದಿರುವ ನರೇಶನ ಗ್ಯಾಂಗ್ ಆಡಳಿತ ಮಂಡಳಿಯ ಟ್ರಸ್ಟಿಗಳನ್ನು ಅಡಿಯಾಳಾಗಿಸಿಕೊಂಡು ನಿರಾತಂಕವಾಗಿ ಗುಲಾಂ ಕೈಂಕರ್ಯ ಮಾಡುತ್ತ ಬಂದಿದೆ. ನರೇಶನ ಕಳ್ಳಾಟ ಪ್ರಶ್ನಿಸುವ ಧಮ್ ಆಡಳಿತ ಮಂಡಳಿಯ ಯಾವ ಟ್ರಸ್ಟಿಗೂ ಇಲ್ಲ. ದೇವಸ್ಥಾನದಲ್ಲಿ ನಡೆವ ಎಲ್ಲ ಉತ್ಸವಗಳಲ್ಲೂ ಪರ್ಸೆಂಟೇಜ್ ಚಮತ್ಕಾರ ದುಷ್ಟ ಚತುಷ್ಟಯರು ಮಾಡೇ ಮಾಡುತ್ತಾರೆ. 2012ರಲ್ಲಿ ಈ ವೆಂಕಟರಮಣನ ಹಳೇ ಕಟ್ಟಡ ಬದಲಿಸಿ 22 ಕೋಟಿ ರೂ.ಗಳಲ್ಲಿ ನವೀಕರಣ ಮಾಡಲಾಗಿತ್ತು. ಇದರ ಆಧ್ವರ್ಯ ನರೇಶ್, ಮಂಜು, ಜಗನ್ನಾಥ ಮತ್ತು ವೇದವ್ಯಾಸರೇ ತೆರೆಮರೆಯಲ್ಲಿ ನಿಂತು ನಿಭಾಯಿಸಿದ್ದರು. ಕಳ್ಳ ಬಿಲ್, ಸುಳ್ಳು ಲೆಕ್ಕ, ಬೋಗಸ್ ವೋಚರ್ ಇಟ್ಟು 7-8 ಕೋಟಿ ಕೃಷ್ಣನ [illegible]ಗೆ ಹಾಕಲಾಗಿತ್ತು! ಪೊಲೀಸ್ ಫೋಟೋಗ್ರಾಫರ್, ಉದಯವಾಣಿ ಫೋಟೋಗ್ರಾಫರ್ ತಾನೆಂದು ಎದೆಯುಬ್ಬಿಸಿ ಓಡಾಡುವ ಮಂಜು ನಿರೇಶ್ವಾಲ್ಯನಿಗೆ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಮಾಧ್ಯಮ ಮಹಾಮಹಿನೆಂದು ನೇಮಿಸಲಾಗಿತ್ತು. ಧೂರ್ತ ವೆಂಕಟರಮಣನ ದೇವಸ್ಥಾನ ನವೀಕರಣ ಫಂಕ್ಷನ್‌ನಲ್ಲಿ ವಿಡಿಯೋ, ಫೋಟೋ ಮಾಡಿದ್ದೇನೆಂದು ಬರೋಬ್ಬರಿ 55 ಲಕ್ಷ ಲಬಕ್-ಸ್ವಾಹಾ ಮಾಡಿದ್ದ!! ನರೇಶ್ ಶೆಣೈ ಪುಸ್ ಮಂದಿಯನ್ನು ನಿಭಾಯಿಸಲೆಂದೇ ಒಂದು ಕ್ಯಾಂಟಿನ್ ಕೂಡ ದೇವಳದ ವ[illegible]ದಲ್ಲಿ ಮಾಡಿಸಿಕೊಟ್ಟಿದ್ದ.

ವೆಂಕಟರಮಣ ದೇವಸ್ಥಾನ ಆದಾಯ ಅಥವಾ ಆಸ್ತಿ ರಥಕಾಣಿಕೆಯಲ್ಲಿ ಯಾವ[illegible]ಕ್ಕೂ ಕಾಶೀಮಠಾಧೀಶನಾದವನಿಗೆ

ಕಾಶೀಮಠದ ಕಾವಿಗಳಿಂದಲೂ ಬಾಳಿಗಾನ ನಿಯಂತ್ರಿಸುವ ಫರ್ಮಾನು ನರೇಶ್‌ಗೆ ಬಂದಿತ್ತು. ಸಂಯಮೀಂದ್ರ ಸ್ವಾಮಿಯ ಪರಮಾಪ್ತ ಕಾರ್ಯದರ್ಶಿ ವಿಶ್ವನಾಥ್ ಭಟ್ ನರೇಶ್‌ನ ಅತ್ಯಾಪ್ತ ಮಿತ್ರ. ಇಂಥ ಪಾಪಿಷ್ಟ ಕೊಂಡಿಗಳೆಲ್ಲ ಒಂದಕ್ಕೊಂದು ಹೆಣೆದುಕೊಂಡು ಬಾಳಿಗಾರನ್ನು ವೆಂಕಟರಮಣನ ಪಾದಕ್ಕೆ ಒಪ್ಪಿಸುವ ಸ್ಕೆಚ್ ಹೆಣೆದಿವೆ. ಬಾಳಿಗಾ ಹತ್ಯೆಗೆ ಲ್ಯಾಂಡ್ ಮಾಫಿಯಾನೇ ಕಾರಣವೆಂಬ ಭಾವನೆ ಇತ್ತು. ಆದರೆ ವೆಂಕಟರಮಣ ದೇವಸ್ಥಾನ-ಕಾಶೀಮಠ ಮಾಫಿಯಾದ ಕೈವಾಡವೂ ಈ ಕೊಲೆಯಲ್ಲಿದೆ ಎಂಬ ವಾಸನೆ ಪೊಲೀಸರಿಗೆ ಅದ್ಹೇಗೋ ಬಂದಿತ್ತು. ಆದರೆ ನಮೋ ಬ್ರಿಗೇಡ್ ಡಾನ್- ಭಾವಿ ಎಮ್ಮೆಲ್ಲೆ ಗತ್ತಿನ ನರೇಶ್ ಶೆಣೈ ಮತ್ತು ಕಾಶೀಮಠದ ಸ್ವಾಮಿ ಸೆಕ್ರೆಟರಿ ವಿಶ್ವನಾಥ್ ಭಟ್ಟನ ಅನೈತಿಕ ಮೈತ್ರಿ-ಸಂಯಮೀಂದ್ರನ ಹತಾಶ ಚಡಪಡಿಕೆಗಳು ಬಾಳಿಗಾ ಮರ್ಡರ್‌ನ "ಜಿಎಸ್‌ಬಿ ಆಯಾಮ" ತೆರೆದಿಡಲು ಶುರುಮಾಡಿತು. ಆಗ ಬೆಚ್ಚಿದ ನರೇಶ್ ಮಂಗಳೂರಿಂದ ಕಾಲುಕಿತ್ತು ತಲೆಮರೆಸಿಕೊಳ್ಳತೊಡಗಿದ. ಬಾಳಿಗಾ ಹತ್ಯೆ ನಡೆದಾಗ ಪೊಲೀಸರ ನಿಭಾಯಿಸಿದ್ದು ವೇದವ್ಯಾಸನಾದರೆ ಮಾಧ್ಯಮದವರನ್ನು ಮ್ಯಾನೇಜ್ ಮಾಡಲು ಹವಣಿಸಿದ್ದು ಮಂಜು ನಿರೇಶ್ವಾಲ್ಯ ಪತ್ರಕರ್ತರಿಗೆ ಬೆದರಿಕೆ ಹಾಕಿ ನರೇಶ್ ಶೆಣೈ ವಿರುದ್ಧ ಬರೆಯದಂತೆ ಹೇಳಿದ್ದ.

ಸಂಸದ ನಳಿನ್-ನರೇಶ್ ನಂಟು!

ಮಂಗಳೂರಿನ ಬಿಜೆಪಿ ಸಂಸದ ನಳಿನ್ ಕುಮಾರ್ ಕಟೀಲ್ ಮತ್ತು ಕೊಲೆ ಪಾತಕಿ ನರೇಶ್ ಶೆಣೈನ ಅಂಟಿದ ನಂಟಿನ ಬಗ್ಗೆ ನಾನಾ ನಮೂನೆಯಾಗಿ ಜನ ಮಾತಾಡಿಕೊಳ್ಳುತ್ತಿದ್ದಾರೆ. ನಳಿನ್‌ಗೆ ಮತ್ತೆ ಎಂಪಿ ಟಿಕೆಟ್ ಕೊಡುವ ಮನಸ್ಸು ಚೆಡ್ಡಿ ಡಾನ್ ಕಲ್ಲಡ್ಕ ಭಟ್‌ಗೆ ಇರಲಿಲ್ಲ. ಎಂಪಿಯಾಗಿದ್ದಾಗ ತನ್ನನ್ನು ಕೇರ್ ಮಾಡದೆ ಪಡ್ಡೆಗಳ ಗ್ಯಾಂಗ್ ಕಟ್ಟಿಕೊಂಡು-ರಾಸಲೀಲೆಯಲ್ಲಿ ತಲ್ಲೀನನಾಗಿದ್ದುಕೊಂಡು ಕಾಲ ಹಾಕಿದ ನಳಿನ್ ಗುರು ಕಲ್ಲಡ್ಕನಿಗೇ ತಿರುಗು ಬಾಣ ಬಿಟ್ಟಿದ್ದ. ಹೀಗಾಗಿ ಆತನ ಟಿಕೆಟ್‌ಗೆ ಕತ್ತರಿ ಹಾಕುವ ಯೋಚನೆ ಚೆಡ್ಡಿ ವಲಯದಲ್ಲಾಗಿತ್ತು.

ಆಗ ನಳಿನ್ ನೆರವಿಗೆ ಬಂದಾತ ಷಡ್ಯಂತ್ರಗಾರ ನರೇಶ್ ಶೆಣೈ. ತನಗೆ ಸೂಲಿಬೆಲೆ ಮೂಲಕ ಸಂಘ ಪರಿವಾರದಲ್ಲಿ ಬೆಳೆದ ಸಂಪರ್ಕ ಬಳಸಿಕೊಂಡು ನರೇಶ್ ನಳಿನ್‌ನ ಬಚಾಯಿಸಲು ಹವಣಿಸಿದ್ದ. ಸೂಲಿಬೆಲೆಯಿಂದ ಪ್ರಬಲ ಲಾಬಿ ಮಾಡಿಸಿದ್ದ. ಟಿಕೆಟ್ ಸಿಕ್ಕನಂತರ ವೆಂಕಟ್ರಮಣ ದೇವಸ್ಥಾನದಲ್ಲಿ ಲೂಟಿ ಮಾಡಿದ ಹಣ ಎಲೆಕ್ಷನ್ ಫಂಡಾಗಿ ಕೊಟ್ಟಿದ್ದ.



ನಳಿನ್‌ಕುಮಾರ್ ಕಟೀಲ್

ನಳಿನ್ ಗೆದ್ದರೆ ತನಗೆ ಎಮ್ಮೆಲ್ಲೆ ಟಿಕೆಟ್ ಕೊಡಿಸುತ್ತಾನೆಂಬ ದೂ(ದು)ರಾಲೋಚನೆ ಹಾಕಿದ್ದ. ತನ್ನ ನಮೋ ಬ್ರಿಗೇಡ್ ಹುರಿಗೊಳಿಸಿ ಬೀದಿಗೆ ಬಿಟ್ಟು ನಳಿನ್ ಪರ ಪ್ರಚಾರ ಮಾಡಿಸಿದ್ದ.

ಅಂತೂ ನಳಿನ್ 'ಡಾನ್' ಕಲ್ಲಡ್ಕನ ವಿರೋಧದ ನಡುವೆಯೂ ಎಂಪಿಯಾಗಿಬಿಟ್ಟ. ಆಗಾಗ ನರೇಶನ ಋಣ ಭಾರಕ್ಕೆ ಬಿದ್ದಂತೆ ವರ್ತಿಸತೊಡಗಿದ. ಎಂಪಿಯಾದ ಮೊದಲು ಆರು ತಿಂಗಳು ದಿನವೂ ಮುಂಜಾನೆ ಬಂದು ನರೇಶನ ಮನೆ ಮುಂದೆ ಕಾರಲ್ಲಿ ನಿಂತು ಕಾಲಹಾಕುವುದೇ ಆತನ ದಿನಚರಿ ಆಗಿತ್ತು. ಇಂಥ ನಳಿನ್ ಈಗ ದುಡ್ಡಿನ ದೋಸ್ತ್ ನರೇಶನ ಬಚಾಯಿಸಲು ಮಾಡಬಾರದ್ದೆಲ್ಲ ಮಾಡುತ್ತಿದ್ದಾನೆ. ನಳಿನ್‌ನ ದಿಲ್ಲಿಯ ಸರ್ಕಾರಿ ಬಂಗಲೆಯಲ್ಲೇ ನರೇಶ್ ಹಲವು ಬಾರಿ ತಲೆಮರೆಸಿಕೊಂಡು ಕಾರ್ಯಾಚರಣೆ ನಡೆಸಿದ್ದಾನೆಂಬ ಗುಲ್ಲು ಮಂಗಳೂರಲ್ಲಿ ಗಂಭೀರವಾಗೇ ಹಬ್ಬಿದೆ. ನರೇಶ್‌ನ ಪರಮಾಪ್ತನೂ, ಬಾಳಿಗಾ ಮರ್ಡರ್ ಸಂಚಿನ ಸದಸ್ಯನೂ ಆಗಿರುವ ವೇದವ್ಯಾಸ ಕಾಮತ್‌ರ ಅಣ್ಣನನ್ನು ನಳಿನ್‌ನ ದಿಲ್ಲಿ ಮನೆಯಲ್ಲಿ ಕಂಡವರಿದ್ದಾರೆ. ನರೇಶ್‌ನ ಭೇಟಿಯಾಗಲೆಂದೇ ಆತ ಅಲ್ಲಿಗೆ ಹೋಗಿದ್ದ! ಸಂಘ ಪರಿವಾರದಲ್ಲಿ ಶಕ್ತಿಶಾಲಿಯಾಗಿ ಗುರುತಿಸಿಕೊಂಡಿರುವ ನಳಿನ್ ದಿಲ್ಲಿಯ ಬಿಜೆಪಿ ದರ್ಬಾರಿನ ಅಧಿಕಾರಸ್ಥರ ಆಶ್ರಯದಲ್ಲಿ ನರೇಶನ ಬಚ್ಚಿಟ್ಟಿದ್ದಾನಾ? ಅಂಥದೊಂದು ಅನುಮಾನ ಮಂಗಳೂರಲ್ಲಿದೆ.

ಇಲ್ಲ. ಮಂಗಳೂರು ವೆಂಕಟರಮಣ ಭಕ್ತರು
ಠದ ಶಿಷ್ಯರಷ್ಟೇ ಅಲ್ಲ; ಕೈವಲ್ಯ ಮಠ, ಗೋಕರ್ಣ
ಳಿ ಮಠಕ್ಕೆ ನಡೆದುಕೊಳ್ಳುವ ಕೊಂಕಣಿಗರೂ
ಮಣ ಭಕ್ತಾದಿಗಳೇ. ಹೀಗಾಗಿ ಹಲವು ವರ್ಷದಿಂದ
ಠದವರು ವೆಂಕಟರಮಣ ಭಂಡಾರ ದೋಚುತ್ತಿರುವ
ರೋಧದ ಕೂಗು ಮೊಳಗುತ್ತಲೇ ಇದೆ. "ಆದರೆ
ಅಪ್ಪನೇ.... ಚಿಕ್ಕಪ್ಪ ಎಂದೂ ಅಪ್ಪನಲ್ಲ...
ಠಾಧೀಶರೊಬ್ಬರಿಗೆ ಮಾತ್ರ ಮಂಗಳೂರು
ರಮಣನ ಸಂಪತ್ತಿನ ಹಕ್ಕುದಾರು...." ಎಂದು
ತ ಪಾರುಪತ್ಯಗಾರ ನರೇಶ ಶೆಣೈ ಫರ್ಮಾನು
ಸಿದ್ದ. ಇದಕ್ಕೆ ಎಡವಟ್ಟು ಆಡಳಿತಮಂಡಳಿ ಒಪ್ಪಿಗೆ
ಇತರ ಎಡು ಕೊಂಕಣಿ ಪೀಠಾಧಿಪತಿಗಳು
ಊರಿಗೆ ಬಂದಾಗೆಲ್ಲ ಅವಮಾನಿಸಿ ಕಳಿಸುವ
ದ್ಯ ನಡೆಸುವುದು ಪರಂಪರೆಯಂತಾಗಿ ಹೋಗಿದೆ.
ಲ್ಲಿ ದೇವಸ್ಥಾನದ ಜೀರ್ಣೋದ್ಧಾರವಾದಾಗ ಒಟ್ಟಾರೆ
ಯಲ್ಲಿ ಕಾಶೀಮಠಾಧೀಶರಿಗೆ 21,06,760 ರೂ.
ಯಾಗಿ ನರೇಶನ ದಾದಾಗಿರಿ ಆಡಳಿತಮಂಡಳಿ
. ಇಂಥ ಅಪರಾತಪರಾ ಕೋಟಿಗಳ ಲೆಕ್ಕದಲ್ಲೇ
ಹೋಗಿದೆ.

ರ್ಣೋದ್ಧಾರ ಉತ್ಸವದಲ್ಲಿ ಆದ ಖರ್ಚು-ವೆಚ್ಚ
ಕವಾಗಿ ನೋಡಿದ ವಿನಾಯಕ ಬಾಳಿಗಾ 7-8
ಅವ್ಯವಹಾರ ಆಗಿರುವುದು ಕಂಡುಹಿಡಿದು ಆಡಿಟ್
ಗಾಗಿ ಕೋರ್ಟಿಗೆ ಹೋಗಿದ್ದರು. ಹಾಗೆಯೇ
ನದ 42 ಸೆಂಟ್ಸ್ ಜಾಗ ಕಾಶೀಮಠಕ್ಕೆ ಜೀರೋ
ನಲ್ಲಿ ಟ್ರಸ್ಟಿಗಳು ಮಾರಾಟ ಮಾಡಿದ್ದರು. ಈ
ಲ್ಲಿ ಮಠದವರು ನಡೆಸುವ ಶ್ರೀನಿವಾಸ ನಿಗಮಾಗಮ
ಪಾಠಶಾಲೆ ಇದೆ. ಇದಕ್ಕೆ ದೇವಸ್ಥಾನ ಮಂಡಳಿ
ದೇ ತೆರಿಗೆ, ಬಾಡಿಗೆ, ಕಾಣಿಕೆ ಯಾವುದೂ ಕೇಳುತ್ತಿಲ್ಲ.
ರ್ಷದಿಂದ ಮಠ ಬಿಟ್ಟಿಯಾಗಿ ಪಾಠಶಾಲೆ ಸದ್ರಿ
ಲ್ಲಿ ನಡೆಸುತ್ತಾ ಬಂದಿದೆ. ಹೀಗಿರುವಾಗ ಆಡಳಿತ

ಕಣ್ಣೀರಲ್ಲಿ ಬಾಳಿಗಾ ಕುಟುಂಬ





ದೋ ನಂಬರ್ ದಂಧೆಯ ಸ್ವಜಾತಿ ಉದ್ಯಮಪತಿಗಳ ಕರಾರುವಾಕ್ ಸಂಚಿಗೆ ಆಹುತಿಯಾದ ಆರ್‌ಟಿಐ ಕಾರ್ಯಕರ್ತ ವಿನಾಯಕ ಬಾಳಿಗಾರದು ಬಡತನದ ಕುಟುಂಬ. ಎಲೆಕ್ಟ್ರಿಕಲ್ ಗುತ್ತಿಗೆ ಮಾಡಿ ತಂದೆ-ತಾಯಿ, ಇಬ್ಬರು ಬೆಳೆದುನಿಂತ ಸಹೋದರಿಯರ ಜೀವನ ಸಾಗಿಸುತ್ತಿದ್ದರು ಬಾಳಿಗಾ. ಈ ಕಷ್ಟ-ಕಾರ್ಪಣ್ಯದ ನಡುವೆಯೇ ಸ್ವ-ಜಾತಿ ಕೊಂಕಣಿ ಮಾಫಿಯಾದಿಂದ ತನ್ನ ಇಷ್ಟದೇವರಾದ ವೆಂಕಟರಮಣನಿಗೂ ಮುಕ್ತಿ ಕೊಡಲು ಆತ ಬದ್ಧತೆಯಿಂದ ಹೋರಾಡುತ್ತಿದ್ದರು. ಕಾಶೀಮಠದ ಮಸಲತ್ತುಗಾರ ಸ್ವಾಮಿ ಸಂಯಮೀಂದ್ರನ ತಂಡ ಮತ್ತು ಮಂಗಳೂರು ವೆಂಕಟ್ರಮಣ ದೇವಾಲಯದ ಕರ್ಮಗೇಡಿ ಆಡಳಿತಮಂಡಳಿ ಮೇಲೆ ಹಿಡಿತ ಸಾಧಿಸಿದ್ದ ನಟೋರಿಯಸ್ ನರೇಶ್ ಶೆಣೈ, ವೇದವ್ಯಾಸ ಕಾಮತ್, ಜಗನ್ನಾಥ ಕಾಮತ್, ಮಂಜು ನಿರೇಶ್ವಾಲ್ಯ... ಮುಂತಾದ ಕೊಂಕಣಿಗರೇ ತನ್ನನ್ನು ಕೊಲ್ಲಬಹುದೆಂಬ ಸಣ್ಣ ಯೋಚನೆಯೂ ಬಾಳಿಗಾಗೆ ಇರಲಿಲ್ಲ.

ಆತನದು ಒಂದೇ ಗುರಿ ಸ್ವ-ಜಾತಿ ಕೊಂಕಣಿ ಸಮುದಾಯವನ್ನು ಸಂಯಮೀಂದ್ರ-ನರೇಶ್ ಶೆಣೈ ಗ್ಯಾಂಗಿನಿಂದ ರಕ್ಷಿಸಬೇಕು, ದೇವಸ್ಥಾನದ ಹಣಕಾಸಿನ ನಿರ್ವಹಣೆಗೊಂದು ಸಾಂಸ್ಥಿಕ ರೂಪ ಕೊಡಬೇಕೆಂಬುದಿತ್ತು. ಸಂಘ ಪರಿವಾರದಲ್ಲಿದ್ದೂ ಅಲ್ಲಿಯ ಸೋಕಾಲ್ಡ್ ಸಂಭಾವಿತ ಕೊಂಕಣಿಗಳ ಕಳ್ಳಾಟ ಎತ್ತಿ ಆಡುತ್ತಿದ್ದರು ಬಾಳಿಗಾ. ತನ್ನನ್ನು ವಿರೋಧಿಗಳು ಕೊಲ್ಲುವ ಮಟ್ಟಕ್ಕೆ ಹೋಗಬಹುದೆಂಬ ನಿರೀಕ್ಷೆ ಬಾಳಿಗಾಗೆ ಇರಲಿಲ್ಲ. ಹೆಚ್ಚೆಂದರೆ ನರೇಶ-ವೇದವ್ಯಾಸ-ಮಂಜುಗಳು ಸಂಯಮೀಂದ್ರನ ಸಂಪ್ರೀತಗೊಳಿಸಲು ಒಂದು ದಿನ ರಥಬೀದಿಯಲ್ಲಿ ಅಡ್ಡಲಾಗಿ ಚಚ್ಚಬಹುದೆಂಬ ಸಣ್ಣದೊಂದು ಮುಂದಾಲೋಚನೆ ಆತನಿಗಿತ್ತಷ್ಟೇ.

ಮನೆಯ ಮುಂದೆಯೇ ಮಗ ರಕ್ತದ ಮಡುವಲ್ಲಿ ಒದ್ದಾಡುತ್ತ ಬಿದ್ದಿದ್ದ ದೃಶ್ಯ ಇನ್ನೂ 85ರ ಅಂಚಿನಲ್ಲಿರುವ ವಿನಾಯಕ ಬಾಳಿಗಾರ ತಾಯ್ತಂದೆಯಿಂದ ಮರೆಯಾಗಿಲ್ಲ. ವಿನಾಯಕರ ತಂದೆ ರಾಮಚಂದ್ರ ಮತ್ತು ತಾಯಿ ಇಬ್ಬರಿಗೂ 83 ವರ್ಷ ಮೀರಿದೆ. ಈ ಇಳಿವಯಸ್ಸಿನಲ್ಲಿ ಪುತ್ರ ಶೋಕ ಅವರಿಂದ ತಡೆಯಲಾಗುತ್ತಿಲ್ಲ. ಬಾಳಿಗಾ ಹತ್ಯೆಯಾಗಿ ಮೂರು ತಿಂಗಳು ಕಳೆದಿದೆ. ಈ 90 ದಿನವೂ ಆ ತಾಯ್ತಂದೆ ಕಣ್ಣೀರಲ್ಲೇ ಕಳೆದಿದ್ದಾರೆ. ಇಬ್ಬರು ಬೆಳೆದುನಿಂತ ಹೆಣ್ಣು ಮಕ್ಕಳ ಹೊಟ್ಟೆ ತುಂಬುವ ದುಡಿತವೂ ಈಗವರಿಂದ ಸಾಧ್ಯವಿಲ್ಲ. ಹಾಗಂತ ಸ್ವಾಭಿಮಾನಿ ರಾಮಚಂದ್ರ ಬಾಳಿಗಾ ಮತ್ತವರ ಮಡದಿ ಯಾರ ಬಳಿಯೂ ಇವತ್ತಿಗೂ ಕೈ ಒಡ್ಡಿಲ್ಲ. ವಿಚಾರವಾದಿ ನರೇಂದ್ರ ನಾಯಕ್ ಸಂಗಡಿಗರು ರಾಮಚಂದ್ರ ಬಾಳಿಗಾ ಮತ್ತವರ ಹೆಣ್ಣುಮಕ್ಕಳಿಗೆ ಹೊಸ ಬದುಕು ಕಟ್ಟಿಕೊಳ್ಳಲು ಸಾಧ್ಯವಿರುವುದೆಲ್ಲ ಮಾಡುತ್ತಿದ್ದಾರೆ.

ಸದ್ಯಕ್ಕೆ ಬಾಳಿಗಾ ಫ್ಯಾಮಿಲಿಗೆ ಬಿಎ, ಬಿಎಡ್ ಆಗಿರುವ ಮಗಳು ಕೊಡುವ ಟ್ಯೂಷನ್ ವರಮಾನವೇ ಜೀವನಾಧಾರ. ಗಂಜಿ ಉಂಡು ಕಣ್ಣೀರಲ್ಲಿ ಕೈತೊಳೆವ ಪರಿಸ್ಥಿತಿಗೆ ಈ ನಿಷ್ಪಾಪಿ ಕುಟುಂಬವನ್ನು ಹೊಟ್ಟೆತುಂಬಿ ತುಳುಕುತ್ತಿರುವ ಕಳ್ಳ ಕೊಂಕಣಿಗರ ಮಾಫಿಯಾ ತಳ್ಳಿರುವುದು ಎಂಥವರ ಕರುಳು ಚುರ್‌ಗುಡಿಸುತ್ತದೆ. ಆದರೆ ಇವತ್ತಿನವರೆಗೂ ದೇವಸ್ಥಾನದ ಆಡಳಿತಗಾರರಾಗಲಿ, ಕಾಶೀಮಠದ ಸ್ವಯಂ ಘೋಷಿತ ಜಾತೀ ಉದ್ಧಾರದ ಸ್ವಾಮಿ ಸಂಯಮೀಂದ್ರನಾಗಲಿ ಬಾಳಿಗಾ ಕುಟುಂಬಕ್ಕೆ ಸಣ್ಣ ಸಾಂತ್ವನವನ್ನು ಹೇಳಲು ಮುಂದಾಗಿಲ್ಲ! ದೇವಸ್ಥಾನದ ಆಡಳಿತಗಾರ ಮತ್ತು ಮಠದ ಪಾರುಪತ್ಯಗಾರರ ಪಾಪಪ್ರಜ್ಞೆ-ಅಪರಾಧಿ ಭಾವಕ್ಕೆ ಇದು ಸಾಕ್ಷಿಯಂತಿದೆ.

ಮನುಷ್ಯತ್ವವಿರುವ ಕೊಂಕಣಿಗರು ಬಾಳಿಗಾರ ದಿಕ್ಕೆಟ್ಟ ಸಂಸಾರಕ್ಕೆ ಧೈರ್ಯ-ಬದುಕುವ ವಿಶ್ವಾಸ ತುಂಬಿಯಾರಾ? ಕೋಟಿ-ಲಕ್ಷದ ದೊಡ್ಡ ಸಮೂಹವೇ ಕೊಂಕಣಿ ಜಾತಿಯಲ್ಲಿದೆ. ನ್ಯಾಯಾನ್ಯಾಯ ಸತ್ಯಾಸತ್ಯತೆ ಒರೆಗೆ ಹಚ್ಚಲು, ಸ್ವ-ಜಾತಿಬಂಧುಗಳಿಗೆ ನೆಮ್ಮದಿ ಕೊಡಿಸಲು ಹೋರಾಡಿ ವಿನಾಯಕ ಬಾಳಿಗಾರ ಕುಟುಂಬದ ಕಣ್ಣೀರು ಜಾತಿ ಮಂದಿ ಒರೆಸದಿದ್ದರೆ ಅದಕ್ಕಿಂತ ದೊಡ್ಡ ಅನುಮಾನ, ನೈತಿಕ ಅಧಃಪತನ ಆ ಸಮಾಜಕ್ಕೆ ಮತ್ತೊಂದಿಲ್ಲ!!



ಳಿಯ ತ್ರಿಮೂರ್ತಿಗಳು ನರೇಶನ ಕುಮ್ಮಕ್ಕಿನಿಂದ
ಕೋಟಿ ಬೆಲೆಯ ಜಾಗ ಮಠಕ್ಕೆ ದಾನ ಮಾಡಿದ್ದಾರೆ.
ಕಾಏಕಿ ಈ ಜಾಗ ಪರಭಾರೆ ಆಗಿರುವುದರ ಹಿಂದೆ
ಶೆಣೈ ಬಿಲ್ಡರ್ ಮಾಫಿಯಾ-ರಿಯಲ್ ಎಸ್ಟೇಟ್
ದೂ(ದು)ರಾಲೋಚನೆ ಅಡಗಿದೆ ಎಂದು ದೇವಸ್ಥಾನ-
ಅನೈತಿಕ-ವ್ಯವಹಾರ ಕಂಡವರು ಹೇಳುತ್ತಾರೆ.
ಸ್ಥಾನದ ಜಾಗ ಕಬಳಿಸುವುದು ಅಷ್ಟು ಸುಲಭವಲ್ಲ.
ಕಾಶೀಮಠಾಧೀಶರನ್ನು ಅಂಕೆಯಲ್ಲಿಟ್ಟುಕೊಳ್ಳುವ
ಂಕಣಿ ವ್ಯಾಪಾರಿಗಳು ಲಾಗಾಯ್ತಿನಿಂದಲೂ ಮಠದ
ತಮಗೆ ಬೇಕಾದಾಗೆಲ್ಲ ಬಳಸುತ್ತ ಬಂದಿದ್ದಾರೆ. ಇದೇ
ರಿಯಲ್ಲಿ ಮಠದ ಸುಪರ್ದಿಗೆ ಬಂದಿರುವ 42
ಜಾಗವನ್ನು ಸುಲಭವಾಗಿ ಲಪಟಾಯಿಸಬಹುದೆಂಬ
ಾರ ಅನಾಹುತಕಾರಿ ನರೇಶನದು ಎಂಬುದು ಆತನ
ಸ-ಭೂಗೋಳ ಬಲ್ಲವರು ಹೇಳುತ್ತಾರೆ. ಈ ಲಫಡಾ
ಾಲಕ್ಕೆ ಕಂಡುಹಿಡಿದು ವಿನಾಯಕ ಬಾಳಿಗಾ ದೊಡ್ಡ
ಮನ್ನೇ ಸಾರಿದ್ದರು!

ಸಂಯಮೀಂದ್ರನಿಗೆ 'ಸವಿಪತ್ರ'!

ಂದು ಕಡೆ ದೇವಸ್ಥಾನ ಲೂಟಿ ಮಾಡುತ್ತಿದ್ದ ನರೇಶ್
ಅಂಡ್ ಕೋ.ದ ಅಸಲಿಗೇ ಕೈಹಾಕಿದ್ದ ವಿನಾಯಕ
ಾ ಮತ್ತೊಂದೆಡೆ ಕಾಶೀಮಠ ಮಾಫಿಯಾ ಬಣ್ಣ
ಲಾಗಿಸುವ ಹೋರಾಟ ಶುರು ಹಚ್ಚಿಕೊಂಡಿದ್ದರು.
8, 2015ರಂದು ಸಂಯಮೀಂದ್ರ ಸ್ವಾಮಿಗೊಂದು
ಬರೆದಿದ್ದ ಬಾಳಿಗಾ ಅದರಲ್ಲಿ ವೆಂಕಟರಮಣ
ಸ್ಥಾನದಲ್ಲಿ ನೆಲೆ ನಿಂತಿರುವ ಕಳ್ಳರ ಬಳಗ ಮಾಡುತ್ತಿರುವ
ತಗೆಲ್ಲ ನಿಮ್ಮ ಕೃಪಾಶೀರ್ವಾದವಿದೆ ಎಂಬ ಅಭಿಪ್ರಾಯ
ದಿದೆ. ಹಾಗಂತ ಆಡಳಿತ ಮಂಡಳಿ, ಅದನ್ನು
ಸುವ ನರೇಶ್, ವೇದವ್ಯಾಸ, ಮಂಜು, ಜಗನ್ನಾಥರೇ
ಾದ ಸ್ವಹಿತಾಸಕ್ತರ ಲಾಬಿ ಸುದ್ದಿ ಹಬ್ಬಿಸಿದೆ. ಇದು
ಾ? ದೇವಸ್ಥಾನದ ಆಡಳಿತ, ವ್ಯವಹಾರ
ರ್ಶಕವಾಗಿಸುವ ಒಂದು ಹೊಸ ಬೈಲಾ ಏಕೆ
ರಿಸಬಾರದು? ಅಂಥದೊಂದು ಸಾಂಸ್ಥಿಕ ರೂಪ
ವ ಬೈಲಾ ನಾನು ತಯಾರಿಸಿದ್ದೇನೆ. ಅದನ್ನು ತಮ್ಮ
ಾಹನೆಗೆ ಕಳಿಸಿದ್ದೇನೆ. ಇದಕ್ಕೆ ಆಡಳಿತಗಾರ
ಪಡಬೇಕು? ನೀವೇಕೆ ದೇವಸ್ಥಾನದ ಆಗು-ಹೋಗುಗಳಲ್ಲಿ
ಮೂಗು ತೂರಿಸುತ್ತೀರಿ? ಕೈವಲ್ಯಮಠ, ಪರ್ತಗಾಳಿ ಮಠ ಎಂದೆಲ್ಲ ಕೊಂಕಣಿಗರ ಮಠದ ಮಧ್ಯೆ ತಾರತಮ್ಯದ ನೀತಿ ನೀವೇಕೆ ಅನುಸರಿಸುತ್ತೀರಿ? ಶಿಷ್ಯರಿಗೇಕೆ ಬುದ್ಧಿ ಹೇಳುತ್ತಿಲ್ಲ?

ಇಂಥ ಹಲವು ಪ್ರಶ್ನೆಗಳನ್ನು ಬಾಳಿಗಾ ಸ್ವಾಮಿಗೆ ಹಾಕಿದ್ದರು. ಅಪಾರ ಆದಾಯವಿರುವ ವೆಂಕಟರಮಣ ದೇವಸ್ಥಾನದ ವ್ಯವಹಾರದಲ್ಲಿ ಸ್ವಾಮಿ ತಲೆ ಹಾಕೋದು ನೈತಿಕವಾಗಿ ಕಾನೂನಾತ್ಮಕವಾಗಿ ತಪ್ಪು ಎಂಬುದನ್ನು ಪ್ರತಿಪಾದಿಸಿದ್ದರು. ಈಗಾಗುತ್ತಿರುವ ದೇವಸ್ಥಾನ ಮಠದ ಮಧ್ಯದ ಗೊಂದಲಕ್ಕೆಲ್ಲ ಸ್ಪಷ್ಟೀಕರಣ ಕೊಡುವಂತೆ ಬಾಳಿಗಾ ಕೇಳಿದ್ದರು. ಇಲ್ಲದಿದ್ದರೆ ಅಕ್ರಮ-ಅವ್ಯವಹಾರ-ಅನಾಚಾರಕ್ಕೆಲ್ಲ ಸ್ವಾಮಿಯೇ ಹೊಣೆಯಾಗುತ್ತಾರೆಂದು ನಿಷ್ಠೂರವಾಗಿ ಎಚ್ಚರಿಸಿದ್ದರು!

ಇದ್ಯಾವುದಕ್ಕೂ ಸಂಯಮೀಂದ್ರ ಸ್ವಾಮಿ ಕೇರ್ ಮಾಡಲಿಲ್ಲ. ನರೇಶ್ ಶೆಣೈ, ಜಿ.ವಿ. ಕಾಮತ್, ಜಗನ್ನಾಥ ಕಾಮತ್, ವೇದವ್ಯಾಸ ಕಾಮತ್, ಜೈರಾಜ್ ಪೈಗಳಂಥ ಗೋಡಂಬಿ, ಮೆಣಸು, ಪಟಾಕಿ ವ್ಯಾಪಾರಸ್ಥ ದಗಾಕೋರರ ಕೈಗೊಂಬೆಯಂತಾಗಿರುವ ಸಂಯಮೀಂದ್ರ ಸ್ವಾಮಿಗೆ ಬಾಳಿಗಾರ ನೈತಿಕ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯವಾದರೂ ಎಲ್ಲಿಂದ ಬಂದೀತು, ಪಾಪ!! ಸಂಯಮೀಂದ್ರ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಜಿ. ವಿಶ್ವನಾಥ್ ಕಾಮತ್ ಮಂಗಳೂರಿನಲ್ಲಿ ಕಾಶೀಮಠದ 'ಬ್ರಾಂಚಾಫೀಸ್' ನಗರಾಭಿವೃದ್ಧಿ ಪ್ರಾಧಿಕಾರದ ಪರವಾನಗಿ ಇಲ್ಲದೆ ಅಕ್ರಮವಾಗಿ ಕಟ್ಟಿರುವ ಕತೆಯೂ ಬಾಳಿಗಾ ಪತ್ರದಲ್ಲಿ ಪ್ರಸ್ತಾಪಿಸಿದ್ದರು; ಕಾಮತ್ ಜಿಪಿಎ ದುರುಪಯೋಗಿಸಿ ಕೊಳ್ಳುತ್ತಿದ್ದಾರೆಂದೂ ಹೇಳಿದ್ದರು. ಇದ್ಯಾವುದಕ್ಕೂ ಎಡವಟ್ಟು ಸ್ವಾಮಿ ತಲೆಕೆಡಿಸಿಕೊಳ್ಳದೇ 'ಡಾನ್' ನರೇಶ್ ಶೆಣೈನ ಒಣಪರ್ಚಸ್ಸು ಬೆಳಿಸುವ ಆಟ ಆಡುತ್ತಲೇ ಇದ್ದ!

ಎರಡನೇ ಪತ್ರ

ಮಠದಲ್ಲಿ ಕುಳಿತು ಶಿಷ್ಯರನ್ನು ಸರಿದಾರಿಗೆ ತರಬೇಕಿದ್ದ ಸಂಯಮೀಂದ್ರ, ಪಾತಕ-ಅಕ್ರಮ-ಅವಾಂತರ-ಅನಾಚಾರ ಮಾಡುವ ನರೇಶ್ ಶೆಣೈ ಬಳಗಕ್ಕೆ ಬೆಂಬಲಿಸುತ್ತಿರುವುದು ಬಾಳಿಗಾರಲ್ಲಿ ಬೇಸರ ಮೂಡಿಸಿರಬೇಕು. ಆತ ಹತನಾಗುವ ಮೂರು ವಾರ ಮೊದಲು ಮತ್ತೊಂದು ಪತ್ರ ಅವ್ಯವಹಾರಿಗಳ ಹಿತರಕ್ಷಕ ಸಂಯಮೀಂದ್ರ ಸ್ವಾಮಿಗೆ ರವಾನಿಸಿದ್ದಾರೆ. ಅದು ಹಿಂದಿನ ಪತ್ರದಂತೆ ಸೌಮ್ಯವಾಗಿರಲಿಲ್ಲ. ನೇರಾನೇರ ಸಂಯಮೀಂದ್ರರ ಮೇಲೆಯೇ ಆ ಪತ್ರ ದಾಳಿ ಮಾಡಿತ್ತು. ಸಂಯಮೀಂದ್ರನ ಅವಗುಣಗಳನ್ನು ಎತ್ತಿ ತೋರಿಸಲಾಗಿತ್ತು.

ಎರಡನೇ ಪತ್ರ ಸಂಯಮೀಂದ್ರನ ಪೂರ್ವಾಶ್ರಮದ ಹೆಸರಿಗೇ ಬಾಳಿಗಾ ಬರೆದಿದ್ದರು. ಉಮೇಶ್ ಮಲ್ಲನ್ ಸಂಯಮೀಂದ್ರನ ಪೂರ್ವಾಶ್ರಮದ ಹೆಸರು. ಕೇರಳದ ಅಲೆಪ್ಪಿ ಮೂಲದ ಉಮೇಶ್ ಮಲ್ಲನ್‌ಗೆ ಕಾಶೀಮಠ ಪೀಠದ ಹಕ್ಕೇ ಇಲ್ಲ ಎಂದು ಬಾಳಿಗಾ ವಾದಿಸಿದ್ದರಂತೆ! ವೆಂಕಟರಮಣ ದೇವಸ್ಥಾನದಲ್ಲಿ ಕುಳಿತು ಅಕ್ರಮ-ಅವ್ಯವಹಾರದ ಮಸಲತ್ತು ಮಾಡುತ್ತಿರುವರಿಗೆ ಬೆಂಬಲಿಸುತ್ತಿರುವ ಉಮೇಶ್ ಮಲ್ಲನ್ ವಿರುದ್ಧವೇ ತಾನು ನ್ಯಾಯಾಲಯಕ್ಕೆ ಹೋಗಬೇಕಾಗುತ್ತದೆ ಎಂದು ಬರೆದಿರುವ ಬಾಳಿಗಾ ಪೀಠದಲ್ಲಿ ಆತ ಮುಂದುವರಿಯುವುದು ಮಠ ಪರಂಪರೆಗೆ ವಿರುದ್ಧವಾದುದೆಂದು ಹೇಳಿದ್ದರು. ಪೀಠದಿಂದ ಇಳಿಸುವ ಹೋರಾಟ ಮಾಡಬೇಕಾಗುತ್ತದೆಂದೂ ಬಾಳಿಗಾ ಬರೆದಿದ್ದಾರೆಂಬ ಗುಲ್ಲು ಈಗ ಕೊಂಕಣಿಗರ ಬೀದಿ-ಕೇರಿಯಲ್ಲಿ ಹಬ್ಬಿದೆ.

ಕನಲಿದ ಸ್ವಾಮಿ ಮಾಫಿಯಾ

ಎರಡನೇ ಪತ್ರ ತಲುಪಿದಾಗ ಸಂಯಮೀಂದ್ರ ಕೆರಳಿ ಕನಲಿದ್ದಾನೆ. ಅಕಟಕಟಾ.... ಸರ್ವಶ್ರೇಷ್ಠ ಕಾಶೀಪೀಠದ ಮಠಾಧಿಪತಿಯಾದ ತನ್ನನ್ನೇ ಪ್ರಶ್ನಿಸುವ- ಮೂದಲಿಸುವ-ಅವಮಾನಿಸುವ ತಾಕತ್ತು ಯಃಕಶ್ಚಿತ್ ಬಾಳಿಗನಿಗೆ? ತನ್ನ ನಿಷ್ಠಾವಂತ ಅನುಯಾಯಿಗಳ ಕರೆದು ಬಾಳಿಗಾನ ಬಾಲ ಕತ್ತರಿಸುವ ಚಿಂತನ-ಮಂಥನ ಸ್ವಾಮಿ ಮಾಡಿದ್ದಾನೆ. "ಈ ಬಾಳಿಗಾನ ಬಾಯಿ ಮುಚ್ಚಿಸಲು ಆಗದಾ...." ಎಂದಿದ್ದಾನೆ. ಇದು ನರೇಶ್ ಶೆಣೈ ಪಟಾಲಮ್ ಬಾಳಿಗಾರ ತಲೆ ತೆಗೆಯುವ ಪ್ರಚೋದನೆ ನೀಡಿತಾ?

ಸಂಯಮೀಂದ್ರನ ಹತಾಶೆ-ಸೇಡು ಭುಗಿಲೆದ್ದ ಹೊತ್ತಿಗೆ ಅತ್ತ ಮಂಗಳೂರಿನ ನ್ಯಾಯಾಲಯದಲ್ಲಿ ದೇವಸ್ಥಾನದ ಸುಳ್ಳು-ತಪ್ಪು-ಕಲ್ಪಿತ ಲೆಕ್ಕ ಬರೆದ ಆಡಿಟರ್ ಜಗನ್ನಾಥ ಕಾಮತ್‌ಗೆ ಗಂಡಾಂತರ ಬಂದಿತ್ತು. ಜಗನ್ನಾಥ ಕಾಮತ್ ಮಾಡಿರುವ 8 ವರ್ಷದ ಲೆಕ್ಕಪತ್ರ ತಪಾಸಣೆ ಶುದ್ಧ ಸುಳ್ಳು ಎಂದು ಬಾಳಿಗಾ ಕೋರ್ಟಿನಲ್ಲಿ ವಾದಿಸಿದ್ದರು. ಆಗ ಕೋರ್ಟ್ ನಿತಿನ್ ಶೆಟ್ಟಿ ಅಂಡ್ ಕಂಪನಿಗೆ ಹೊಸದಾಗಿ ಆಡಿಟ್ ವರದಿ ತಯಾರಿಸಲು ಹೇಳಿತ್ತು. ಹಿಂದಿನ ಲೆಕ್ಕ ತಪಾಸಣಾ ವರದಿ, ದಾಖಲೆ ನಿತಿನ್ ಶೆಟ್ಟಿಗೆ ಕೊಡುವಂತೆ ಕೋರ್ಟ್ ಹೇಳಿತ್ತು. ಆದರೆ ಎರಡು ತಿಂಗಳು ಕಳೆದರೂ ಅಪರಾಧಿಪ್ರಜ್ಞೆಯ ಜಗನ್ನಾಥ ಕಾಮತ್ ರೀ-ಆಡಿಟ್‌ಗೆ ಅವಕಾಶ ಕೊಡಲೇ ಇಲ್ಲ. ಕೋರ್ಟಿನಲ್ಲಿ ವಾಯಿದೆ ತೆಗೆದುಕೊಳ್ಳುತ್ತಾ ಹೋದರು. ತಾನು ಹಳೆ ಲೆಕ್ಕ ಪತ್ರ ಕೊಟ್ಟರೆ ಸಿಕ್ಕಿಬಿದ್ದು ಆಡಿಟ್ ಲೈಸೆನ್ಸ್ ಕಳೆದುಕೊಳ್ಳಬೇಕಾಗುತ್ತದೆ; ತನ್ನ ಅಪರಾಧ ಸ್ವಯಂ ಸಾಬೀತಾಗುತ್ತದೆಂಬ ಆ ತವಕ-ಜಗನ್ನಾಥ ಕಾಮತ್‌ನ ಕಾಡುತ್ತಿತ್ತು.

ಆದರೆ ಕೋರ್ಟ್ ಕಳೆದ ಏಪ್ರಿಲ್ 2ರಂದು ಹಳೆ ಲೆಕ್ಕ-ಪತ್ರ-ದಾಖಲೆ-ವರದಿ ನಿತಿನ್ ಶೆಟ್ಟಿ ಕಂಪನಿಗೆ ಹಸ್ತಾಂತರಿಸುವ ಕೊನೆಯ ಗಡುವು ನೀಡಿತ್ತು. ಆಗ ಜಗನ್ನಾಥ್ ಶೆಟ್ಟಿ ಬಾಳಿಗಾನಿಂದ ಬಚಾಯಿಸುವಂತೆ 'ಡಾನ್' ನರೇಶ್ ಶೆಣೈಗೆ ದುಂಬಾಲು ಬಿದ್ದಿದ್ದಾನೆ. ನಾನು ಸಿಕ್ಕಿಬಿದ್ದರೆ ಸರಣಿಯಾಗಿ ನರೇಶ್ ಅಂಡ್ ಕಂಪನಿಯ ಗೋಲ್‌ಮಾಲ್, ಕರ್ಮಕಾಂಡ ಬಯಲಾಗುತ್ತದೆಂದು ಹೇಳಿದ್ದಾನೆ. ಅತ್ತ ಕಾಶೀಮಠದ ಕಾವಿಗಳಿಂದಲೂ ಬಾಳಿಗಾನ ನಿಯಂತ್ರಿಸುವ ಫರ್ಮಾನು ನರೇಶ್‌ಗೆ ಬಂದಿತ್ತು. ಸಂಯಮೀಂದ್ರ ಸ್ವಾಮಿಯ ಪರಮಾಪ್ತ ಕಾರ್ಯದರ್ಶಿ ವಿಶ್ವನಾಥ್ ಭಟ್ ನರೇಶ್‌ನ ಅತ್ಯಾಪ್ತ ಮಿತ್ರ. ಇಂಥ ಪಾಪಿಷ್ಠ ಕೊಂಡಿಗಳೆಲ್ಲ ಒಂದಕ್ಕೊಂದು ಹೆಣೆದುಕೊಂಡು ಬಾಳಿಗಾರನ್ನು ವೆಂಕಟರಮಣನ ಪಾದಕ್ಕೆ ಒಪ್ಪಿಸುವ ಸ್ಕೆಚ್ ಹೆಣೆದಿವೆ!!

ಸುಫಾರಿ ಆಹುತಿ

ನರೇಶ್ ಶೆಣೈಯ ತರಹೇವಾರಿ ಟ್ರೇಡಿಂಗ್‌ನ ಮ್ಯಾನೇಜರ್ ಶ್ರೀಕಾಂತ ಮೂಲ್ಯನೆಂಬ ಅನಾಹುತಕಾರಿ ಕಮ್ಯುನಲ್ ಗೂಂಡಾ. ಹಲವು ಕಮ್ಯುನಲ್ ಕ್ರಿಮಿನಲ್ ಪಾತಕ ಈತ ಮಾಡಿದ್ದಾನಾದರೂ ಒಂದೇ ಒಂದರಲ್ಲೂ ಸಿಕ್ಕಿಬಿದ್ದಿಲ್ಲ. ಡಾನ್ ನರೇಶ್ ಶೆಣೈನ ನಮೋ ಬ್ರಿಗೇಡ್‌ನ ನಮಕ್ ಹರಾಮ್ ಈತ. ನರೇಶ್ ಶೆಣೈ ಯಾವುದೇ ಕ್ರಿಮಿನಲ್ ಕಾರ್ಯಾಚರಣೆ ಮಾಡುವುದಿದ್ದರೂ ಈ ಶ್ರೀಕಾಂತನೆಂಬ ಕೂಡ್ರ ರೌಡಿಯನ್ನೇ ಮುಂದೆ ಬಿಡುತ್ತಾನೆ. ಈ ಕನ್ನಿಂಗ್ ಕೊಂಕಣಿ ಬ್ರಾಹ್ಮಣ ತೆರೆಮರೆಯಲ್ಲಿರುತ್ತಾನೆ.

⇨10

09⇦

ಬಾಳಿಗಾ ಮರ್ಡರ್ ಮಿಸ್ಟರಿ.....

ವಿನಾಯಕ ಬಾಳಿಗಾರ ಕೊಲೆಯೂ ಇದೇ ತುತ್ತೂರಿಕೆಯಲ್ಲಿ ಶ್ರೀಕಾಂತನಿಂದಲೇ ನರೇಶ್ ಮಾಡಿಸಿದ್ದಾನೆ. ವೃತ್ತಿ ಹಂತಕರಲ್ಲಿದ್ದ ಎರಡು-ಮೂರು ಮಂದಿಗೆ ಬಾಳಿಗಾರ ತಲೆ ತೆಗೆವ ಸುಪಾರಿ ಶ್ರೀಕಾಂತ ಕೊಟ್ಟಿದ್ದಾನೆ. ಪುಡಿ ರೌಡಿಗಳ ಸುಬ್ಬದ ಶ್ರೀಕಾಂತ ಬಾಳಿಗಾರ ಚಲನವಲನ ಕರಾರುವಾಕ್ಕಾಗಿ ಗುರುತಿಸಿದ್ದಾನೆ. ಆತ ಬೆಳಗಿನ 5.30-6ರ ನಸುಬೆಳಕಲ್ಲಿ ತನ್ನ ಹರುಕುಮುರುಕು ಸ್ಕೂಟರ್ ಏರಿ ವೆಂಕಟರಮಣ ದೇವಸ್ಥಾನಕ್ಕೆ ನಿತ್ಯವೂ ಹೋಗುವುದು ಶ್ರೀಕಾಂತನಿಗೆ ಗೊತ್ತಾಗಿದೆ. ನರೇಶ್ ಶೆಣೈ ಮತ್ತವನ ಬಳಗದ ಬೆದರಿಕೆಯಿಂದಾಗಿ ಸಂಜೆ 7.30ರ ನಂತರ ಬಾಳಿಗಾ ಮನೆ ಹೊರಗೆ ಹೋಗುತ್ತಿರಲಿಲ್ಲ.

"ತುಕಾ ಸುಣೆ ಮಾರ್ಲ್ಲಿ ಮಾರ್ನ ಉಡೇಟಾ" (ನಿಂಗೆ ನಾಯಿಗೆ ಹೊಡೆದಂತೆ ಕೊಂದು ಹಾಕ್ತೇನೆ) ಎಂದು ಒಮ್ಮೆ ನರೇಶ್ ಶೆಣೈ ಬಾಳಿಗಾಗೆ ಬೆದರಿಕೆಯೂ ಹಾಕಿದ್ದ. ಹಾಗಂತ ಏಕಾಂಗಿಯಾಗಿ ಮುಂಜಾನೆ ಹೊತ್ತಲ್ಲಿ ವೆಂಕಟರಮಣನ ದರ್ಶನಕ್ಕೆ ಹೋಗೋದು ಮಾತ್ರ ನಿಲ್ಲಿಸಿರಲಿಲ್ಲ. ಅಂದು ಬಾಳಿಗಾ ಮನೆಯಿಂದ 100 ಮೀಟರ್‌ನಷ್ಟು ಬಂದಿರಬಹುದು. ಆಗಲೇ ಆ ಇಕ್ಕಟ್ಟಾದ ಓಣಿಯಲ್ಲಿ ಮಾರಕಾಯುಧ ಹಿಡಿದು ಸಿದ್ಧವಾಗಿನಿಂತಿದ್ದ ಹಂತಕರು ಯಾರದೋ ವಿಳಾಸ ಕೇಳುವ ನೆಪದಲ್ಲಿ ನಿಲ್ಲಿಸಿ ಕೊಚ್ಚಿ ಬಿಸಾಡಿ ಹೋಗಿದ್ದಾರೆ. ಈ ಕೊಲೆಗಡುಕರನ್ನು ಕರೆದೊಯ್ಯಲು ಶೈಲೇಶ್ ಎಂಬಾತ ಇನ್ನೋವಾ ಕಾರು ರೆಡಿ ಮಾಡಿಟ್ಟುಕೊಂಡು ಕಾಯುತ್ತಿದ್ದ. ಈತ ಸತತ 8 ವರ್ಷ ಎಂಪಿ ನಳಿನ್‌ಕುಮಾರ್‌ನ ಕಾರು ಚಾಲಕನಾಗಿದ್ದ. ಇತ್ತೀಚೆಗಷ್ಟೇ ದೃಷ್ಟಿದೋಷದಿಂದಾಗಿ ಕೆಲಸ ಬಿಟ್ಟಿದ್ದ. ನಳಿನ್ ಕಾರು ಚಾಲಕನಾಗಿದ್ದಾಗ ಬಿಜೆಪಿ ಭೂಪ ನರೇಶ್ ಆತನ ಶಿಷ್ಯ ರೌಡಿ ಶ್ರೀಕಾಂತಗೆ ಶೈಲೇಶ್‌ನ ಸಲುಗೆ ಬೆಳೆದಿತ್ತು.

ನರೇಶ್ ಶೆಣೈ ಎಲ್ಲಿದ್ದಾನೆ?

ಬಾಳಿಗಾ ಹತ್ಯೆಯಾದ ಎರಡು-ಮೂರು ದಿನ ನರೇಶ್ ಶೆಣೈ ಮಂಗಳೂರಲ್ಲೇ ಇದ್ದ. ಅಂದು ಮುಂಜಾನೆ ಬಾಳಿಗಾ ಹತನಾದ ತಕ್ಷಣ ಐಬಿಗೆ ಓಡಿಹೋಗಿದ್ದ ನರೇಶ್ ಎಂಪಿ ನಳಿನ್‌ಗೆ ಹೇಳಿದ್ದಾನೆ. ಪಕ್ಷದ ಅಭಿಮಾನಿಯಾಗಿದ್ದ ಬಾಳಿಗಾ ಹತ್ಯೆಯಾಗಿದೆ ಎಂದು ತಿಳಿಸಿ ಅಲ್ಲಿಂದ ಹೊರಬಿದ್ದಿದ್ದಾನೆ. ತಾನೇ ಮಾಡಿಸಿದ್ದು ಎಂದು ಹೇಳದೆ ಲ್ಯಾಂಡ್ ಮಾಫಿಯಾ ಎದುರುಹಾಕಿಕೊಂಡಿದ್ದೇ ಬಾಳಿಗಾಗೆ ಮುಳುವಾಗಿದೆ ಎಂದು ಲೊಚಗುಟ್ಟಿದ್ದಾನೆ. ಇಂಥದೇ ದಾರಿ ತಪ್ಪಿಸುವ ಪ್ರಚಾರ ತನ್ನ ಗ್ಯಾಂಗಿನ ಹನುಮಂತ ಕಾಮತ್ ಮೂಲಕ ತುಂಬ ನಾಜೂಕಾಗಿ ಮಾಡಿಸಿದ್ದಾನೆ.

ಎರಡು-ಮೂರು ದಿನ ಬಾಳಿಗಾ ಹತ್ಯೆಗೆ ಲ್ಯಾಂಡ್ ಮಾಫಿಯಾನೇ ಕಾರಣವೆಂಬ ಭಾವನೆ ಇತ್ತು. ಆದರೆ ವೆಂಕಟರಮಣ ದೇವಸ್ಥಾನ-ಕಾಶೀಮಠ ಮಾಫಿಯಾದ ಕೈವಾಡವೂ ಈ ಕೊಲೆಯಲ್ಲಿದೆ ಎಂಬ ವಾಸನೆ ಪೊಲೀಸರಿಗೆ ಅದ್ಹೇಗೋ ಬಂದಿತ್ತು. ಆದರೆ ನಮೋ ಬ್ರಿಗೇಡ್ ಡಾನ್-ಭಾವಿ ಎಮ್ಮೆಲ್ಲೆ ಗತ್ತಿನ ನರೇಶ್ ಶೆಣೈ ಮತ್ತು ಕಾಶೀಮಠದ ಸ್ವಾಮಿ ಸೆಕ್ರೆಟರಿ ವಿಶ್ವನಾಥ್ ಭಟ್ಟನ ಅನೈತಿಕ ಮೈತ್ರಿ-ಸಂಯಮೀಂದ್ರನ ಹತಾಶ ಚಡಪಡಿಕೆಗಳು ಬಾಳಿಗಾ ಮರ್ಡರ್‌ನ "ಜಿಎಸ್‌ಬಿ ಆಯಾಮ" ತೆರೆದಿಡಲು ಶುರುಮಾಡಿತು. ಆಗ ಬೆಚ್ಚಿದ ನರೇಶ್ ಮಂಗಳೂರಿಂದ ಕಾಲುಕಿತ್ತು ತಲೆಮರೆಸಿಕೊಳ್ಳತೊಡಗಿದ.

ಬಾಳಿಗಾರ ಕೊಲ್ಲುವ ಮೊದಲೇ ವ್ಯವಸ್ಥಿತ ಪ್ಲಾನ್ ನರೇಶ್ ಶೆಣೈಯ ಹಂತಕ ಪಡೆ ಹೆಣೆದಿದೆ. ಪೊಲೀಸರ ನಿಭಾಯಿಸಲೆಂದು ಆರಂಭದಲ್ಲೇ 50 ಲಕ್ಷದ ಬಜೆಟ್ ಹಾಕಲಾಗಿತ್ತು. ಸಿಸಿಬಿ ಇನ್ಸ್‌ಪೆಕ್ಟರ್ ವೆಲೈಂಟೀನ್ ಡಿಸೋಜಾ, ಬಂದರು ಠಾಣೆಯ ಸಿಪಿಐ ಶಾಂತಾರಾಮ್, ಪಾಂಡೇಶ್ವರ ಠಾಣೆ ಮತ್ತು ಬರ್ಕೆ ಠಾಣೆ ಪೊಲೀಸರು ನರೇಶನ ಹಿಡಿಯದೆ ಕೇಸ್ ಹಳ್ಳ ಹಿಡಿಸುವ ಗುತ್ತಿಗೆ 50 ಲಕ್ಷಕ್ಕೆ ಹಿಡಿದಿದ್ದರು. ಹೀಗಾಗಿ ಆರಂಭದಲ್ಲೇ ಕೇಸು ಜಾಳಾಗಿ ನರೇಶ್ ಪರಾರಿಯಾಗಲು ಅನುಕೂಲವಾಗಿತ್ತು. ಯಾವಾಗ ಪೊಲೀಸ್ ಕಮೀಷನರ್ ಚಂದ್ರಶೇಖರ್‌ರೇ ಖುದ್ದು ಕೇಸ್ ತನಿಖೆ ಕೈಗೆತ್ತಿಕೊಂಡರೋ ಆಗ ಕೆಳಹಂತದ ಪೊಲೀಸರ ದ್ರೋಹ, ಲಂಚ ಬದುಕುತನ, ಕೊಲೆಗಡುಕತನ ಜಗಜ್ಜಾಹೀರಾಗಿ ಹೋಯ್ತು.

ಯಾವಾಗ ಡಿಸಿಪಿ ಚಂದ್ರಶೇಖರ್ ನಿಷ್ಠೂರ ತನಿಖೆಗೆ ಮುಂದಾದರೋ ಆಗ ನರೇಶ್ ಸೀದಾ ಹೋಗಿದ್ದು ದಿಲ್ಲಿಗೆ. ಅಲ್ಲಾತ ತನಗೆ ವಿಧೇಯನಾದ ಸಂಸದ ನಳೀನ್‌ನ ಸರ್ಕಾರಿ ಬಂಗ್ಲೆಯಲ್ಲಿ ಒಂದೆರಡು ದಿನ ತಂಗಿದ್ದಾನೆ. ಅಲ್ಲಿಗೇ ಗೇರುಬೀಜ ವ್ಯಾಪಾರಿಯೂ, ಮಂಗಳೂರು ನಗರ ಬಿಜೆಪಿ ಕಾರ್ಯದರ್ಶಿಯೂ, ನರೇಶ್‌ನ ದೋಖಾಬಾಜಿ ಗ್ಯಾಂಗ್‌ನ ಸೇನಾಧಿಪತಿಯೂ ಆಗಿರುವ ವೇದವ್ಯಾಸ ಕಾಮತ್‌ನ ಅಣ್ಣ ವಾಸುದೇವ ಕಾಮತ್ ಹೋಗಿ ನರೇಶ್‌ನ ಸಂಧಿಸಿ ಬಂದಿದ್ದಾನೆ. ಇತ್ತ ನರೇಶ್ ಕಡೆಯವರು ನಿರೀಕ್ಷಣಾ ಜಾಮೀನಿಗೆ ಮಂಗಳೂರು ಸೆಷನ್ಸ್ ಕೋರ್ಟ್‌ಗೆ ಅರ್ಜಿ ಹಾಕಿ ವಿಫಲರಾಗಿದ್ದಾನೆ. ಹೈಕೋರ್ಟಿಗೆ ನಿರೀಕ್ಷಣಾ



ವೆಂಕಟರಮಣ ದೇವಸ್ಥಾನ

ಜಾಮೀನು ಕೇಳಿಹೋದರು.

ಅಲ್ಲಿ ಕೇಸ್ ನಡೆಯುತ್ತಿರುವಾಗ ನರೇಶ್ ದಿಲ್ಲಿಯಿಂದ ಕಠ್ಮಂಡು (ನೇಪಾಳ)ಗೆ ಹೋಗಿದ್ದಾನೆ. ಆತನ ಮೊಬೈಲ್ ಫೋನ್ ಸಿಮ್ ಸಹ ನೇಪಾಳದ್ದೇ. ಅಲ್ಲಾತ ಮಂಗಳೂರು ಮೂಲದವರಾದ ಪಶುಪತಿ ದೇವಾಲಯದ ಅರ್ಚಕರೊಬ್ಬರ ಮನೆಯಲ್ಲಿ ತಂಗಿದ್ದಾನೆ. ಈ ಅರ್ಚಕರೂ ಕೊಂಕಣಿಗರೇ. ಕಠ್ಮಂಡುನಲ್ಲಿದ್ದಾಗ ನರೇಶ್ ಕಾಶೀಮಠ ಸ್ವಾಮಿ ಸೆಕ್ರೆಟರಿ ವಿಶ್ವನಾಥ ಭಟ್ಟನ ಜತೆ ಫೋನಲ್ಲಿ ಮಾತಾಡಿದ್ದಾನೆ.

ಪಾತಕಿಗಳ ಪಾತ್ರ ಪರಿಚಯ

ನರೇಶ್ ಶೆಣೈ ಪಕ್ಕಾ ಕ್ರಿಮಿನಲ್ ಜಾಯಮಾನದವ. ಆತ ಒಂದು ಕಡೆ ಎರಡು ದಿನಗಳಿಗಿಂತ ಹೆಚ್ಚು ನಿಂತಿಲ್ಲ. ಕಠ್ಮಂಡುನಿಂದ ನರೇಶ್ ಕಾಶ್ಮೀರಕ್ಕೆ ಹೋಗಿದ್ದಾನೆ. ಅಲ್ಲಿಂದ ಬರೋಬ್ಬರಿ 60 ಬಾರಿ ವೇದವ್ಯಾಸ ಕಾಮತ್ ಮತ್ತು ಮಂಜು ನಿರೇಶ್ಯಾಲ್ಯನ ಜತೆ ಮಾತಾಡಿದ್ದಾನೆ. ಈ ವೇದವ್ಯಾಸ ಮತ್ತು ಮಂಜು ಬಾಸ್ ಸಂಗಡ ಮಾತಾಡಲು ಬಳಸಿದ್ದು ಕುಂದಾಪುರದ ಸಂದೇಶ್ ಕಾಮತ್ ಎಂಬ ಹುಡುಗನದು. ಅರವಿಂದ ಮೋಟರ್ಸ್‌ನಲ್ಲಿ ಕೆಲಸಕ್ಕಿರುವ ಈ ಕೊಂಕಣಿ ಪೋರ ನಮೋ ಬ್ರಿಗೇಡ್ ಭೂಪ. ಈ ನಮೋ ಸ್ತುತಿಯಿಂದಾಗಿ ಆತನಿಗೆ ಕ್ರಿಮಿನಲ್ ನರೇಶ್ ಶೆಣೈನ ಸಾಂಗತ್ಯ ಸಿಕ್ಕಿದೆ. ಈ ಸಂದೇಶನ ಬೆದರಿಸಿ ಆತನ ಸಿಮ್ ಕಿತ್ತುಕೊಂಡಿದ್ದ ಮಂಜು ಮತ್ತು ವೇದವ್ಯಾಸ ನಿರಂತರ-ನಿರಾತಂಕವಾಗಿ ನರೇಶ್ ಜತೆ ಮಾತಾಡಿ ಬಚಾವಾಗುವ ಬಗೆ ಹುಡುಕಿದ್ದಾರೆ.

ಎಂದೂ ನರೇಶ್ ನೇರವಾಗಿ ಮಂಜು, ಜಗನ್ನಾಥ, ವೇದವ್ಯಾಸ, ಹನ್ಮಂತ ಜತೆ ಮಾತಾಡಿಲ್ಲ. ತುಂಬ ಎಚ್ಚರಿಕೆಯಿಂದ ಕ್ರಿಮಿನಲ್ ಆಟ ಆಡಿದ್ದಾನೆ. ಸ್ಮಗ್ಲರ್ ಬಾಬಿಯಂಥವರ ಮೊಬೈಲ್‌ಗೆ ಫೋನ್ ಮಾಡಿ ತನಗೆ ಬೇಕಾದವರ ಕರೆಸಿಕೊಂಡು ಮಾತಾಡಿದ್ದಾನೆ. ಸ್ಮಗ್ಲರ್ ಬಾಬಿಯಂತೆ ಹಲವರ ಮೊಬೈಲ್ ಮೂಲಕ ಈತ ತನ್ನ ಪಾತಕ ಮಿತ್ರರ ಜತೆ ಸಂಪರ್ಕ ಸಾಧಿಸಿದ್ದಾನೆ. ಒಂದು ಊಹಾಪೋಹದ ಪ್ರಕಾರ ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾನ ಗುಜರಾತಿನ ಕಡಲಲ್ಲಿರುವ ಹಡಗಲ್ಲಿ ಈತ ಕೆಲದಿನ ತಂಗಿದ್ದನಂತೆ; ನಂತರ ಬಾಬಾರಾವ್‌ದೇವನ ಅಡ್ಡೆಯಲ್ಲೂ ಅವಿತಿದ್ದನಂತೆ.

ಒಂದಂತೂ ಖರೆ. ಯಾವಾಗ ಪೊಲೀಸರು ಮಂಜು ನಿರೇಶ್ಯಾಲ್ಯನ ಬಂಧಿಸಿದರೋ ಆಗ ಹಲವು ಸಂಗತಿಗಳು ಹೊರಬಂದಿದೆ. ತಾನೊಬ್ಬ ಪೊಲೀಸ್ ಫೋಟೋಗ್ರಾಫರ್, ಉದಯವಾಣಿ ಪತ್ರಿಕೆಯ ಚಿತ್ರಗಾರ ಎಂದೆಲ್ಲ ಅಹಂಕಾರದಿಂದ ಹಾರಾಡುತ್ತಿದ್ದ ಮಂಜು ಪೊಲೀಸರು ಹೇಳಿಕಳಿಸಿದರೂ ಸ್ಟೇಷನ್‌ಗೆ ಬಂದಿರಲಿಲ್ಲ. ಆಗಾತನ ಎತ್ತಾಕಿಕೊಂಡು ಹೋದ ಪೊಲೀಸರು ಮೂರನೇ ದರ್ಜೆ ಟ್ರೀಟ್‌ಮೆಂಟ್ ಕೊಟ್ಟೇ ಬಾಯಿ ಬಿಡಿಸಬೇಕಾಗಿಬಂತು. ಏರೋಪ್ಲೇನ್ ಹತ್ತಿಸಿದಾಗ ನರೇಶ್ ಎಲ್ಲೆಲ್ಲಿ ಹೋಗಿದ್ದಾನೆ; ಕುಂದಾಪುರದ ಸಂದೇಶನ ಸಿಮ್ ನಿಂದ ಮಾತಾಡಿದ್ದೆಲ್ಲ ಹೇಳಿದ್ದಾನೆ.

ಕೊಂಕಣಿಗರ ಭುವನೇಂದ್ರ ಕೋ-ಆಪರೇಟೀವ್ ಬ್ಯಾಂಕಿನ ಪಾರುಪತ್ಯಗಾರನೂ-ಬಿಜೆಪಿ ಲೀಡರೂ ಆಗಿರುವ ವೇದವ್ಯಾಸ ಕಾಮತ್ ಅಪಾಯಕಾರಿ ಲ್ಯಾಂಡ್ ದಂಧೆಕೋರ. ಈತ ಮತ್ತು ನರೇಶ್ ಶೆಣೈ ವ್ಯಾಜ್ಯ ಇರುವ ಭೂಮಿಗಳ ವ್ಯವಹಾರ ಕುದುರಿಸುವುದೇ ದಂಧೆ ಮಾಡಿಕೊಂಡಿದ್ದಾರೆ. ಅಮಾಯಕರ ಬೆದರಿಸಿ ರಿಯಲ್ ಎಸ್ಟೇಟ್ ದಂಧೆದಾರರಿಗೆ ಡೀಲ್ ಕುದುರಿಸಿಕೊಟ್ಟು ನಿರಾಯಾಸವಾಗಿ ಕಮಿಷನ್ ಹೊಡೆಯುತ್ತಿದ್ದಾರೆ. ಈ ದುಷ್ಟರಿಗೆ ಬಾಳಿಗಾರ ಕುಟುಂಬದ ಬದುಕಿಗೆ ಆಸರೆಯಾದ ಜಾಗದ ಮೇಲೂ ಆಸೆಯಾಗಿತ್ತು. ಮನೆ ಹಿಂದಿನ ಜಾಗ ಕೊಡುವಂತೆ ವೇದವ್ಯಾಸ-ನರೇಶ್ ಶೆಣೈ ಪಟಾಲಮ್ ಬಾಳಿಗಾರ ಕಾಡುತ್ತಲೇ ಇತ್ತು.

ಇಂಥ ವೇದವ್ಯಾಸ ಈಗ ಕಂಗಾಲಾಗಿದ್ದಾನೆ. ಸಂಯಮೀಂದ್ರ ಸ್ವಾಮಿ ಪಿಎ ವಿಶ್ವನಾಥ ಭಟ್‌ನ ಆಫ್ ದಿ ರೆಕಾರ್ಡ್ ಎತ್ತಾಕಿಕೊಂಡು ಹೋಗಿದ್ದ ಪೊಲೀಸರು ಮಂಜು ನಿರೇಶ್ಯಾಲ್ಯನಿಗೆ ಏರೋಪ್ಲೇನ್ ಹತ್ತಿಸಿದ್ದರು. ಈಗ ನರೇಶನ ಗುಟ್ಟುಗಳ ಬಲ್ಲ ಆತನ ಮ್ಯಾನೇಜರ್ ಶ್ರೀಕಾಂತನನ್ನು ಕಂಬಿ ಹಿಂದೆ ದೂಡಿದ್ದಾರೆ. ಹೀಗಾಗಿ ಕಂಗೆಟ್ಟಿರುವ ವೇದವ್ಯಾಸ ಪೊಲೀಸರಿಂದ ತಪ್ಪಿಸಿಕೊಳ್ಳಲು ವಿದೇಶ ಪ್ರಯಾಣದ ಜಾಹೀರಾತು ಹಾಕಿಸಿಕೊಂಡಿದ್ದಾನೆ. ಪೊಲೀಸರ ದಾರಿ ತಪ್ಪಿಸಲು ಇಂಥದೊಂದು ಆ್ಯಡ್ ಹಾಕಿಸಿರುವ ವೇದವ್ಯಾಸ ಕಾಮತ್ ಚೆನ್ನೈನಲ್ಲಿ ಅವಿತಿದ್ದಾನೆಂದು ಮಂಗಳೂರಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ.

ಬಾಳಿಗಾ ಹತ್ಯೆ ನಡೆದಾಗ ಪೊಲೀಸರ ನಿಭಾಯಿಸಿದ್ದು ಇದೇ ವೇದವ್ಯಾಸನಾದರೆ ಮಾಧ್ಯಮದವರನ್ನು ಮ್ಯಾನೇಜ್ ಮಾಡಲು ಹವಣಿಸಿದ್ದು ಮಂಜು ನಿರೇಶ್ಯಾಲ್ಯ. ಕೆಲವು ಪತ್ರಕರ್ತರಿಗೆ ಈ ಪಾತಕಿ ಬೆದರಿಕೆಯೂ ಹಾಕಿ ನರೇಶ್ ಶೆಣೈ ವಿರುದ್ಧ ಬರೆಯದಂತೆ ಹೇಳಿದ್ದ. ನಾಗರಿಕ ಹಿತರಕ್ಷಣಾ ವೇದಿಕೆ ಎಂಬ ಬ್ಲ್ಯಾಕ್‌ಮೇಲ್ ಲೆಟರ್ ಹೆಡ್ ಸಂಘ ಕಟ್ಟಿಕೊಂಡಿರುವ ಹನುಮಂತ ಕಾಮತ್ ಮೊದಮೊದಲು ನರೇಶ್ ಶೆಣೈನ ಮೇಲೆ ಅನುಮಾನಬಾರದಿರಲೆಂದು ಲ್ಯಾಂಡ್ ಮಾಫಿಯಾ ಬಗ್ಗೆ ಕತೆ ಕಟ್ಟಿ ಹಬ್ಬಿಸಿದ್ದ. ಈಗ ಆತನೂ ತನ್ನ ಪಾಳಿ ಬರಬಹುದೆಂದು ಕನಸಲ್ಲೂ ಬೊಬ್ಬೆ ಹೊಡೆಯುತ್ತಿದ್ದಾನೆ. ಪೊಲೀಸರ ಕಂಡರೆ ಬೆಚ್ಚಿಬೀಳುತ್ತಿದ್ದಾ[ನೆ.]

ವೆಂಕಟರಮಣ ದೇವಸ್ಥಾನ. 8 ವರ್ಷದ ಲೆಕ್ಕಪತ್ರ ಮ[...] ಜೀರ್ಣೋದ್ಧಾರ ಖರ್ಚುವೆಚ್ಚ ಬೇಕಾಬಿಟ್ಟಿಯಾಗಿ ಬರೆದು ಆಡಿಟ್ ವರದಿ ತಯಾರಿಸಿರುವ ಚಾರ್ಟರ್ಡ್ ಅಕೌಂಟೆಂಟ್ ಜಗನ್ನಾಥ್ ಕಾಮತ್ ಮೇಲೂ ಪೊಲೀಸರಿಗ[ೆ] ಅನುಮಾನವಿದೆ. ಒಂದು ಸುದ್ದಿ ಪ್ರಕಾರ ಬಾಳಿಗಾ ಮರ್ಡರ್[...] ಸ್ಕೆಚ್ ಆಗಿದ್ದೇ ಸಿಎ ಕಾಮತ್ ಆಫೀಸ್‌ನಲ್ಲಂತೆ. ಈತನನ[್ನು] ಮಾಜಿ ಮಂತ್ರಿ ಕೃಷ್ಣ ಪಾಲೇಮಾರ್ ಎಂಬ ಬ್ಲೂಬಾಯ್[...] ರಕ್ಷಿಸುತ್ತಿದ್ದಾನೆ. ಆತನ ಕಳ್ಳಗಂಟು ಕಾಮತ್ ತಾವ[...] ಇದೆಯೆಂಬ ಗುಲ್ಲು ಹಬ್ಬಿದೆ.

ಡಿಸಿಪಿ ಚಂದ್ರಶೇಖರ್

ಮಂಗಳೂರಿನ ಡಿಸಿಪಿ ಚಂದ್ರಶೇಖರ್ ಖುದ್ದು ಬಾಳಿಗಾ ಕಗ್ಗೊಲೆ ಕೇಸಿನ ಉಸ್ತುವಾರಿ ವಹಿಸಿಕೊಂಡಿದ್ದಾರೆ. ಕೆಳಹಂತದ ಅಧಿಕಾರಿಗಳು ನರೇಶ್ ಶೆಣೈ-ಮಂಜು ನಿರೇಶ್ಯಾಲ್ಯ, ವೇದವ್ಯಾಸ, ಕಾಮತ್-ಜಗನ್ನಾಥ ಕಾಮತರು ಬಿಸಾಕುವ ಬಿಸ್ಕತ್‌ಗೆ ಬಾಯಿ ತೆರೆದು ಕುಂತಿದ್ದಾರೆಂಬುದು ಡಿಸಿಪಿ ಚಂದ್ರಶೇಖರ್‌ಗೆ ಖಾತ್ರಿಯಾಗಿದೆ. ಮೊದಮೊದಲು ನರೇಶ್‌ಗೆ ತಲೆ ತಪ್ಪಿಸಿಕೊಳ್ಳಲು ಹೆಲ್ಪ್ ಮಾಡಿದ್ದೇ ವೆಲೈಂಟೀನ್ ಡಿ'ಸೋಜಾನಂಥ ಖಾಕಿ ಖದೀಮರು. ನಿರೀಕ್ಷಣಾ ಜಾಮೀನಿಗೆಂದು ಹೈಕೋರ್ಟ್‌ಗೆ ಹೋಗಿದ್ದ ನರೇಶ್ ಶೆಣೈಗೆ ಅಲ್ಲೂ ಸೋಲಾಗಿದೆ. ಈಗಾತ ಶರಣಾಗಲ[ು] ಯೋಚಿಸುತ್ತಿದ್ದಾನೆಂಬ ಸಮಾಚಾರವೂ ಇದೆ.

ಆದರೆ ಕಾಶೀಮಠದ ಸ್ವಾಮಿ ನರೇಶನಿಗೆ ಶರಣಾಗದಂತೆ ತಡೆಯುತ್ತಿದ್ದಾನೆ. ತಾನು ಪೊಲೀಸರ ಕೈಯಿಂದ ರಕ್ಷಿಸುತ್ತೇನೆಂದು ಹೇಳಿದ್ದಾನಂತೆ. ನರೇಶ್ ಜೈಲು ಪಾಲಾದರೆ ತನ್ನ ಪಾತಕ ಬಯಲಾಗುತ್ತದೆಂಬ ಭಯ ಸಂಯಮೀಂದ್ರನಿಗೆ. ತನ್ನ ಪಿಎ ವಿಶ್ವನಾಥ ಭಟ್ಟನ ಪೊಲೀಸು ಎತ್ತಾಕಿಕೊಂಡು ಹೋದಾಗ ಕಿಲ್ಲಾಡಿ ಕಿರಾತಕ-ಚಂದ್ರಶೇಖರ ಸ್ವಾಮಿ ಯಾ[...] ಚಂಭಟ್ಟನ ಹಿಡಿದುಕೊಂಡು ಗೃಹಮಂತ್ರಿ ಪರಮ್ ಪಾದಕ್ಕೆ ಬಿದ್ದಿದ್ದ. ಈ ಕೊಂಕಣಿಗರ ಕುಲ ಗುರು ಅ[...] ತ್ರಿಕಾಲಪೂಜೆಯೂ ಮಾಡಿರಲಿಲ್ಲ. ಮಂಜು ನಿರೇಶ್ಯಾಲ್ಯನ ಬಂಧಿಸಿ ಏರೋಪ್ಲೇನ್ ಹತ್ತಿಸಿದಾಗ ಹಣೆಹಣೆ ಚಚ್ಚಿಕೊಂಡಿದ್ದ ಸ್ವಾಮಿ ನರೇಶನ ಬೇಲ್ ಅರ್ಜಿ ಹೈಕೋರ್ಟ್[...] ಇತ್ಯರ್ಥವಾಗುವ ದಿನ ತುಂಬ ಟೆನ್ಷನ್‌ನಲ್ಲಿ ಚಡಪಡಿಸುತ್ತಿದ್ದನಂತೆ. ಅಂದಾತನಿಗೆ ತ್ರಿಕಾಲಪೂಜೆಗೂ ಮೂಡಿರಲಿಲ್ಲ. ಹೀಗಾಗಿ ಒಂದೇ ಬಾರಿ ಮೂರೂ ಪೂಜೆ ಮುಂಜಾನೆಯೇ ಮುಗಿಸಿ ನಿರೀಕ್ಷಣಾ ಜಾಮೀನಿನ ತೀರ್ಪಿಗಾಗಿ ಶತಪಥ ಹಾಕುತ್ತಿದ್ದನಂತೆ.

ಮಂಗಳೂರಲ್ಲಿರುವ ಕಾರ್ಪೊರೇಷನ್ ಬ್ಯಾಂಕಿನ ಫೌಂಡರ್ಸ್ ಬ್ರಾಂಚ್‌ನಲ್ಲಿ ಬರೋಬ್ಬರಿ ಮೂರೂವರೆ ಕೋಟಿ ಸಂಯಮೀಂದ್ರನ ವೈಯಕ್ತಿಕ ಹೆಸರಲ್ಲಿದೆ. ಸ್ವಾಮಿಯಾದವನು ತನ್ನ ಹೆಸರಲ್ಲಿ ಹಣ ಇಟ್ಟುಕೊಳ್ಳಬಾರದು ಎಂಬುದು ಮಠ ನಿಯಮ. ಆದರೆ ಈ ಸ್ವಾಮಿ ಬಾಳಿಗಾ ಮರ್ಡರ್‌ನಂಥ ಕೇಸ್ ನಿಭಾಯಿಸಲೆಂದೇ ವೈಯಕ್ತಿಕ ಖಾತೆಯಲ್ಲಿ ಹಣ ಇಟ್ಟುಕೊಂಡಿದ್ದಾನೆಂದು ಜನರಾಡಿಕೊಳ್ಳುತ್ತಿದ್ದಾರೆ. ವೆಂಕಟರಮಣ ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಸಂದರ್ಭದ ಸಂಭ್ರಮದ ಹೊತ್ತಲ್ಲೇ ಮಠದ ಸಿಬ್ಬಂದಿಯೊಬ್ಬನ ಮರ್ಡರ್ ದೇವಸ್ಥಾನದಲ್ಲೇ ನಡೆದಿತ್ತು. ಮಠದ ಮತ್ತೊಬ್ಬ ಸಿಬ್ಬಂದಿಯೇ ಈ ಕೊಲೆ ಮಾಡಿದ್ದ. ಆಗ ಕೇಸ್ ದೊಡ್ಡದಾಗಬಾರದೆಂದು ಸಂಯಮೀಂದ್ರ ಮಂತ್ರ ದಂಡ ಎತ್ತಿದ್ದು ಇವತ್ತಿಗೂ ಭಕ್ತಾದಿಗಳು ಮರೆತಿಲ್ಲ. ಈಗ ಸಂಯಮೀಂದ್ರನ ಪರಿವಾರವೇ ಕೊಲೆಗಡುಕ ನರೇಶನ ಕಾಪಾಡುತ್ತಿದೆ ಎಂದು ಬೊಬ್ಬೆ ಎದ್ದಿದೆ. 1.4 ಕೋಟಿ ಚೆಕ್ ನರೇಶ್ ಶೆಣೈನ ಆಯುರ್ವೇದಿಕ್ ಮದ್ದಿನ ಡಿಲೆವರಿ ಬಾಯ್ ವಿಘ್ನೇಶ್ ನಾಯಕ್‌ಗೆ ಕೊಟ್ಟವರ್ಯಾರು. ಪೊಲೀಸರು ನರೇಶನ ಬ್ಯಾಂಕ್ ಖಾತೆ ಮಾಡಿದ ನಂತರ ವಿಘ್ನೇಶನಂಥ ಬಡಪಾಯಿಗಳ ಬಳಸಿಕೊಂಡು ಮಠ ಮಾಫಿಯಾ ಮಸಲತ್ತು ಮಾಡುತ್ತಿದೆ.

ಕೊಲೆ ಆರೋಪದಲ್ಲಿ ಈಗ ಬಂಧನದಲ್ಲಿರುವ ಎಲ್ಲರೂ ಹಿಂದುಳಿದ ವರ್ಗದ ಬಿಲ್ಲವ, ದೇವಾಡಿಗ ಮತ್ತು ಕುಲಾಲ ಸಮುದಾಯದವರು. ಬಾಳಿಗಾ ಕೊಲೆಗೆ ಸಂಚು ಮಾಡಿದ ಮೇಲುವರ್ಗದ ಕೊಂಕಣಿ ಕುಳಗಳ್ಯಾರೂ ಈವರೆಗೆ ಅಂದರ್ ಆಗಿಲ್ಲ. ಹೊರಗುಳಿದೇ ಸಾಕ್ಷಿನಾಶಕ್ಕೆ, ಬಚಾವಿಗೆ ಕೋಟಿಗಳಲ್ಲಿ ಹಣ ಹರಿಸುತ್ತಿದ್ದಾರೆ. ಶೂದ್ರರನ್ನು ಬಲಿಗೊಟ್ಟು ಮೆರೆವ ಪುರೋಹಿತಶಾಹಿ-ಹಿಂದೂತ್ವದ ಹರಾಮಿತನವಿದು.

ಯಾರೇನೇ ಹೇಳಲಿ, ಡಿಸಿಪಿ ಚಂದ್ರಶೇಖರ್ ಹಲವು ಒತ್ತಡಗಳ ನಡುವೆಯೂ ಪ್ರಮುಖ ಪಾತಕಿ ನರೇಶ್ ಶೆಣೈಗೆ ಕೋಳ ತೊಡಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ ಮಠಾಧೀಶರ-ಬಿಜೆಪಿ ಬಹಾದ್ದೂರರ ಆಶ್ರಯ ಪಡೆದಿರುವ ನರೇಶ್ ಶೆಣೈ ತಪ್ಪಿಸಿಕೊಳ್ಳುತ್ತಲೇ ಇದ್ದಾನೆ. ರಕ್ತಪಿಪಾಸು ಚೆಡ್ಡಿ ಚತುರ ನರೇಶ್ ಶೆಣೈ ಜೈಲಲ್ಲಿ ಕೊಚ್ಚಕ್ಕಿ, ಗಂಜಿ-ಒಣಮೀನು ಮುರಿವ ದಿನ ಎಂದು ಬಂದೀತು? ಹಾಗಂತ ಜನ ಕಾಯುತ್ತಿದ್ದಾರೆ. ಕುತೂಹಲ ಈಗ ಕ್ಲೈಮ್ಯಾಕ್ಸ್ ತಲುಪುತ್ತಿದೆ. ಡಿಸಿಪಿ ಚಂದ್ರಶೇಖರ್ ಬಗ್ಗೆ ಜನ ನಂಬಿಕೆ ಇಟ್ಟಿದ್ದಾರೆ.

● ಶುದ್ಧೋಧನ

ನಮೋ ಬ್ರಿಗೇಡ್ ನಾಮ!!

ನಮೋ ಬ್ರಿಗೇಡ್ ಎಂಬ ಭೂತಗಳ ಸಂಘ ಕಟ್ಟುವ ಐಡಿಯಾ ಮೊದಲು ಹೊಳೆದಿದ್ದೇ ಮಂಗಳೂರಿನ ಚೆಡ್ಡಿ ಮಸಲತ್ತುಗಾರ ನರೇಶ್ ಶೆಣೈಗೆ! ಸಂಘ ಪರಿವಾರದ ತಿರುಬು ಮಾತುಗಾರ, ಕೋಮು ಕಿತಾಪತಿಯ ಭಾಷಣಕ್ಕೂ ಕಾಸು ಕಸಿದುಕೊಳ್ಳುವ ಚಕ್ರವರ್ತಿ ಸೂಲಿಬೆಲೆ ಸಖ್ಯ ಕುದುರಿಸಿದ್ದ ನರೇಶ್ ಶೆಣೈ ದೇವಸ್ಥಾನದಲ್ಲಿ ಹೊಡೆವ ಹಣ ಬಲದಿಂದಲೇ ಕಾವಿ-ಚೆಡ್ಡಿ ಪಡೆಯಲ್ಲಿ ಪ್ರಖ್ಯಾತಿಗೂ ಬಂದುಬಿಟ್ಟಿದ್ದ. ನರೇಶನ ಮನುಷ್ಯತ್ವ-ನೈತಿಕತೆ-ದೇಶಪ್ರೇಮ ಎಲ್ಲ ಬೂಟಾಟಿಕೆ. ಆತನಿಗೆ ನಮೋ ಬ್ರಿಗೇಡ್, ಹಿಂದೂತ್ವ ಹಣ ಮಾಡಲು ಬಂಡವಾಳವಷ್ಟೇ.

ಸೂಲಿಬೆಲೆಯನ್ನು ಕಟ್ಟಿಕೊಂಡು ಈತ ನಮೋ ಬ್ರಿಗೇಡ್ ಹೆಸರಲ್ಲಿ ಕಾಸು ಮಾಡುವ ಬಿಸ್ನೆಸ್ ಒಂದು ತುಂಬ ಯಶಸ್ವಿಯಾಗಿ ಮಾಡಿದ್ದಾನೆ. ಕಳೆದ ಲೋಕಸಭೆ ಎಲೆಕ್ಷನ್ ಹೊತ್ತಲ್ಲಿ ನಮೋ ಮೇನಿಯಾ ಅಸ್ತ್ರ ಮಾಡಿಕೊಂಡು ನರೇಶ್-ಸೂಲಿಬೆಲೆ ಕೋಟ್ಯಂತರ ರೂ.ಗಳ ಟೋಪಿ-ದಂಧೆ ಮಾಡಿದ್ದಾರೆ. ರಾಜ್ಯಾದ್ಯಂತ ನಮೋ ಬ್ರಿಗೇಡ್‌ಗೆ ಉರಿ ಮುಸುಡಿನ ಮೋದಿಯ ಚಿತ್ರವಿರುವ ಮುಖವಾಡ, ಟೀಶರ್ಟ್, ಸ್ಟಿಕ್ಕರ್, ಕ್ಯಾಪ್‌ಗಳನ್ನು ತಯಾರಿಸಿ ನರೇಶ್-ಸೂಲಿಬೆಲೆ ಕಳಿಸಿದ್ದಾರೆ. ಇದಕ್ಕೆ ಯಾವ ಲೆಕ್ಕಪತ್ರವೂ ಇಲ್ಲ. ಈ ನಮೋ ಬ್ರಿಗೇಡ್ ಪ್ರಹಸನದಿಂದ ಚೆಡ್ಡಿ ವಲಯದಲ್ಲಿ ಪ್ರವರ್ಧಮಾನಕ್ಕೆ ಬಂದ ನರೇಶ್ ದುಡ್ಡು ಮಾಡಿಕೊಂಡ. ಮಂಗಳೂರು ದಕ್ಷಿಣ ಕ್ಷೇತ್ರದ ಭಾವಿ ಬಿಜೆಪಿ ಕ್ಯಾಂಡಿಡೇಟ್ ಎಂಬ ಭೀಭತ್ಸ ಇಮೇಜೂ ಆತನಿಗೆ ಬಂತು. ತನ್ಮೂಲಕ ಸ್ವ-ಜಾತಿ ಕೊಂಕಣಿ ವರ್ತಕ ವಲಯದಲ್ಲಿ, ಕಾಶೀಮಠ ಸಂಸ್ಥಾನದಲ್ಲಿ, ವೆಂಕಟರಮಣ ದೇವಸ್ಥಾನದ ಪಾರುಪತ್ಯದಲ್ಲಿನ ಆತನ ಆಕ್ಟೋಪಸ್ ಹಿಡಿತಕ್ಕೆ ಕಳವಳಕಾರಿ ಖದರು ಬಂದುಬಿಟ್ಟಿತು. ಈ ಧಾರ್ಷ್ಟ್ಯವೇ ವಿನಾಯಕ ಬಾಳಿಗಾನ ಕೊಲೆ ಮಾಡಿ ದಕ್ಕಿಸಿಕೊಳ್ಳುವ ದುಸ್ಸಾಹಸಕ್ಕೆ ಕೈಹಾಕಲು ಪ್ರೇರೇಪಿಸಿತು.

ಕಾಡಿ ಕತೆಯಾದವಳು



ಹೌದು. ಆ ಮುದುಕಿ ಮೊನ್ನೆ ಮೊನ್ನೆ ಸತ್ತಳು. ...ತ ಹೇಳಾಕೂ ಮನುಸು ಒದ್ದಾಡಿ ಹೋಯ್ತು. ಆಕಿ ... ಹೋದ ಬದುಕು, ಬಾರದಾನಿ ಇನ್ನೂ ಜೀವಂತ ...ಆದರ ಆಕಿ ಸತ್ತಳು ಅಂತ ಹೇಳೂದರೇ ಹ್ಯಾಂಗ..? ...ಹೆಸರಿನ ಹಪ್ಪಳ, ಸಂಡಗಿ, ಕುರಡಗಿ, ಮರಗುಳಗಿ ...ಊ ಶಹರ ಸೇರ್ತಾವ. ಆಕಿ ಹೆಸರಲೇನೇ ಮಾರಾಟ ...ಕ. ಅಂದಮ್ಯಾಲ ಆಕಿ ಸತ್ತಳು ಅನ್ನೂದರೆ ಹ್ಯಾಂಗ..? ... ಆಕಿ ಸತ್ತಿದ್ದು ಖರೆ.. ಸುಳ್ಳಂತೂ ಅಲ್ಲ. ಆಕಿ ... ಅಂತ ಹೇಳೂ ಮುಂದೇ ಊರಿಗೇ ವಜ್ಜ ಆಗಿ ...ರೋ ರಿಕಾಮಿಗಳು ಬ್ಯಾಸರ ಹುಟ್ಟಸೂವಂಗಿತ್ತು. ... ಬೀಡಿ.. ಒಂದು ಚಾ ಸಲಾಗಿ ದೇಶಾವರಿ ಮಾತಾಡಿ, ... ಎಂಟು ಸುಳ್ಳ ಹೇಳಿ, ತಾರಾತಿಗಡಿ ಮಾಡಿ ತಮ್ಮ ...ಚಟಾ ತೀರಿಸಿಕೊಂಡು ಮನಿಗಿ ಹೋಗೋ ಈ ..., ಆ ಮುದುಕಿ ಕಡಿಂದ ಸೈತಾ ಚಾ ಪಾನೀಗಿ ... ಸುಲೀತಿದ್ದರು. ಮುದುಕಿ ಈರವ್ವ ಮಾತ್ರ ಮ್ಯಾಣದ ...ಇದ್ದಂಗ ಇದ್ದಳು. ತಾ ಸುಟಗೊಂಡು ಬ್ಯಾರೆಯವರಿಗಿ ... ಕೊಡೊ ಜಲುಮ ಅದಾಗಿತ್ತು. ಇವರಿಗಿ ಚಾ, ...ಗಿ ರೊಕ್ಕಾ ಕೊಡಕೊಂತೇ "ತಮ್ಮದೇರೇ ಕುಂತು ... ಯಾವದೂ ಈಡ ಆಗೂವಂಗಿಲ್ಲ. ನಾ ಹುಚ್ಚೊಟ್ಟಿ ...ಗೀ ಹೋಗೀ ನಿಮ್ಮ ಮುಂದ ಹೇಳಾಕತ್ತೀನೋಡು.. ...ಕಾಲ ಹಿಂಗೇ ಕಟ್ಟಿಮ್ಯಾಲ ಕುಂತು ಇಲ್ಲದೊಂದು, ...ದೊಂದು ಮಾತಾಡಿ ರೊಟ್ಟಿ ಕತ್ತರಸೋ ನಿಮಗ ... ಮಾತು ಹ್ಯಾಂಗ ಪತ್ಯ ಆಗ್ತಾವ.. ಬಿಡ್ರಿ.. ಬಿಡ್ರಿ.. ...ಯೂ ವ್ಯಾಳೆದೊಳಗೇ ನೀವು ದುಡದವರಲ್ಲ. ಈಗೇನು ...ತೀರಿ ಮಣ್ಣ ನಿಮ್ಮದೇನೋ ಆಯ್ತು ನಿಮ್ಮ ಮಕ್ಕಳೂ ... ತಯಾರಾಗಾಕತ್ತಾರ ಅವುಕ್ಕರೇ ತುಸು ಚಲೋತನಗೆ ...ಗಿ ಹಚ್ಚರಿ" ಅನ್ನೊಂತ ತನ್ನ ಬೊಚ್ಚ ಬಾಯಿ ...ಸಕೊಂತ ನಡೀತಿದ್ದಳು. ಈ ಮುದುಕಿ ಸತ್ತಾಗ ಇಡೀ ...ಗೂರೇ ಅಳತಿತ್ತು. ಆಕಿ ಸಾಯೂ ಮಟ ದುಡದಕ್ಕಿ ... ಮಾತಾಡತಿತ್ತು. ಮೈಬಗ್ಗಿ ನೀಗಲಾರದ ವ್ಯಾಳೆದೊಳಗೂ ...ಲ್ಲೇ ಏನರೇ ಮಾಡೂವಕ್ಕಿ. ಆಕಿ ಅವತ್ತು ರಾತ್ರಿ ... ಹಗಲ ಹೊತ್ತಿನೊಳಗ ಹಾಸಿಗಿಯೊಳಗ ಮಲಗದಲ್ಲೇ ...ಮ್ಮಕ್ಕಳಿಗಿ ಮರಗುಳಗಿ ಹಿಟ್ಟ ಕಲಸೂದು ...ತಿದ್ದಳಂತ. ನಿನಗ ಆರಾಮಿಲ್ಲ ಸುಮ್ಮಿರು ಅಂದರೂ ...ಲಿಲ್ಲ. ಸಾಯೂಮಟ ದುಡದ ಜೀವ ಅದು. ಅಂಥಾ ... ಕತೆಯಾದ ಈರವ್ವಜ್ಜಿ ಬಗ್ಗೆ ಹೇಳಬೇಕಂದ್ರ....

...ಂದಗಿ ಎಂಬೋ ತಾಲೂಕಿನ ಯಡವಟ್ಟಿ ಅನ್ನೋ ...ದ ಕುಂಚೂರ ಶಿವಪ್ಪನ ಮನೆತನದೊಳಗ ಅಲ್ಲೀಮಟ ...ದಿರೋ ಹಿರೀ ಜೀವ ಅಂದ್ರ ಈ ಈರವ್ವಜ್ಜಿ ಆಗಿದ್ದಳು. ...ಶಿವಪ್ಪಜ್ಜಗ ಆರು ಜನ ಮಕ್ಕಳು. ನಾಕು ಗಂಡು ...ು ಹೆಣ್ಣು. ಆ ನಾಕೂ ಗಂಡು ಮಕ್ಕಳು ಲಗ್ನ ಆಗಿ ... ಅವರಿಗಿ ಮೂರೂ ನಾಕೂ ಮಕ್ಕಳಾಗಿ ...ಚೂರೊಳಗ ಶಿವಪ್ಪನ ಮನಿತನನೇ ದೊಡ್ಡದು ...ವಂಗ ಆಗಿತ್ತು. ಹಂಗ ನೋಡದರ ಈ ಈರವ್ವಜ್ಜಿ ...ಗ ತಂಗಿ ಆಗಬೇಕು. ಖಾಸಾ ತಂಗಿ ಅಲ್ಲ. ಚಿಕ್ಕಪ್ಪ ...ಪ್ಪನ ಮಕ್ಕಳು. ಆಕಿ ಖಾಸಾ ತಂಗಿ ಅಲ್ಲ ಖರೆ ... ಶಿವಪ್ಪ ಇರೂಮಟ ಥೇಟ್ ತನ್ನ ತಂಗೇರಂಗೇ ...ನ್ನೊ ನೋಡಕೊಂಡಿದ್ದ. ಈರವ್ವಗ ಲಗ್ನ ಆಗಿ ...ವರ್ಷದ ಮ್ಯಾಲ ಮಕ್ಕಳಾಗಲಿಲ್ಲ. ದೇವರು ದಿಂಡರು ... ಮನಾರ ಮಾಡದಳು. ಆಗಲಿಲ್ಲ. ಆಕಿ ಗಂಡ ...ಸ್ಟ್‌ಮನ್ ಆಗಿದ್ದ. ಆಗಿನ ಕಾಲದೊಳಗ ಬರೂದೇ ... ಪತ್ರ. ಅದೂ ಕಣ್ಣೂರ್ರೊಳಗ ಅವನ್ನ ಹಂಚೂದು ... ಹತ್ತು ನಿಮಿಷದ ಕೆಲಸ. ಹಿಂಗಾಗಿ ಆಕಿ ಸಂಸಾರ ... ಚಲೊ ಇತ್ತು. ಈರವಜ್ಜಿ ಗಂಡ ಇನ್ನೂ ನೌಕರಿಯೊಳಗ ...ಗೇ ಹಾವು ಕಡದು ಸತ್ತ. ಆಕಿ ಒಬ್ಬಂಟಿ ಆಗಿ ...ರೊಳಗ ಇರೂದು ಬ್ಯಾಡಂತ ಹೇಳಿ ಶಿವಪ್ಪನೇ ... ಕರಕೊಂಡು ಬಂದು ಮನಿ ಹಿಂದಿನ ಬಯಲ ...ದೊಳಗ ಒಂದೆರಡು ಕೋಲಿ ಇರೊ ಸಣ್ಣ ಮನಿ ...ಕೊಟ್ಟಿದ್ದ. ಆ ಮುದುಕಿ ಆವತ್ತಿನಿಂದ ಮಾತಿಗೊಮ್ಮೆ ... ಶಿವಣ್ಣನ ಗುಣ ಬಾಳ ಚಲೊ ತನ್ನ ಖಾಸಾ ...ದೇರಿಗಿಂತಲೂ ಹೆಚ್ಚಿಗಿ ಮಾಡ್ತಾನ" ಅನ್ನೂವಕ್ಕಿ. ...ನ ಮಕ್ಕಳು ಮಾತ್ರ ಈರವ್ವಳ ಕಂಡರ ಸಾಕು ಸಿಡಿಮಿಡಿ ...ತಿದ್ದರು. ನಾಕು ಮಕ್ಕಳ ಪೈಕಿ ಇಬ್ಬರು ಓದದವರು, ...ಬ್ಬರು ಒಕ್ಕಲುತನ ಮಾಡವರು. ಓದಿ ಅವರೇನು ...ರಿಯಂತೂ ಮಾಡಲಿಲ್ಲ. ಓದಿದ್ದೇ ಬರೀ ಆರನೆತ್ತೆಂಟ. ...ಗ ಆದೇ ಬಾಳ ಅನ್ನೂವಂಗಿತ್ತು. ಬರೀ ಹಿರಿ ಹಿರಿ ... ಅಲ್ಲಿಟು ಕುಂತೆ, ಇಲ್ಲಿಟು ಕುಂತೆ ಅಂತ ಕತಿ ... ತಿರಗವರು. ಅಪರಪ್ಪ ಸತ್ತ ಮ್ಯಾಲಂತೂ ನಾಲ್ಕೂ ... ಬರೀ ಅಪ್ಪನ ಹೆಸರ ಹೇಳಕೊಂಡು ಸುಖಾ ...ದ್ದರೇ ಹೊರತು ದುಡದವರಲ್ಲ. ನಾಕೂ ಮಂದಿ ...ಪ್ಪದೇರು ಚಲೋ ಜಮೀನಿದ್ದರೂ ಹಾಲದಂಗ ... ಮನಿ ಮುಂದಿರೋ ಮಲ್ಲಣ್ಣಾ ದೇವರ ಗುಡಿ ... ಕುಂತು ಕತಿ ಹೇಳವರು. ಮತ್ತ ಅವಾಗಾವಾಗ ...ಗಿ ಮುದುಕೀ ಕಡಿ ರೊಕ್ಕಾ ಕೇಳವರು. ಆಕಿ ...ಂತ ಕೊಟ್ಟರ ಇವರು ನಕೊಂತ ತಗೋತಿದ್ದರು. ... ಮಕ್ಕಳು ಅವರಿಗಿಂತಲೂ ಸುಮಾರ ಅನ್ನೂವಂಗ ... ಅಪರಪ್ಪದೇರು ಇವರಾದರೂ ಓದಲ

ಅಂತ ಮಾಡಿದ್ದ ಕಟಬಿಟಿ ಹೊಳ್ಯಾಗ ಹುಣಸಿಹಣ್ಣು ತೊಳದಂಗ ಆಗಿತ್ತು. ಒಬ್ಬರೂ ಒಂದೇ ಗಜ್ಜಿಗಿ ಬಿ.ಎ. ಮುಗಸದವರಲ್ಲ. ಕಮ್ಮೀತಕಮ್ಮಿ ಎರಡು ಮೂರು ಛಾನ್ಸ್ ತಗೊಂಡವರೇ.. ಅಪ್ಪದೇರು ದೋತರ ಉಟಗೊಂಡು ಕತಿ ಹೇಳದರ, ಈ ಮಕ್ಕಳು ಲುಂಗಿ ಸುತಗೊಂಡು ಕತಿ ಹೇಳಕೊಂತ ತಿರಗಾಡವರು. ಆದರೊಳಗೂ ಚನ್ನಪ್ಪನ ಕಿರಿ ಮಗ ಗುರಶಾಂತ ಮತ್ತು ಮಾದೇವಪ್ಪನ ಎರಡನೇ ಮಗ ಚಂದ್ರಪ್ಪ ಇಡೀ ಊರಿಗೇ ವಜ್ಜ ಆಗಿದ್ದರು. ಆ ಮಟ್ಟಗಿ ಉಡಾಳರು. ನಾಕೂ ಮಂದಿಯೊಳಗ ಗುರಶಾಂತನ ಅಪ್ಪ ಚನ್ನಪ್ಪ ವಿಪರೀತ ಕುಡಿಯವನು. ಅಂವಾ ಏನರೇ ಮಾಡಿ, ಹ್ಯಾಂಗರೇ ಮಾಡಿ ಕುಡಿಲಿಕ್ಕೇ ಬೇಕು ಇಲ್ಲಾಂದ್ರ ಅಂವಗ ದಿನಾ ಕಳಿಯೂದೇ ವಜ್ಜ ಆಗತಿತ್ತು. ನಾಕೂ ಮಂದಿಯೊಳಗ ಹೆಚ್ಚು ಆಸ್ತಿ ಹಾಳ ಮಾಡದವನೇ ಈ ಚನ್ನಪ್ಪ. ಹೆಂಡತಿ ಶಂಕ್ರವ್ವ ಏನರೇ ಹೇಳಾಕ ಬಂದರ ದನಕ್ಕ ಬಡದಂಗ ಬಡಿಯವನು. "ನಮ್ಮಪ್ಪನ ಆಸ್ತಿ ನಾ ಏನರೇ ಮಾಡ್ತೀನಿ" ಅನ್ನವನು. ಅಂಥಾ ವ್ಯಾಳೆದೊಳಗ ಅಲ್ಲಿ ಈರವಜ್ಜಿ ಇದ್ದರ ಅವನ್ನ ಒಂದು ಕೈ ತಗೊಳುವಕ್ಕಿ. ದಿನ್ನಾ ಸತ್ರ ಅಳವರಾರು..? ಅನ್ನೂವಂಗ ಆಕಿಗೂ ಹೇಳಿಹೇಳಿ ಸಾಕಾಗಿತ್ತು. ಶಿವಪ್ಪಣ್ಣಗ ಎಂಥಾ ಮಕ್ಕಳು ಹುಟ್ಟದ್ವು ಅಂತ ಮರಮರ ಮರಗತಿದ್ದಳು. ಆಕಿ ಏನಾರೆ ಹೇಳಾಕ ಬಂದರ ಚನ್ನಪ್ಪನ ಮಕ್ಕಳು "ಏ ಮುದುಕಿ ನೀ ಸುಮ್ಮಿರು, ನಿನಗೇನೂ ಗೊತ್ತಾಗಂಗಿಲ್ಲ. ಹೋಗು ಹಪ್ಪಳ ಸಂಡಗಿ ಮಾಡಕೊಂಡು ಕುಂತಿರು" ಅಂತಿದ್ದರು. ಮುದುಕಿ ಸಿಟ್ಟೀಲೇ "ಬಂದರು ಹೇಳಾಕ ಹಾಟಪ್ಪಗಳು. ಚೆಂದಗೆ ಓದಲಿಲ್ಲ ಬರೀಲಿಲ್ಲ.. ಅದು ಹ್ಯಾಂಗ ಸಾಲಿ ಕಲತರೋ ಏನೋ ಲುಂಗಿ ಸುತಗೊಳೂದು ಸೈರಪಟ್ಟ ನಾಯಿಯಂಗ ತಿರಗೂದು" ಅಂತಿದ್ದಳು.

ಈರವಜ್ಜಿ ಒಂದೇ ಒಂದು ದಿನ ಕುಂತು ಕೆಟ್ಟಕಿ ಅಲ್ಲ. ಏನರೇ ಮಾಡಕೊಂತ ಇರವಳೇ.. ವಯಸ್ಸು ನಾಕಿಪ್ಪತ್ತು ದಾಟಿ ಬೆನ್ನ ಬಾಗಿದ ಮ್ಯಾಲೂ ಹಂಗೇ ಏನರೇ ಮಾಡೂವಕ್ಕಿ. ತಿಂಗಳಿಗಿ ಐದುನೂರು ರೂಪಾಯಿ ಗಂಡನ ಪೆನ್ಷನ್ ಬರತಿತ್ತು ಅದೇ ದುಡ್ಡಿನೊಳಗ ಹಪ್ಪಳ, ಸಂಡಗಿ ಮಾಡೊ ದಿನಸಿ ತರಿಸಿ ತಯಾರಿ ಮಾಡತಿದ್ದಳು. ಮುದಕಿಗಿ ಯಾರೂ ಮಕ್ಕಳು ಮರಿ ಇರಲಿಲ್ಲ. ಅಲ್ಲೇ ಯಡವಟ್ಟಿ ಬಾಜೂ ಹಳ್ಳಿ ಆಸಂಗಿಯೊಳಗ ಆಕಿ ತಂಗಿ ಸೋನಾಬಾಯಿ ಇರತಿದ್ದಳು. ಆಕಿಗಿ ಇಬ್ಬರು ಮಕ್ಕಳು. ಒಂದು ಗಂಡು ಒಂದು ಹೆಣ್ಣು. ಆ ಹೆಣ್ಣ ಹುಡಗಿ ಹೆಸರು ಗಂಗಾಬಾಯಿ. ಆಕಿಗಿ ದೊಡ್ಡವ್ವನ ಊರ ಯಡವಟ್ಟಿಗೇ ಕೊಟ್ಟಿದ್ದರು. ಈ ಗಂಗಾಬಾಯಿ ಹೊಟ್ಟೀಲೇ ಮೂರು ಮಕ್ಕಳು. ಮೂರೂ ಅಂದ್ರ ಮೂರೂ ಹೆಣ್ಣೇ ಹುಟ್ಟಿದ್ದವು. ಅದನ್ನೇ ತಲಿಗಿ ಹಚಗೊಂಡು ಆಕಿ ಗಂಡ ಬಾಬಣ್ಣ ಕುಡಿಯಾಕ ಸುರು ಮಾಡದ. ಇದ್ದ ಆಸ್ತಿ ಎಲ್ಲಾ ಗೊತ್ತಿಗಿ ಹಚ್ಚಿದ. ಉಳದಿದ್ದು ಆರು ಎಕರೆ ಹೊಲ, ಗುಡಿ ಹಿಂದಿನ ಎರಡಂಕಣ ಮನಿ. ಬಾಬಣ್ಣನ ಹೆಂಡತಿ ಗಂಗಾಬಾಯಿ ದಿನ್ನಾ ಕಣ್ಣೀರೊಳಗ ಕೈ ತೊಳದೇ ದಿನಚರಿ ಸುರು ಮಾಡೂವಂಗ ಇರತಿತ್ತು. ಮನಿಯೊಳಗ ಒಂದಿತ್ತು ಒಂದಿಲ್ಲ. ಬೆಳದ ಮಕ್ಕಳು ಅವರಿಗಿ ಲಗ್ನಾ ಮಾಡೊ ಖಬರಿಲ್ಲ. ಗಂಗಾಬಾಯಿ ಅವ್ವ ತೀರಕೊಂಡ ಮ್ಯಾಲ ಆಕಿ ಆಸಂಗಿಗಿ ಹೋಗೂದೇ ಬಿಟ್ಟಿದ್ದಳು. ಆಕಿ ದೊಡ್ಡವ್ವ ಈರವ್ವ "ತಂಗೀ ನಿನ್ನ ನಸೀಬೇ ಬಾಳ ಖೋಡಿ ಐತಿ. ಅಕಾಡಿ ತಾಯಿ ಮನ್ಯಾಗೂ ಸುಖಾ ಕಾಣಲಿಲ್ಲ, ಇತ್ತಾಗ ಗಂಡನ ಮನ್ಯಾಗೂ ಸುಖಾ ಇಲ್ಲ" ಅಂತ ಕಣ್ಣೀರ ತಗೀತಿದ್ದಳು. ಈರವ್ವಗ ಗಂಗಾಬಾಯಿ ಮತ್ತ ಆಕಿ ಮಕ್ಕಳಂದ್ರ ಬಾಳಜೀವ. ಆ ಮೂರೂ ಹುಡಗೇರಿಗಿ ಮಾತ್ರ ಅಜ್ಜಿನ್ನ ಕಂಡ್ರ ಆಗತಿರಲಿಲ್ಲ. ತಲಿ ಹಿಂಗೆ ಬಾಚಗೋರಿ, ಹೆರಳ ಹಂಗ ಹಾಕೋರಿ, ರೊಟ್ಟಿ ವಣಗಿ ಮಾಡಬೇಕು ದೊಡ್ಡವರಾಗಿರಿ ಅಂತೆಲ್ಲಾ ಉಪದೇಶ ಮಾಡೂದು ಆ ಕಲತ ಮೊಮಕ್ಕಳಿಗಿ ಆಗತಿರಲಿಲ್ಲ. ಕೈಯಾಗ ನಾಕು ಕಾಸು ಕೂಡದು ಅಂದ್ರ

ಸೀದಾ ಅದನ್ನ ತಂದು ಗಂಗಾಬಾಯಿ ಕೈಯಾಗ ಕೊಟ್ಟು "ನಿನ್ನ ಗಂಡನ ಕಣ್ಣಿಗಿ ಕಾಣೂವಂಗ ಇಡಬ್ಯಾಡ ಅಂವಗ ಯಾವದೂ ಸಾಲೂದಿಲ್ಲ" ಅಂತಿದ್ದಳು.

ಈರವ್ವಜ್ಜಿ ಮನಿ ಮುಂದ ಎರಡು ಹೊರಸ ಯಾವಾಗ್ಲೂ ಇರತಿದ್ದವು. ಅವುಕರ ಮ್ಯಾಲ ಹಪ್ಪಳ, ಸಂಡಗಿ ಆರಾಕಿರತಿದ್ದಳು. ಆಕಿ ತನ್ನ ಸಂಬಂಧಿಗಳು ಅಂತ ಹೇಳಿ ಎಲ್ಲರ ಮನಿಗೂ ಹಪ್ಪಳ, ಸಂಡಗಿ ಕೊಟ್ಟ ಮ್ಯಾಲೂ ಅವರು ಈ ಮುದುಕಿ ಬಾಳ ಜಾಬಾದಿ ಆದಾಳ ಬರೀ ಗಂಟ ಮಾಡಾಕತ್ತಾಳ ಅಂತಿದ್ದರು. ಚನ್ನಪ್ಪ ಬಾಳ ಸಾರಿ ಕಿರಿಕಿರಿ ಮಾಡಿ ಆಕಿ ಕಡಿಂದ ಕುಡಿಯಾಕ ದುಡ್ಡ ಕೀಳಿದ್ದೂ ಇತ್ತು. ಅವರಿಗಿ ಎಷ್ಟು ಕೊಟ್ಟರೂ ಹಿಂಗೂದಿಲ್ಲ ಅಂತ ಈರವ್ವಜ್ಜಿಗಿ ಗೊತ್ತಿತ್ತು. ಶಿವಪ್ಪಜ್ಜನ ನೆನಪಾಗಿ ಸಂಕಟ ಪಡತಿದ್ದಳು. "ನಿಮ್ಮಪ್ಪನ ಗುಣ ನಿಮ್ಮ ಹತ್ಯಾಕ ಒಂದೂ ಇಲ್ಲ. ಎಂಥವನ ಹೊಟ್ಯಾಗ ಎಂಥವರು ಹುಟ್ಟದಿರೆಪಾ" ಅಂತ ಬೈತಿದ್ದಳು. ಆಕಿ ಬೈಯೂದು ಯಾರೂ ಹಚಕೋತಿರಲಿಲ್ಲ. ಎಟ್ಟೇ ಆಗಲಿ ಅಪ್ಪನ ಸಂಬಂಧಿ, ವಯಸ್ಸಾದ ಹೆಣಮಗಳು ಅಂತ ಸುಮ್ಮ ಇರತಿದ್ದರು. ಈರವ್ವಜ್ಜಿ ಮಾತಿಗೊಮ್ಮೆ ಸುಮ್ಮ ಕುಂತರ ಯಾರು ಕುಡ್ತಾರ ದುಡಿಯೂ ವಯಸ್ಸಿನೊಳಗ ದುಡೀಬೇಕು ಅಂತಿದ್ದಳು. ಯಾರರೇ "ಮತ್ತ ನಿಂದು ದುಡಿಯ್ಯೂ ವಯಸ್ಸ ಮುಗದೈತಿ ಆದರೂ ನೀ ದುಡೀತೆಲ್ಲ.." ಅಂದರ ಮುದುಕಿ "ನನಗ ಹಿಂದಮುಂದ ಯಾರದಾರ? ಹಂಗಾಗಿ ನಾ ಸಾಯೂಮಟ ದುಡಿಯೂದು ತಪ್ಪಿದ್ದಲ್ಲ" ಅನ್ನೂವಕ್ಕಿ. ಮಗಳು ಗಂಗಾಬಾಯಿ "ನೀ ತಿನ್ನಾಕರೇ ಎಟ್ಟು ತಿಂತೀದಿ ಅದೇ ಒಂದು ರೊಟ್ಟಿ ನಮ್ಮ ಜೋಡಿ ಬಂದಿರು" ಅಂದಾಗ ಅಜ್ಜಿ ತುಸು ಯೋಚನೆ ಮಾಡಿ "ಗಂಗೂ ನನಗ ಹ್ಯಾಂಗಂದ್ರ ಉಪವಾಸ ಇದ್ದರೂ ನಡೀತೈತಿ, ಕಿರಕಿರಿ ಇರಬಾರದು. ನಿನ್ನ ಗಂಡ ಕುಡದು ಒದರಾಡೂದು ನೋಡೇ ನಾ ಗಾಬರಿ ಆಗೀನಿ. ಅಂತದರೊಳಗ ಅಲ್ಲೇ ಬಂದು ಇದ್ದರ ಮುಗೀತು.. ನಾ ನಿಮ್ಮೆಲ್ಲರಿಗಿಂತ ಬಾಳ ಆರಾಮ ಇದೀನಿ. ನಿಮ್ಮದೇ ಗೋಳು ಕೇಳಲಾರದಂಗ ಐತಿ" ಅಂದಿದ್ದಳು.

ಕತೆ

ಈಗೀಗ ಮುದುಕಿ ಮಾಡೊ ಹಪ್ಪಳ, ಸಂಡಗಿ, ಉಗರತ್ತ ಮರಗುಳಗಿ ಎಲ್ಲಾ ಸಿಂದಗಿ ಮಾರ್ಕೆಟ್ ಮುಟ್ಟಾಕತ್ತದ್ವು. ಹದಿನೈದು ದಿನಕ್ಕೊಮ್ಮೆ ಒಂದು ಏಸರ್ ಗಾಡಿ ಬಂದು ಎಲ್ಲಾ ತಗೊಂಡು ಹೋಗತಿತ್ತು. ಈರವ್ವಜ್ಜಿ ಒಂದು ರೂಪಾಯಿ ಅನ್ಯಾದಿಂದ ಯಾರದೂ ತಿನ್ನಬಾರದು ಅನ್ನೂವಕ್ಕಿ. ಗಂಗಾಬಾಯಿ ಹಿರಿ ಮಗಳ ಲಗ್ನಕ್ಕ ಈರವ್ವಜ್ಜಿ ಆಸರಾಗಿದ್ದು ಇಡೀ ಊರಿಗೂರೇ ಗೊತ್ತಿತ್ತು. ಹಿಂಗಾಗಿ ಎಲ್ಲಾರೂ ಈರವ್ವಜ್ಜಿನ್ನ ಕರದು ಮಾತಾಡವರೇ. "ಆದೊಂದು ಕೆಲಸಾ ಬಾಳ ಚಲೊ ಮಾಡದಿ ನೋಡವಾ" ಅಂತಿದ್ದರು. ಆಕಿ ಎಂದೂ ಒಂದು ಕಡಿ ಕುಂತು ಹರಟಿ ಹೊಡೆಯುವಕ್ಕಿ ಅಲ್ಲ. ಮಾತಾಡಸದರ ಎರಡು ಮಾತು. ಮೂರನೇ ಮಾತು "ಒಲಿ ಮ್ಯಾಲ ಹಿಟ್ಟ ಕುದಿಯಾಕ ಇಟ್ಟೇನಿ" ಅಂತ ನಡದು ಬಿಡುವಕ್ಕಿ. ಜಗಳಗಂಟರ ಬಾಯಿಗಂತೂ ಎಂದೂ ಹತ್ತದಕಿ ಅಲ್ಲ. ಎಲ್ಲೆರೆ ಒಣ್ಯಾಗ ಜಗಳ ನಡದರ ಬಾಗಿಲ ಹಾಕೊಂಡು ಒಳಗ ಕುಂತು ಕೆಲಸಾ ಮಾಡವಳೇ ಹೊರತು ಅಲ್ಲಿ ಹೋಗಿ ದೇಶಾವರಿ ಮಾತಾಡಕೊಂತ ನಿಲ್ಲೂ ಪೈಕಿಯಲ್ಲ.

ಗಂಗಾಬಾಯಿ ಇಬ್ಬರೂ ಮಕ್ಕಳು ಅನಿತಾ ಮತ್ತ ಸುನಿತಾ ಅಕ್ಕನ ಲಗ್ನಕ್ಕ ಅಜ್ಜಿ ಸಹಾಯ ಮಾಡಿದ್ದು ನೋಡಿ ಬದಲ್ ಆಗಿದ್ದರು. ಈಗ ದಿನ್ನಾ ಅಜ್ಜಿ ಮನಿಗಿ ಹೋಗಿ ಆಕಿ ಜೋಡಿ ಕೂಡಕೊಂಡು ಆಕಿ ಏನು ಹೇಳ್ತಾಳ ಅದನ್ನ ಕೇಳ್ಕೊಂಡು ಹಪ್ಪಳ, ಸಂಡಗಿ, ಮರಗುಳಗಿ ಮಾಡೂದನ್ನ ಕಲಿತರು. ಅದು ಈರವ್ವಜ್ಜಿಗಿ ಅಟ್ಟೇ ಅಲ್ಲ ಗಂಗಾಬಾಯಿ ಕುಟುಂಬಕ್ಕೂ ಬಾಳ ಆಸರ ಆಯ್ತು. ಮೊದಲ ಹದಿನೈದು ದಿನಕ್ಕೊಮ್ಮೆ ಬರೋ ಏಸರ್ ಗಾಡಿ ಈಗ ವಾರಕ್ಕೊಮ್ಮೆ ಬರಾಕ ಸುರು ಆಯ್ತು. ಅಜ್ಜಿ ಮತ್ತ ಮೊಮ್ಮಕ್ಕಳು ದೆವ್ವ ದುಡದಂಗ ದುಡೀತಿದ್ದರು. ಆ ಮೊಮ್ಮಕ್ಕಳಿಗಿ ತಮ್ಮ

ಅಜ್ಜಿ ಎಂಥಕ್ಕಿ ಅಂತ ಈಗ ಗೊತ್ತಾಗಾಕ ಸುರು ಆಯ್ತು. ಆಕಿ ದುಡದು ಬಂದಿದ್ದೆಲ್ಲಾ ಎರಡು ಡಬ್ಬಿಯೊಳಗ ಇಡತಿದ್ದಳು. ಒಂದು ಖರ್ಚಿನ ಡಬ್ಬಿ ಇನ್ನೊಂದು ಲಾಭದ ಡಬ್ಬಿ. ಲಾಭದ ಡಬ್ಬಿಯೊಳಗಿನ ದುಡ್ಡ ತಗದು ಈ ಮೊಮ್ಮಕ್ಕಳಿಗಿ ಕೊಡುವಕ್ಕಿ. ಮನಿಗಿ ಒಯ್ದು ನಿಮ್ಮವ್ವನ ಕೈಯಾಗ ಕೊಡ್ರಿ ಅನ್ನೂವಕ್ಕಿ. ಅಜ್ಜಿ ಹಪ್ಪಳ, ಸಂಡಗಿ ಮಾಡ್ಡೂದರೊಳಗ ಬಾಳ ನುರತಿದ್ದಳು. ಹಿಂಗಾಗಿ ಮಾರ್ಕೆಟ್‌ನೊಳಗ ಯಡವಟ್ಟಿ ಈರವ್ವಜ್ಜಿ ಹಪ್ಪಳ ಬಾಳ ಫೇಮಸ್ಸಾಗಿತ್ತು. ಮುಂದ ಬಿಜಾಪೂರದಿಂದಲೂ ಡಿಮ್ಯಾಂಡ್ ಬಂತು. ಆಮ್ಯಾಗ ಆ ಏಸರ್ ಗಾಡಿ ವಾರದೊಳಗ ಮೂರು ಸಾರಿ ಬರಾಕ ಸುರು ಆಯ್ತು. ಈರವ್ವಜ್ಜಿ ಮತ್ತ ಮೊಮ್ಮಕ್ಕಳು ಹಗಲುರಾತ್ರಿ ಕೂಡೇ ದುಡದರೂ ನೀಗದಂಗ ಆಯ್ತು. ಬಡ ಬಡ ಮನಿಯೊಳಗಿನ ಕೆಲಸಾ ಮುಗಸಿ ಗಂಗಾಬಾಯಿನೂ ಅಲ್ಲೇ ಹೋಗಾಕತ್ತಳು. ನಾಕೂ ಮಂದಿ ಕೂಡಿ ಮಾಡದರೂ ಪುರಾಟಾಗದಂಗ ಆಯ್ತು. ಈರವ್ವಜ್ಜಿ ಈಗ ರಾತ್ರಿ ಮಟ ಕೆಲಸಾ ಮಾಡಬೇಕಾಯ್ತು. ಅದಕ್ಕಿಂತ ಹೆಚ್ಚಿಗಿ ತನ್ನ ಕೈಯಿಂದ ನೀಗೂದಿಲ್ಲ ಅಂತ ಹೇಳಿದ್ದಳು. ಒಟ್ಟ ವಾರದಾಗ ಮೂರು ಸಾರಿ ಗಾಡಿ ಬಂದು ಈರವ್ವಜ್ಜಿ ಮಾಲ್ ತಗೊಂಡು ಹೋಗತಿತ್ತು. ಹೆಂಡತಿ ಗಂಗಾಬಾಯಿ ಇಲ್ಲಿ ಬರಾಕ ಸುರು ಮಾಡಿಂದ ಆಕಿ ಗಂಡ ಬಾಬಣ್ಣ ಆವಾಗೊಮ್ಮೆ ಇವಾಗೊಮ್ಮೆ ಬಂದು ಹೋಗಾಕ ಸುರು ಮಾಡದ. ಈರವ್ವಜ್ಜಿ "ಸುಳ್ಳೇ ಯಾಕ ಕುಡಕೊಂಡು ತಿರಗತಿ. ಇಲ್ಲೇ ಕೆಲಸಾ ಮಾಡು. ನಿನ್ನ ಖರ್ಚಿಗಿ ರೊಕ್ಕಾನೂ ಸಿಗತೈತಿ" ಅಂದಾಗ ಅವನು ಹೇ..ಹೇ.. ಅಂತ ಹೆಡಕ ಹಾರಿಸಿದ್ದ. ಅಂವಾ ಕುಡಿಯೂ ಚಟಕ್ಕ ಅಂಟಿಕೊಂಡಿದ್ದ. ಬಾಬಣ್ಣನ ಹೊಲದ ಮ್ಯಾಲ ಒಂದು ಲಮಾಣಿಗೇರ ತಾಂಡಾ ಇತ್ತು. ಅಲ್ಲಿ ಗಂಪೂ ಅನ್ನಂವ ಖಾಯಂ ಕಳ್ಳಬಟ್ಟಿ ಸರಾಯಿ ತಗೀತಿದ್ದ. ಅವನ ಜೋಡಿ ಈ ಬಾಬಣ್ಣನ ಖಾಸ್ ದೋಸ್ತಿ. ಅವನ ಹೊಲದೊಳಗ ಕಳ್ಳಬಟ್ಟಿ ಗಡಗಿ ಹೂಳಾಕ ಜಾಗಾ ಕೊಡತಿದ್ದ. ಒಂದೆರಡು ಸಾರಿ ಪೊಲೀಸರು ಅದನ್ನ ಪತ್ತೆ ಮಾಡಿ ಗಂಪೂನ ಜೋಡಿ ಇಂವಗೂ ಎಳಕೊಂಡು ಹೋಗಿ ನಾಕೇಟು ಕೊಟ್ಟದ್ದಿತ್ತು. ಆದರೂ ಪಾಠ ಕಲೀಲಿಲ್ಲ. ಸುತ್ತಮುತ್ತ ಇರೋ ಎಲ್ಲಾ ಹೊಲಾ ಮುಗದ್ವು ಈಗ ಗಂಪೂ ಮತ್ತ ಬಾಬಣ್ಣಗ ಆ ಗಡಿಗಿ ಎಲ್ಲಿ ಹೂಳಬೇಕು ಅನ್ನೂದೇ ದೊಡ್ಡ ಚಿಂತಿ ಆಗಿತ್ತು. ಗಂಪೂಗ ರೊಕ್ಕಾಂತೂ ಇಂವಾ ಕೊಡತಿರಲಿಲ್ಲ. ಅದರ ಬದಲೀ ಅಂವಗ ಆ ಗಡಗಿ ಹೂಳಾಕ ಜಾಗಾ ತೋರಸತಿದ್ದ. ಪೊಲೀಸರಿಗಂತೂ ಇವರು ಎಲ್ಲೆಲ್ಲಿ ಗಡಗಿ ಹೂತಾರಂತ ಸುದ್ದಿ ಮುಟ್ಟತಿತ್ತು. ಹಿಂಗಾಗಿ ಗಂಪೂಗ ಈಗೀಗ ಬಟ್ಟಿ ಇಳಸೂದು ಬಾಳ ಬಿರಿ ಬಂದಿತ್ತು. ಅವತ್ತೊಂದು ದಿನ ಇಬ್ಬರೂ ಬಾಳಹೊತ್ತು ಕುಂತು ಎಲ್ಲಿ ಹೂಳುದು ಅಂತ ತೀರ್ಮಾನ ಮಾಡಿದ್ದರು.

ಬಾಬಣ್ಣಾ ಮನಿ ಮುಂದಿನ ಕಟ್ಟಿ ಮ್ಯಾಲ ಕುಂತು ಚಾ ಕುಡೀತಿದ್ದ. ಭಂವ್.. ಅಂತ ಪೊಲೀಸರ ಜೀಪು ಮುಂಜಮುಂಜಾನೇ ಸೀದಾ ಬಾಬಣ್ಣನ ಮನಿ ಮುಂದ ಬಂದು ನಿಂತತು. ಜೀಪಿನೊಳಗ ಗಂಪೂ ಇದ್ದ. ಅವನೂ ಹಗೂರಕ ಕೆಳಗ ಇಳದ. ಪೊಲೀಸರ ಜೀಪ್ ನೋಡಿದ್ದೇ ಬಾಬಣ್ಣನ ಚಡ್ಡಿ ಹರದಂಗ ಆಯ್ತು. ಉಗುಳು ನುಂಗ್ತಾ "ಸಾಯೇಬರೆ, ಏನಾಯ್ತು.." ಅಂದ. "ಹೇಳ್ತೀವಿ ಮೊದಲ ಗಡಗಿ ಎಲ್ಲಿ ಹೂತಿಟ್ಟಿದಿ ತೋರಸು. ಇಲ್ಲಾಂದ್ರ ಗೊತ್ತೈತಲ್ಲ" ಅಂದಾಗ ಹಗೂರಕ ಹೊಳ್ಳಿ ಗಂಪೂ ಕಡಿನೋಡದ. ಅಂವಾ ತೋರಸು ತೋರಸು ಅನ್ನೂವಂಗ ಇಸಾರೆ ಮಾಡತಿದ್ದ. ಹೆಂಡತಿಮಕ್ಕಳು ಒಳಗಿನ ಕೊಲಿಯೊಳಗ ನಿಂತು ಇವರ ಮಾತ ಕೇಳತಿದ್ದರು. "ಸಾಯೇಬರ ಹಿತ್ತಲದೊಳಗ ಪಪ್ಪಾಯಿ ಗಿಡ ಅದಾವ ಅವುಗಳ ಕೆಳಗ ಹೂತಿವಿ" ಅಂದದ್ದೇ ಗಂಗಾಬಾಯಿಗಿ ಬಾಳ ಸಿಟ್ಟುಬಂತು. ಹೊರಗ ಬಂದವಳೇ "ನಾನು ಮಕ್ಕಳು ದನ ದುಡದಂಗ ದುಡದು ನಿನ್ನ ಒಡ್ಡಲ ತುಂಬ್ತೀವಿ. ನೀ ನೋಡದರ ಬರೀ ಇಂಥಾ ಹಾಳ ತಿಪಲ ಮಾಡ್ತಾ ತಿರಗು" ಅಂತ ಬೈತಿದ್ದಳು. ಅಂವಾ ಮೂರೂ ಬಿಟ್ಟವರಂಗ ನಿಂತಗೊಂಡಿದ್ದ. ಪೊಲೀಸ್ ಅಧಿಕಾರಿ ಸಿಟ್ಟಿಂದ "ನಿಂತಿದ್ದು ನೋಡು ಬೋಳಿಮಗನ್ನ ತಗೊಂಡು ಬಂದು, ಮಾಡೊದು ಮಾಡಿ.. ದುಡೀಬೇಕಲೇ ನಿಮಗೇನು ಧಾಡಿ ಮತ್ತೊಮ್ಮೆ ಹಿಂಗ ಮಾಡದರ ಒದ್ದು ಒಳಗ ಹಾಕ್ತೀನಿ" ಅಂದವರೇ ಹುಡ್ಯಾಕ ಹೇಳಿದರು. ದೊಡ್ಡದೊಂದು ಮಣ್ಣಿನ ಹರುವಿನೇ ಹೂತಿದ್ದರು. ಆದನ್ನ ಹೊರಗ ತಗದು "ಅಲ್ಲಮ್ಮಾ ನಿಮಗ ಇವರು ಹೂಳೋದು ಗೊತ್ತ ಆಗಲಿಲ್ಲನೂ..?" "ಇಲ್ಲರೀ ಸಾಯೇಬರೇ ನಾನು, ಮಕ್ಕಳು ಮುಂಜಾನೇ ನಮ್ಮ ದೊಡ್ಡವ್ವನ ಮನಿಗಿ ಕೆಲಸಕ್ಕ ಹೋಗ್ತೀವಿ.. ಅದ್ಯಾಗ ಸಂಜೀಮಟ ಇವಂದೇ ಕಾರುಬಾರು. ಇನ್ನೂ ಎರಡು ಹೆಣ್ಣುಮಕ್ಕಳು ಕೊಡವರದಾರ ಅನ್ನೂ ಖಬರೂ ಅಂವಗಿಲ್ಲ"

⇨15

ಮಾನವಕುಲದ ಹೆಮ್ಮೆ ಮುಹಮ್ಮದ್ ಪೈಗಂಬರ



ಮುಹಮ್ಮದರು ಮಹಿಳೆಯರ ಮತ್ತು ಅನಾಥಮಕ್ಕಳ ಪಕ್ಷಪಾತಿಯಾಗಿದ್ದರು. ಮುಹಮ್ಮದರು ತಬ್ಬಲಿಯಾಗಿ ಬೆಳೆದಿದ್ದರು. ಅನಾಥಮಕ್ಕಳ ನೋವಿನ ಅರಿವು ಅವರಿಗಿತ್ತು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ಅವರು, ತಾಯಿಯ ಪದತಲದಲ್ಲಿ ಸ್ವರ್ಗವಿದೆ ಎಂದು ಹೇಳುತ್ತಿದ್ದರು. ಮಾತೃಪ್ರೇಮದ ಭಾವದೊಂದಿಗೆ ಅವರು ಈ ಜಗತ್ತನ್ನು ನೋಡಿದರು. ಅವರ ಹೃದಯ ಅಂತಃಕರಣದಿಂದ ತುಂಬಿತ್ತು. ಅವರು ಯಾರಿಗೂ ನೋವುಂಟು ಮಾಡುತ್ತಿರಲಿಲ್ಲ. ಒಂದುಸಲ ಮಧ್ಯಾಹ್ನ ಅವರು ಮಲಗಿದ ವೇಳೆ ಅವರ ಹಾಸಿಗೆಯ ಮೂಲೆಯೊಂದರಲ್ಲಿ ಬೇನೆಬಿದ್ದ ಬೆಕ್ಕೊಂದು ಬಂದು ಮಲಗಿತ್ತು. ಅವರು ಎಚ್ಚರಾದಾಗ ಪ್ರೀತಿಯಿಂದ ಆ ಬೆಕ್ಕನ್ನು ನೋಡಿದರು. ಅದಕ್ಕೆ ತೊಂದರೆಯಾಗದಂತೆ ಹಾಸಿದ ಬಟ್ಟೆಯನ್ನು ಕತ್ತರಿಸಿ ತೆಗೆದುಕೊಂಡು ಹೋದರು. ಉಳಿದ ಬಟ್ಟೆಯ ತುಂಡಿನ ಮೇಲೆ ಆ ಬೆಕ್ಕು ಹಾಗೇ ನಿದ್ರಿಸುತ್ತಿತ್ತು.

"ಬರುವ ವರ್ಷ ನಿಮ್ಮನ್ನು ಕಾಣುವೆನೊ ಇಲ್ಲವೊ ಗೊತ್ತಿಲ್ಲ, ಅದಕ್ಕಾಗಿ ಓ ಜನರೇ ನನ್ನ ಮಾತುಗಳ ಕಡೆ ಗಮನವಿಡಿ, ಅಧರ್ಮವಾದ ಪದ್ಧತಿಗಳೆಲ್ಲ ನನ್ನ ಪದತಲದಲ್ಲಿ ನಿರ್ನಾಮಗೊಂಡಿವೆ. ಅರಬರು ಅರಬರಲ್ಲದವರಿಗಿಂತ ಹೆಚ್ಚಿನವರಲ್ಲ, ಅರಬರಲ್ಲದವರು ಅರಬರಿಗಿಂತ ಹೆಚ್ಚಿನವರಲ್ಲ. ನೀವೆಲ್ಲ ಆದಂನ ಮಕ್ಕಳು. ಆದಂನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. ಸತ್ಯವಾಗಿಯೂ ಎಲ್ಲಾ ಮುಸ್ಲಿಮರು ಸಹೋದರರು. ನಿಮ್ಮ ಗುಲಾಮರು! ನೀವು ಉಣ್ಣುವಂಥ ಆಹಾರ ಅವರಿಗೆ ಕೊಡಿ. ನೀವು ಉಡುವಂಥ ಬಟ್ಟೆ ಅವರಿಗೆ ಕೊಡಿ. ಅಜ್ಞಾನಕಾಲದ ರಕ್ತಪಾತಮಯವಾದ ಬದ್ಧದ್ವೇಷವನ್ನು ನಿಷೇಧಿಸಲಾಗಿದೆ. ನೀವು ನಿಮ್ಮ ಹೆಂಡಂದಿರೊಡನೆ ವ್ಯವಹರಿಸುವಾಗ ಅಲ್ಲಾಹನನ್ನು ಜ್ಞಾಪಿಸಿಕೊಳ್ಳಿರಿ. ನಿಮಗೆ ಅವರ ಮೇಲೆ ಹಕ್ಕಿದೆ ಅವರಿಗೆ ನಿಮ್ಮ ಮೇಲೆ ಹಕ್ಕಿದೆ. ಸತ್ಯವಾಗಿಯೂ ನ್ಯಾಯತೀರ್ಮಾನದ ದಿನದವರೆಗೆ ಪ್ರತಿಯೊಬ್ಬರ ರಕ್ತ, ಆಸ್ತಿ ಮತ್ತು ಪ್ರತಿಷ್ಠೆಗಳು ಅತಿಕ್ರಮಣಕ್ಕೀಡಾಗದಂಥವು ಎಂಬುದನ್ನು ನೀವು ತಿಳಿಯಲೇಬೇಕು."

ಹಜರತ್ ಮುಹಮ್ಮದ್ ಪೈಗಂಬರರು ತಮ್ಮ ಕೊನೆಯ ಹಜ್ ಯಾತ್ರೆಯ ನಂತರ ಮಕ್ಕಾ ಸಮೀಪದ ಅರಫಾ ಮೈದಾನದಲ್ಲಿ ಯಾತ್ರಿಕರಿಗೆ ವಿದಾಯ ಹೇಳುವಾಗ ಆಡಿದ ಈ ಕೊನೆಯ ಮಾತು ಮಾನವ ಜನಾಂಗಕ್ಕೆ ಅನುಪಮ ಕೊಡುಗೆಯಾಗಿದೆ.

ಪೈಗಂಬರರು ವಿಶ್ವಕ್ಕೆ ಅರುಹಿದ ಇಸ್ಲಾಂ ಧರ್ಮದಲ್ಲಿ … ಕೀಳಿಲ್ಲ, ಒಡೆಯ ಒಡೆಯನಲ್ಲ, ಗುಲಾಮ ಗುಲಾಮನಲ್ಲ, ಯಾರೂ ಸರ್ವಾಧಿಕಾರಿ ಅಲ್ಲ, ಮಹಿಳೆಯು ಪುರುಷನ ದಾಸಿ ಅಲ್ಲ, ಯಾರೂ ಯಾರ ಮೇಲೂ ಏನನ್ನೂ ಹೇರುವಂತಿಲ್ಲ, ಶಾಂತಿ ಮತ್ತು ಪರಧರ್ಮ ಸಹಿಷ್ಣುತೆಯನ್ನು ಬಿಟ್ಟುಕೊಡುವಂತಿಲ್ಲ.

ಪೈಗಂಬರರು ಮಾನವೀಯತೆಯ ಸಾಕಾರರೂಪವಾಗಿದ್ದರು. ಕರಿಯರು-ಬಿಳಿಯರು, ಗುಲಾಮರು-ಒಡೆಯರು, ಮಹಿಳೆಯರು-ಪುರುಷರು, ಎಲ್ಲ ದೇಶದವರು ಮತ್ತು ಎಲ್ಲ ಭಾಷೆಯವರು ಪೈಗಂಬರರ ದಿವ್ಯಶಕ್ತಿಯ ಮುಂದೆ ಒಂದಾಗಿಹೋದರು. ನೀಗ್ರೋ ಗುಲಾಮನಾಗಿದ್ದ ಹಜರತ್ ಬಿಲಾಲ್ ಅವರು ಪೈಗಂಬರರ ವ್ಯಕ್ತಿತ್ವಕ್ಕೆ ಮಾರುಹೋಗಿ ಇಸ್ಲಾಂ ಧರ್ಮ ಸ್ವೀಕರಿಸಿದರು. ಅವರ ಜೊತೆಯಲ್ಲಿ ಮುನ್ನಡೆದು ಪ್ರಸಿದ್ಧರಾದರು. ಕುಲೀನ ಅರಬರು ಕೂಡ ಇಸ್ಲಾಂ ಧರ್ಮ ಸ್ವೀಕರಿಸಿದ ನೀಗ್ರೋ ಗುಲಾಮರಿಗೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡಲು ಮುಂದೆ ಬಂದರು.

ಇಷ್ಟೊಂದು ಬದಲಾವಣೆಗೆ ಒಳಗಾದ ಅರಬರು ಪೈಗಂಬರರ ಅನುಯಾಯಿಗಳಾಗುವ ಮೊದಲು ಹೇಗಿದ್ದರು ಎಂಬುದನ್ನು ಗಮನಿಸುವುದು ಅವಶ್ಯವಾಗಿದೆ.

ತಂದೆ ತೀರಿಕೊಂಡಮೇಲೆ ಮಕ್ಕಳು ತಮ್ಮ ಮಲತಾಯಂದಿರನ್ನು ಮದುವೆಯಾಗುವ ಪದ್ಧತಿ ಅರಬರಲ್ಲಿತ್ತು, ಕಾಬಾ ಭವನಕ್ಕೆ ಅರಬ ಮಹಿಳೆಯರು ಬೆತ್ತಲೆ ಸೇವೆ ಸಲ್ಲಿಸುತ್ತಿದ್ದರು. ಅರಬರು ಹೆಂಗೂಸುಗಳನ್ನು ಜೀವಂತ ಹುಗಿಯುವ ಸಂಪ್ರದಾಯ ಕೂಡ ಇತ್ತು, ಪತ್ನಿಯರಿಗೆ ಯಾವುದೇ ಹಕ್ಕು ಇರಲಿಲ್ಲ, ಅನೇಕ ಪತ್ನಿಯರು ಗಂಡಂದಿರರ ಖಡ್ಗಗಳಿಗೆ ಬಲಿಯಾಗುವ ಪ್ರಸಂಗಗಳಿದ್ದವು. ಒಬ್ಬ ಅರಬನ ಒಂಟೆ ಇನ್ನೊಬ್ಬ ಅರಬನ ಹುಲ್ಲುಗಾವಲಿನಲ್ಲಿ ಮೇಯ್ದದಕ್ಕೆ 40 ವರ್ಷ ಕಾದಾಟ ಮುಂದುವರಿದು 70 ಸಾವಿರ ಮಂದಿ ಸತ್ತ ದಾಖಲೆಗಳಿವೆ.

ಇಂಥ ಅನಾಗರಿಕ ಜನಾಂಗ ಇಸ್ಲಾಂ ಧರ್ಮ ಸ್ವೀಕರಿಸಿ ಸಂಸ್ಕೃತಿ ಮತ್ತು ನಾಗರಿಕತೆಯ ಹೊಸ ಬದುಕು ಪಡೆಯಿತು. ಇಲ್ಲಿ ಎಲ್ಲ ವರ್ಣದವರು ಮತ್ತು ಎಲ್ಲ ವರ್ಗದವರು ಒಂದಾಗಿ ಮಾನವೀಯ ರೂಪ ಪಡೆಯಲು ಸಾಧ್ಯವಾಯಿತು. ತಮ್ಮ ಜೀವಿತಕಾಲದಲ್ಲೇ ಅಂತಃಕರಣದಿಂದ ಹೊಸ ಸಮತಾ ಲೋಕ ಸೃಷ್ಟಿಸಿದ ಪೈಗಂಬರರು ಜಗತ್ತಿನ ಎಲ್ಲ ಜಾತಿ-ಜನಾಂಗಗಳ ಸೊತ್ತಾಗಿದ್ದಾರೆ.

ಎಲ್ಲ ಧರ್ಮಗಳ ಬಡವರು ಬಂದು ಅವರಲ್ಲಿ ಆಶ್ರಯ ಪಡೆಯುತ್ತಿದ್ದರು. ಎಲ್ಲ ಧರ್ಮಗಳ ಪಂಡಿತರು ಬಂದು ಅವರ ಜೊತೆ ಚರ್ಚಿಸುತ್ತಿದ್ದರು. ಎಲ್ಲರಿಗೂ ಅವರ ಬಗ್ಗೆ ಗೌರವಾದರಗಳಿದ್ದವು.

ಮಾನವರಿಗೆ ಅಭಿಪ್ರಾಯ ಸ್ವಾತಂತ್ರ್ಯವಿರಬೇಕು. ಬೇರೆಯವರ ಧರ್ಮವನ್ನು ಹೀಯಾಳಿಸುವ ಅಧಿಕಾರ ಯಾರಿಗೂ ಇಲ್ಲ. ಮಹಿಳೆಯರಿಗೆ ಸಮಾಜದಲ್ಲಿ ಸಮಾನ ಸ್ಥಾನವಿರಬೇಕು. ಪತಿಯ ಮತ್ತು ತಂದೆಯ ಆಸ್ತಿಯಲ್ಲಿ ಕೂಡ ಮಹಿಳೆಗೆ ಪಾಲು ಸಿಗಬೇಕು ಎಂದು ಮುಹಮ್ಮದ್ ಪೈಗಂಬರರು ಪ್ರತಿಪಾದಿಸಿದರು.

ಶಿಕ್ಷಣದ ಬಗ್ಗೆ ಅವರಿಗೆ ವಿಶೇಷವಾದ ಗೌರವವಿತ್ತು. ಜನಸಮುದಾಯದ ಒಳಿತಿಗಾಗಿ ಬರೆಯುವವರ ಮಸಿ ಹುತಾತ್ಮರ ರಕ್ತಕ್ಕಿಂತ ಪವಿತ್ರವಾದುದು ಎಂದು ಅವರು ಪ್ರತಿಪಾದಿಸಿದರು. ಜ್ಞಾನವನ್ನು ಬಯಸುವವರಿಗೆ ದೇವದೂತರು ತಮ್ಮ ರೆಕ್ಕೆಗಳನ್ನು ಕೊಡುತ್ತಾರೆ ಎಂದು ಅವರು ಹೇಳುತ್ತಿದ್ದರು. ನಮ್ಮ ಆಸೆಆಮಿಷಗಳ ವಿರುದ್ಧ ಹೋರಾಡುವುದೇ ನಿಜವಾದ ಜೇಹಾದ್ (ಧರ್ಮಯುದ್ಧ) ಎಂದು ಅವರು ಸಾರಿದರು.

ಹಜರತ್ ಮುಹಮ್ಮದ್ ಪೈಗಂಬರರು ಅರಬಸ್ತಾನದ ಮಕ್ಕಾ ಪಟ್ಟಣದಲ್ಲಿ ಕ್ರಿಸ್ತಶಕ 571ನೇ ಏಪ್ರಿಲ್ 20ರಂದು (ರಬಿವುಲ್ ಅವ್ವಲ್ 12ನೇ ತಾರೀಖು) ಜನಿಸಿದರು. ತಂದೆ ಅಬ್ದುಲ್ಲಾ, ತಾಯಿ ಆಮೀನಾ.

ಮುಹಮ್ಮದರು ತಾಯಿಯ ಗರ್ಭದಲ್ಲಿದ್ದಾಗಲೇ ತಂದೆ ಅಬ್ದುಲ್ಲಾ ಅವರು ಸಿರಿಯಾ ದೇಶದಿಂದ ವಾಪಸ್ ಬರುವಾಗ ಮದೀನಾ ಪಟ್ಟಣದಲ್ಲಿ ಬೇನೆಬಿದ್ದು ನಿಧನರಾದರು. ಮುಹಮ್ಮದರ ಜನನದ ನಂತರ ದಾಯಿ ಹಲೀಮಾ ಅವರು ಮುಹಮ್ಮದರಿಗೆ ಹಾಲುಣಿಸಿ ಬೆಳೆಸಿದರು. ಸಂಪ್ರದಾಯದ ಪ್ರಕಾರ ಕುರೈಶ್ ಜನಾಂಗದ ಮೇಲ್ವರ್ಗದ ತಾಯಂದಿರು ತಮ್ಮ ಮಕ್ಕಳಿಗೆ ಹಾಲು ಉಣಿಸುತ್ತಿರಲಿಲ್ಲ.

ಐದು ವರ್ಷಗಳ ನಂತರ ದಾಯಿ ಹಲೀಮಾ ಮಗುವನ್ನು ತಾಯಿ ಆಮೀನಾ ಬಳಿ ತಂದುಬಿಟ್ಟರು. ಮುಹಮ್ಮದರಿಗೆ ಆರು ವರ್ಷ ತುಂಬುವುದರೊಳಗಾಗಿ ಆಮೀನಾ ತೀರಿಕೊಂಡರು. ಆಗ ಕುರೈಶಿ ಬುಡಕಟ್ಟಿನ ನಾಯಕರಾದ ಅವರ ತಾತ ಅಬ್ದುಲ್ ಮುತ್ತಲಿಬ್ ನೋಡಿಕೊಂಡರು. ಮುಹಮ್ಮದರು ಎಂಟು ವರ್ಷದವರಿದ್ದಾಗ ಅವರೂ ನಿಧನರಾದರು. ನಂತರ ದೊಡ್ಡಪ್ಪ ಅಬೂ ತಾಲಿಬ್ ಅವರು ಮುಹಮ್ಮದರನ್ನು ಬೆಳೆಸಿದರು. ಮುಹಮ್ಮದರು 12ನೇ ವಯಸ್ಸಿನವರೆಗೆ ಕುರಿ ಕಾಯ್ದರು.

ಮುಹಮ್ಮದರು 15 ವರ್ಷದವರಿದ್ದಾಗ ಅರಬರ ಜಗಳಗಳನ್ನು ಬಿಡಿಸುವಲ್ಲಿ ಯಶಸ್ವಿಯಾಗತೊಡಗಿದರು.

ಮುಹಮ್ಮದ್ ಎಂದರೆ ಗುಣಗಾನ ಯೋಗ್ಯ. ಜನ … ಅಲ್ ಅಮೀನ್ (ನಂಬಿಗಸ್ಥ) ಮತ್ತು ಅಲ್ … (ಸತ್ಯವಾನ) ಎಂದು ಕರೆದರು. ಮಕ್ಕಾ ಪಟ್ಟಣದ … ಅವರು ಹೇಳುವುದು ವೇದವಾಕ್ಯವಾಗಿತ್ತು. … ನಿರಕ್ಷರಿಗಳಾಗಿದ್ದರು. ಆದರೆ ಅವರ ಚಿಂತನಶಕ್ತಿ … ಭಾಷಾಜ್ಞಾನ ಅಗಾಧವಾಗಿದ್ದವು. ಅವರ ಭಾಷಾ… ಅಂದಿನ ಕಾಲದ ಅರಬ ಪಂಡಿತರನ್ನು ಬೆರಗುಗೊಳಿಸಿತ್ತು.

ಮುಹಮ್ಮದರು 24 ವರ್ಷದವರಿದ್ದಾಗ ಖ… ಎಂಬ ಶ್ರೀಮಂತ ಮಹಿಳೆ ಬಳಿ ಕೆಲಸಕ್ಕೆ ಸೇ… ಮುಹಮ್ಮದರು ಆ ಮಹಿಳೆಯ ವ್ಯಾಪಾರ ವ್ಯವಹಾ… ನಿಷ್ಠೆಯಿಂದ ನೋಡಿಕೊಂಡರು. ಹೊರದೇಶಗಳಿಗೆ ಒ… ಮೇಲೆ ವಸ್ತುಗಳನ್ನು ಹೊತ್ತುಕೊಂಡು ಹೋಗಿ ವ… ಮಾಡುವಾಗ ವಸ್ತುಗಳ ಗುಣದೋಷಗಳ ಬಗ್ಗೆ ಗಿರಾ… ಸ್ಪಷ್ಟಪಡಿಸುತ್ತಿದ್ದರು. ಖದೀಜಾ ಅವರಿಗೆ ಎಲ್ಲ ಹಣ… ಸರಿಯಾಗಿ ತಂದು ಒಪ್ಪಿಸುತ್ತಿದ್ದರು.

ಮೂರು ಮಕ್ಕಳ ತಾಯಿ ಖದೀಜಾ ಅವರು … ಬಾರಿ ವಿಧವೆಯಾಗಿದ್ದರು. ಅವರು ಮುಹ… ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡರು. ಅವರ … ವಿವಾಹವಾಗಲು ಮುಂದಾದರು. ಮುಹಮ್ಮದರು ಹಿ… ಒಪ್ಪಿಗೆ ಪಡೆದು ಖದೀಜಾ ಅವರನ್ನು ವಿವಾಹವ… ಆಗ ಅವರಿಗೆ 25 ವರ್ಷ ಮತ್ತು ಖದೀಜಾ … 40 ವರ್ಷ ವಯಸ್ಸಾಗಿತ್ತು. ನಂತರ ಮುಹಮ್ಮದರ … ಮೇರೆಗೆ ಅವರು ತಮ್ಮ ಭಾರೀ ಸಂಪತ್ತನ್ನೆಲ್ಲ ಬಡವ… ಖರ್ಚು ಮಾಡುತ್ತ, ಮುಹಮ್ಮದರ ಜೊತೆ ಬಡ… ಬದುಕಿದರು!



ಮುಹಮ್ಮದರು ಮಹಿಳೆಯರ ಮತ್ತು ಅನಾಥ… ಪಕ್ಷಪಾತಿಯಾಗಿದ್ದರು. ಗುಲಾಮಗಿರಿಯನ್ನು ವಿರೋಧಿ… ಗುಲಾಮರನ್ನು ಮಕ್ಕಳಂತೆ ನೋಡಿಕೊಂಡರು. ಖ… ಅವರ ಸಂಬಂಧಿಕರೊಬ್ಬರು ಜೈದ್ ಎಂಬ ಬಾಲ… ತಂದು ಖದೀಜಾ ಅವರಿಗೆ ಕೊಟ್ಟರು. ಜೈದ್… ತಂದೆಯ ಜೊತೆ ಪ್ರಯಾಣ ಮಾಡುತ್ತಿ… ದರೋಡೆಕೋರರು ದಾಳಿ ಮಾಡಿ, ಬಾಲಕ ಜೈದ… ಎತ್ತಿಕೊಂಡು ಬಂದು ಗುಲಾಮರ ಪೇಟೆಯಲ್ಲಿ ಮ… ಮಾಡಿದ್ದರು. ಸಂಬಂಧಿಕರು ಕೊಂಡುತಂದುಕೊಟ… ಬಾಲಕನನ್ನು ಖದೀಜಾ ಅವರು ಮುಹಮ್ಮದರ … ಬಿಟ್ಟರು. ಮುಹಮ್ಮದರು ಜೈದ್‌ನನ್ನು ಮಗ… ನೋಡಿಕೊಂಡರು. ಸುದ್ದಿ ತಿಳಿದ ನಂತರ ಜೈದ್‌ನ … ಹುಡುಕಿಕೊಂಡು ಬಂದ. ಹಣ ಕೊಟ್ಟು ಮ… ಕರೆದುಕೊಂಡು ಹೋಗುವುದಾಗಿ ಹೇಳಿದ. ಆತ ಬ… ಹಾಗೇ ಕರೆದುಕೊಂಡು ಹೋಗಬಹುದು … ಮುಹಮ್ಮದರು ಹೇಳಿದರು. ಆದರೆ ತಂದೆಯ … ಹೋಗಲು ಜೈದ್ ನಿರಾಕರಿಸಿದ. ಮುಹಮ್ಮದರ… ಬಾಲಕನನ್ನು ಗುಲಾಮನಂತೆ ನೋಡಿಕೊ… ತಂದೆ-ತಾಯಿಯಾಗಿ ನೋಡಿಕೊಂಡಿದ್ದರು. ಮುಹಮ… ತಬ್ಬಲಿಯಾಗಿ ಬೆಳೆದಿದ್ದರು. ಅನಾಥಮಕ್ಕಳ ನೋವಿನ … ಅವರಿಗಿತ್ತು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊ… ಅವರು, ತಾಯಿಯ ಪದತಲದಲ್ಲಿ ಸ್ವರ್ಗವಿದೆ … ಹೇಳುತ್ತಿದ್ದರು.


ಮಾತೃಪ್ರೇಮದ ಭಾವದೊಂದಿಗೆ ಅವರು ಈ ಜ… ನೋಡಿದರು. ಅವರ ಹೃದಯ ಅಂತಃಕರಣದಿಂದ ತು… ಅವರು ಯಾರಿಗೂ ನೋವುಂಟು ಮಾಡುತ್ತಿ… ಒಂದುಸಲ ಮಧ್ಯಾಹ್ನ ಅವರು ಮಲಗಿದ ವೇಳೆ … ಹಾಸಿಗೆಯ ಮೂಲೆಯೊಂದರಲ್ಲಿ ಬೇನೆಬಿದ್ದ ಬೆಕ್ಕೊ… ಬಂದು ಮಲಗಿತ್ತು. ಅವರು ಎಚ್ಚರಾದಾಗ ಪ್ರೀತಿಯ… ಆ ಬೆಕ್ಕನ್ನು ನೋಡಿದರು. ಅದಕ್ಕೆ ತೊಂದರೆಯಾಗ… ಹಾಸಿದ ಬಟ್ಟೆಯನ್ನು ಕತ್ತರಿಸಿ ತೆಗೆದುಕೊಂಡು ಹೋ… ಉಳಿದ ಬಟ್ಟೆಯ ತುಂಡಿನ ಮೇಲೆ ಆ ಬೆಕ್ಕು … ನಿದ್ರಿಸುತ್ತಿತ್ತು.

ಪರಿಸರದ ಬಗ್ಗೆ ಅವರಿಗೆ ವಿಶೇಷವಾದ ಕಾಳಜಿ … ಅನ್ಯಾಯವಾಗಿ ಒಂದು ಮರ ಕಡಿಯುವುದನ್ನು … ಅವರು ಸಹಿಸುತ್ತಿರಲಿಲ್ಲ.

ಕ್ರಿಸ್ತಶಕ 600ರಲ್ಲಿ ದೊಡ್ಡಪ್ಪ ಅಬು ತಾಲೀ… ಮಗ ಹುಟ್ಟಿದ. ಆ ಮಗುವೇ ಅಲಿ. ಅಲಿ … ಮುಹಮ್ಮದರ ನೆರಳಾಗಿ ಬೆಳೆದರು. ಅಲಿ ದೊಡ್ಡವ… ಮೇಲೆ ಮುಹಮ್ಮದರು ತಮ್ಮ ನಾಲ್ಕನೆಯ … ಕೊನೆಯ ಮಗಳು ಫಾತಿಮಾರನ್ನು ಅವರಿಗೆ ಕೊ… ಮದುವೆ ಮಾಡಿದರು.

ಮುಹಮ್ಮದರು ಎಲ್ಲ ಜನಾಂಗಗಳ ಮಧ್ಯೆ … ಮತ್ತು ಸೌಹಾರ್ದ ಬಯಸಿದ್ದರು. ಮಕ್ಕಾ ಪಟ್ಟಣದ … ಸ್ಥಳವಾದ ಕಾಬಾ ಭವನ ತೀರ ಹಳೆಯದಾಗಿತ್ತು. … ಪುನರ್‌ನಿರ್ಮಾಣ ಕಾರ್ಯ ನಡೆಯಿತು. ಆದರೆ…



ನಿರರ್ಗಳ ಭಾಷಣದ ಗುಟ್ಟು!

ನಾಜಿ ಆಡಳಿತದ ಜರ್ಮನಿಯ ಪಾಡನ್ನು ಬಲ್ಲವರಿಗೆ
ದಿನ ಭಾರತದ ಸ್ಥಿತಿಯಲ್ಲಿ ಹೆಚ್ಚೇನೂ ಭಿನ್ನತೆಗಳು
ಗೋಚರಿಸಲಾರವು. ಜನರಿಗೆ ಮಂಕುಬೂದಿ ಎರಚುವ
ಷಣಗಳ ವಿಷಯದಲ್ಲಂತೂ ಸಾಮ್ಯತೆಗಳು
ಕಾಣುವಂತಿವೆ. ನಾನಾ ಹಾವಭಾವ, ಕೈಚಾಚುವಿಕೆ
ತ್ತ ಧ್ವನಿಯ ಏರಿಳಿತಗಳಿಂದ ಕೂಡಿದ, ಮೋದಿಮಾಡುವ
ಮಾಲೋಕಕ್ಕೆ ಒಯ್ಯುವ, ಭಾವಾತಿರೇಕದ, ಆದರೆ
ತಾನದ ಭಾಷಣಗಳವು. ನರೇಂದ್ರ ಮೋದಿಯ
ಷಣಗಳನ್ನು ಪರವಶವಾಗಿ ಆಲಿಸುವ ಭಕ್ತಗಣಗಳು
ನಿಗೆ ಸರಿಸಾಟಿಯಾದವರು ಬ್ರಹ್ಮಾಂಡದಲ್ಲೇ ಇಲ್ಲವೆಂದು
ಗುತ್ತವೆ. ನಾಗಪುರದ ಕೇಂದ್ರಕಚೇರಿಯಲ್ಲಿ ಹಲವು
ತಗಳ ತರಬೇತಿ ಪಡೆದಿರುವ ವ್ಯಕ್ತಿ ಕಾಲಕ್ರಮೇಣದಲ್ಲಿ
ಷಾಪ್ರಾವೀಣ್ಯ ಸಾಧಿಸಿರುವುದು ಸಹಜವೇ ಆಗಿದೆ.


ಇತ್ತೀಚೆಗೆ ಆತ ಅಮೆರಿಕಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ
ದಿನ ಪ್ರಧಾನಿಗಳ ಸಂಪ್ರದಾಯದಲ್ಲೆ ಅಲ್ಲಿನ ಸಂಸತ್ತನ್ನು
ನಸಭೆ, ಕಾಂಗ್ರೆಸ್) ಉದ್ದೇಶಿಸಿ ಮಾತನಾಡುವ ಅವಕಾಶ
ಒಗಿಬಂದಿತ್ತು. ಎಲ್ಲಾ ಮಾಧ್ಯಮಗಳೂ ಲೈವ್ ಆಗಿ
ತ್ತರಿಸಿದ್ದ ಭಾಷಣವನ್ನು ಕೇಳಿದ ಚೇಲಾಗಳಂತೂ
ಮರಿಕದ ಸಂಸತ್ತಿನೊಳಗೆ ನಿರರ್ಗಳವಾಗಿ, 'ಅಮೋಘ'ವಾಗಿ
ತನಾಡಿದ "ಭಾರತಕ್ಕೆ ದೇವರು ಕೊಟ್ಟ ವರ"ಕ್ಕೆ ಉಘೇ
ಘೇ ಎಂದು ಹರ್ಷೋದ್ಗಾರ ಮಾಡಿದ್ದೇ ಮಾಡಿದ್ದು!
ಗೆ ಸಭೆಯೇ ಎದ್ದುನಿಂತು ಜಯಘೋಷಗಳೊಂದಿಗೆ
ದೀರ್ಘಕಾಲ ಕರತಾಡನ ಮಾಡಿದ ದೃಶ್ಯವನ್ನು ತೋರಿಸುತ್ತ
ಟ್ಟೆದ್ದು ನಲಿದದ್ದೇ ನಲಿದದ್ದು! ಆದರೆ ಮೋದಿ ಭಾಷಣ
ಾಡಿದ್ದು ಅಧಿವೇಶನದಲ್ಲಿದ್ದ ಶಾಸನಸಭೆಯನ್ನು
ದ್ದೇಶಿಸಿಯೇ? ಅಲ್ಲ! ಅಂದು ಶಾಸನಸಭೆ ನಡೆಯುತ್ತಿತ್ತೇ?
ಲ್ಲ! ನಿಜವಾಗಿ 535 ಸದಸ್ಯರನ್ನು ಹೊಂದಿರುವ
ಸನಸಭೆಯಲ್ಲಿ ಅಂದು 50 ಮಂದಿ ಸದಸ್ಯರೂ ಇರಲಿಲ್ಲ.
ಹಾಗಾದರೆ ತುಂಬಿದ ಸಭೆಯಲ್ಲಿ ಇದ್ದ ಉಳಿದೆಲ್ಲ ಮಂದಿ ಯಾರು? ಅಧಿಕಾರಿಗಳು, ಸಿಬ್ಬಂದಿವರ್ಗ ಮತ್ತು ಎನ್ನಾರೈಗಳು! ಹಾಗೆ ನೋಡಿದರೆ ಇದರಲ್ಲೇನೂ ವಿಶೇಷ ಇಲ್ಲ, ಭಾರತದಲ್ಲೂ ಹೆಚ್ಚುಕಡಿಮೆ ಇದೇ ಸಂಪ್ರದಾಯ ವಾಡಿಕೆಯಲ್ಲಿದೆ. ಆದರೆ ಮೋದಿ ಸರ್ಕಾರದ ಇತಿಮಿತಿ ಇಲ್ಲದ ಪ್ರಚಾರಯಂತ್ರದ ಶಬ್ದಕೋಶದಲ್ಲಿರುವುದು ಅತಿರೇಕ ಎಂಬ ಒಂದೇ ಪದ; ಇನ್ನು ಮೋದಿಭಕ್ತರಂತೂ ಅಂಧಾಭಿಮಾನಿಗಳು. ಪರಿಣಾಮ? ಅತಿಯಾದ ಉತ್ಪ್ರೇಕ್ಷೆ!

ರಾಹುಲ್ ಗಾಂಧಿ ಮುಂತಾದವರಿಗೆ ನೆಟ್ಟಗೆ ಭಾಷಣ ಮಾಡಲು ಬರುವುದಿಲ್ಲ, ಮೊದಲೆ ಬರೆದು ತಂದ ಭಾಷಣ ಓದುತ್ತಾರೆಂದು ಹೀಗಳೆಯುವ ಮೋದಿಭಕ್ತರಿಗೆಲ್ಲ ತಾವಿರುವುದು ಗಾಜಿನ ಮನೆಯಲ್ಲಿ ಎಂಬುದರ ಅರಿವು ಪ್ರಾಯಶಃ ಇಲ್ಲವೆಂದು ತೋರುತ್ತದೆ. ಈಗ ನರೇಂದ್ರಭಾಯಿಯ ಇಂಗ್ಲಿಷ್ ಭಾಷಣಗಳ ವಿಷಯಕ್ಕೆ ಬಂದರೆ ಅವನ್ನೆಲ್ಲ ಬರೆದುಕೊಡಲೆಂದೆ ವಿಶೇಷ ಸಲಹೆಗಾರರನ್ನು ಇಟ್ಟುಕೊಳ್ಳಲಾಗಿದೆ. ಮೋದಿ ಮೊದಲು ಅದನ್ನು ಕಂಠಪಾಠ ಮಾಡಿ ನಂತರ ಪೋಡಿಯಂನಲ್ಲಿ ನಿಂತು ಮಾತನಾಡುತ್ತಾನೆಂದು ಯಾರಾದರೂ ಭಾವಿಸಿದರೆ ಅದು ತಪ್ಪಾಗುತ್ತದೆ. ಹಾಗಾದರೆ ಆತನ ತಡೆರಹಿತ ಇಂಗ್ಲಿಷ್ ಭಾಷಣಗಳ ಗುಟ್ಟೇನು? ಇದನ್ನು ತಿಳಿಯುವ ಮುನ್ನ ಉದಾಹರಣೆಯಾಗಿ ಟಿವಿ ವಾರ್ತೆಗಳ ಬಗ್ಗೆ ಒಂದಿಷ್ಟು ಅರಿತುಕೊಳ್ಳೋಣ. ಅಲ್ಲಿ ಸುದ್ದಿ ವಾಚಕರು ಎಲ್ಲವನ್ನೂ ಜ್ಞಾಪಕಶಕ್ತಿಯಿಂದ ಹೇಳುತ್ತಿದ್ದಾರೆಂದು ಭಾಸವಾಗುತ್ತದಲ್ಲವೆ. ಆದರೆ ಹೀಗೆ ಎಲ್ಲ ವಿಷಯಗಳನ್ನೂ ನೆನಪಿನಲ್ಲಿಡುವುದು ಮಾನವ ಸಾಮರ್ಥ್ಯಕ್ಕೆ ಮೀರಿದ್ದು. ನಿಜಸಂಗತಿ ಏನೆಂದರೆ ಅವರ ಮುಂದುಗಡೆ ನೋಡುಗರಿಗೆ ಕಾಣಿಸದಂತಹ ಒಂದು ಪಟಲ (ಪರದೆ) ಇರುತ್ತದೆ. ದೊಡ್ಡ ಅಕ್ಷರಗಳಲ್ಲಿ ಇರುವ ಲಿಖಿತ ಸುದ್ದಿಯನ್ನು ಆ ಪಟಲದ ಮೇಲೆ ಹಾಯಿಸಿದ ಬಳಿಕ ಪಠ್ಯವನ್ನು ವಾಚಕರ ವೇಗಕ್ಕೆ ಅನುಗುಣವಾಗಿ ಮೇಲೆ ಯಾ ಕೆಳಗೆ ಚಲಿಸುವಂತೆ (ಸ್ಕ್ರೋಲ್) ಮಾಡಲಾಗುತ್ತದೆ. ಇದಕ್ಕೆ ಟೆಲಿಪ್ರಾಂಪ್ಟರ್ ತಂತ್ರಜ್ಞಾನ ಎನ್ನುತ್ತಾರೆ.

ಮೋದಿಯ ನಿರರ್ಗಳ ಇಂಗ್ಲಿಷ್ ಭಾಷಣದ ಒಳಗುಟ್ಟು ಕೂಡ ಇದೇ ಗಾಜಿನ ಪಟಲ ಹೊರತು ಸ್ಮೃತಿಪಟಲ ಅಲ್ಲ. ಈ ತಂತ್ರಜ್ಞಾನದ ಮೊರೆಹೋಗುವವರ ಸಾಲಿನಲ್ಲಿ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಸೇರಿದಂತೆ ಹಲವು ಜನನಾಯಕರಿದ್ದಾರೆ. ಹಾಗಾದರೆ ಅಲ್ಲೆಲ್ಲ ಟೆಲಿಪ್ರಾಂಪ್ಟರ್ ತಂತ್ರಜ್ಞಾನವನ್ನು ಯಾವ ರೀತಿ ಬಳಸಲಾಗುತ್ತದೆಂದು ತಿಳಿಯಲು ಕುತೂಹಲದಿಂದಿರುವವರ ಸಲುವಾಗಿ ಇಲ್ಲಿದೆ ಸಂಪೂರ್ಣ ಮಾಹಿತಿ. ಸಾಮಾನ್ಯವಾಗಿ ಭಾಷಣಕಾರನ ಎದುರು ತೆಳ್ಳಗಿನ ಸ್ಟಾಂಡ್‌ಗಳ ಮೇಲೆ ಕೂರಿಸಿದಂತಹ ಎರಡು ಅರೆಪಾರದರ್ಶಕ ಗಾಜಿನ ಪಟಲಗಳನ್ನು ಅಳವಡಿಸಲಾಗುತ್ತದೆ. ಒಂದು ಭಾಷಣಕಾರನ ಎಡಗಡೆಯಲ್ಲಿ ಇದ್ದರೆ ಇನ್ನೊಂದನ್ನು ಬಲಗಡೆ ನಿಲ್ಲಿಸಲಾಗುತ್ತದೆ. ಎರಡೂ ಪಟಲಗಳನ್ನು 45 ಡಿಗ್ರಿ ಕೋನದಲ್ಲಿ ಬಾಗಿಸಿ ಭಾಷಣಕಾರನ ಕಣ್ಣೆತ್ತರಕ್ಕೆ ಇರುವಂತೆ ಅಡ್ಜಸ್ಟ್ ಮಾಡಲಾಗುತ್ತದೆ. ಪಟಲಗಳ ತಳಭಾಗದಲ್ಲಿ ಒಂದು ಎಲ್‌ಸಿಡಿ ಮಾನಿಟರ್ ಇರುತ್ತದೆ. ಅದು ಚಾವಣಿಯತ್ತ ಮುಖ ಮಾಡಿರುತ್ತದೆ. ಮೊದಲೇ ಸಿದ್ಧಪಡಿಸಲಾದ ಭಾಷಣವನ್ನು ಕಂಪ್ಯೂಟರ್ ಆಪರೇಟರ್ ಒಬ್ಬ ಮಾನಿಟರ್ ಮೇಲೆ ಹಾಯಿಸಿದಾಗ ಅದು ಗಾಜಿನ ಪಟಲಗಳ ಮುಂಭಾಗದ ಮೇಲೆ ಅಂದರೆ ಭಾಷಣಕಾರನ ಎದುರಿಗಿರುವ ಪಾರ್ಶ್ವದ ಮೇಲೆ ಪ್ರತಿಬಿಂಬಿತವಾಗುತ್ತದೆ. ಅಕ್ಷರಗಳ ಗಾತ್ರ ಸಾಕಷ್ಟು ದೊಡ್ಡದಾಗಿದ್ದು ಭಾಷಣಕಾರನಿಗೆ ಸ್ಪಷ್ಟವಾಗಿ ಕಾಣಿಸುವಂತಿರುತ್ತದೆ (ಫಾಂಟ್ 56ರಿಂದ 72). ಭಾಷಣಕಾರ ಒಮ್ಮೆ ಎಡಕ್ಕೆ ತಿರುಗಿ ಪಟಲದ ಮೇಲಿರುವ ವಾಕ್ಯಗಳನ್ನು ನೋಡುತ್ತ ಮಾತನಾಡಿದರೆ ಇನ್ನೊಮ್ಮೆ ಬಲಗಡೆ ಇರುವ ಗಾಜಿನ ಪಟಲ ವೀಕ್ಷಿಸುತ್ತ ಮಾತನಾಡುತ್ತಾನೆ. ಭಾಷಣಕಾರನನ್ನು ಗಮನವಿಟ್ಟು ಆಲಿಸುತ್ತಾ ಇರುವ ಕಂಪ್ಯೂಟರ್ ಆಪರೇಟರ್, ಅದಕ್ಕನುಗುಣವಾಗಿ, ಅದೇ ವೇಗದಲ್ಲಿ ಭಾಷಣದ ವಾಕ್ಯಗಳನ್ನು ಪರದೆಗಳ ಮೇಲೆ ಹಾಯಿಸುತ್ತ ಇರುತ್ತಾನೆ. ಭಾಷಣಕಾರ ನಿಲ್ಲಿಸಿದಾಗ ತಾನೂ ನಿಲ್ಲಿಸಿ ಆತ ಮುಂದುವರಿಸಿದಾಗ ತಾನೂ ಮುಂದುವರಿಸುತ್ತಾನೆ. ಆದರೆ ಎದುರುಗಡೆ ಕುಳಿತು ಕೇಳುವ ಸಭಿಕರಿಗೆ ಇದ್ಯಾವುದೂ ಕಾಣಿಸುವುದಿಲ್ಲ, ಅವರ ಕಣ್ಣಿಗೆ ಖಾಲಿ ಗಾಜಿನ ಎರಡು ಸಣ್ಣ ಹಲಿಗೆಗಳಷ್ಟೆ ಗೋಚರಿಸುತ್ತವೆ. ಆದುದರಿಂದಲೆ ಭಾಷಣಕಾರ ತಮ್ಮನ್ನು ನೋಡುತ್ತ ಅದ್ಭುತವಾಗಿ ಮಾತನಾಡುತ್ತಿದ್ದಾನೆಂದು ಭಾವಿಸುತ್ತಾರೆ!

ತಿಳಿಯಿತೆ ನಿರರ್ಗಳ ಭಾಷಣಗಳ ಗುಟ್ಟು? ●

ಬೂಸಿ ಬಸ್ಯ... ಮೋದಿ!



ಡದಲ್ಲಿ ಪವಿತ್ರವಾದ ಮತ್ತು ಪುರಾತನವಾದ
ಳೆಯುವ ಕಪ್ಪುಶಿಲೆ (ಹಜರೆ ಅಸ್ವದ್)ಯನ್ನು ಯಾವ
ಡಕಟ್ಟಿನ ನಾಯಕರು ಪ್ರತಿಷ್ಠಾಪನೆ ಮಾಡಬೇಕು
ಬುದರ ಬಗ್ಗೆ ವಿವಾದ ಎದ್ದು ರಕ್ತಪಾತವಾಗುವ ಸ್ಥಿತಿ
ಬಿತು. ಈ ನ್ಯಾಯ ತೀರ್ಮಾನದ ಅವಕಾಶ
ಹಮ್ಮದರಿಗೆ ಲಭಿಸಿತು. ಶಿಲೆಯ ಪ್ರತಿಷ್ಠಾಪನೆ ಮಾಡುವ
ಕ್ಕು ಕೂಡ ಅವರಿಗೇ ಬಂದಿತು. ಆದರೆ ಮುಹಮ್ಮದರು
ದು ಬಟ್ಟೆ ತರಿಸಿ ಅದರ ಮೇಲೆ ಹಜರೆ ಅಸ್ವದ್
ಟ್ಟರು. ಎಲ್ಲಾ ಬುಡಕಟ್ಟುಗಳ ನಾಯಕರು ಆ ಬಟ್ಟೆಯನ್ನು
ಡಿದು ಎತ್ತಿದರು. ಮುಹಮ್ಮದರು ಆ ಪವಿತ್ರ ಶಿಲೆಯ
ತಿಷ್ಠಾನ ಮಾಡಿದರು. ಇದರಿಂದ ಯಾರ ಪ್ರತಿಷ್ಠೆಗೂ
ಂದು ಬರಲಿಲ್ಲ, ಅವರ ಈ ಕ್ರಮದಿಂದ ಎಲ್ಲ
ಡಕಟ್ಟುಗಳ ಮುಖಂಡರೂ ಸಂತುಷ್ಟಗೊಂಡರು.

ಮುಹಮ್ಮದರು ರಂಜಾನ್ ತಿಂಗಳಲ್ಲಿ ಮಕ್ಕಾ
ಟ್ಟಣದಿಂದ ಆರು ಮೈಲಿ ದೂರ ಇರುವ ನೂರ್
ರ್ವತದ ಹಿರಾ ಗುಹೆಯಲ್ಲಿ ಧ್ಯಾನ ಮಾಡುತ್ತಿದ್ದರು.
ವರ 40ನೇ ವರ್ಷದಲ್ಲಿ ಒಂದು ದಿನ ಜಿಬ್ರೈಲ್ ಎಂಬ
ದೇವದೂತ ಬಂದು ನೀವು ಅಲ್ಲಾಹನ ಸಂದೇಶವಾಹಕ
ಪೈಗಂಬರ್) ಆಗಿದ್ದೀರಿ ಎಂದು ಮುಹಮ್ಮದರಿಗೆ
ತಿಳಿಸಿದರು. ಅಂದಿನಿಂದ ಅವರು ಪೈಗಂಬರರಾದರು.
ದೇವದೂತ ಜಿಬ್ರೈಲ್ ಪದೆಪದೇ ತಂದ ಸಂದೇಶಗಳನ್ನು
ವರು ಜನಸಮುದಾಯಕ್ಕೆ ತಿಳಿಸಿದರು. ಈ ಸಂದೇಶಗಳ
ಗ್ರಹವೇ ಪವಿತ್ರ ಕುರಾನ್ ಆಗಿದೆ. ಈ ಕುರಾನ್
ಗತ್ತಿನ ಎಲ್ಲ ಮಾನವತಾವಾದಿಗಳ ಸೊತ್ತಾಗಿದೆ.

ಪೈಗಂಬರರು ಹೇಳಿದ ಇಸ್ಲಾಂ ಧರ್ಮದ ಐದು
ಮುಖ್ಯ ತತ್ವಗಳು:

ಕಲಿಮಾ: ದೇವರು (ಅಲ್ಲಾಹ್) ಒಬ್ಬನೇ. ಅವನಲ್ಲದೆ
ಬೇರೆ ದೇವರಿಲ್ಲ, ಮುಹಮ್ಮದರು ಆತನ ಪೈಗಂಬರರು.

ನಮಾಜ್: ಪ್ರತಿದಿನ ಐದು ಬಾರಿ ದೇವರ ಪ್ರಾರ್ಥನೆ
ಮಾಡಬೇಕು.

ಜಕಾತ್: ಶ್ರೀಮಂತರು ತಮ್ಮ ಸಂಪತ್ತಿನ ಶೇಕಡಾ 2.5ರಷ್ಟನ್ನು ಬಡವರಿಗೆ ಸಲ್ಲಿಸಬೇಕು.

ರೋಜಾ: ರಂಜಾನ್ ತಿಂಗಳಲ್ಲಿ ಉಪವಾಸ ವ್ರತ ಆಚರಿಸಬೇಕು.

ಹಜ್: ಸಾಧ್ಯತೆ ಇದ್ದವರು ಮಕ್ಕಾದಲ್ಲಿನ ಕಾಬಾ ಭವನಕ್ಕೆ ಹಜ್ ಯಾತ್ರೆ ಮಾಡಬೇಕು.

ಅವರ ಏಕದೇವೋಪಾಸನೆ ತತ್ವವನ್ನು ಮಕ್ಕಾ ಪಟ್ಟಣದ ಅರಬರು ಇಷ್ಟಪಡಲಿಲ್ಲ. ಪೈಗಂಬರರು ಮತ್ತು ಅವರ ಅನುಯಾಯಿಗಳನ್ನು ಪರಿಪರಿಯಿಂದ ಕಾಡಿದರು. ವಿರೋಧಿಗಳು ಅವರ ವಿರುದ್ಧ 24 ಬಾರಿ ಯುದ್ಧ ಸಾರಿದರು. ವಿರೋಧಿಗಳಿಂದಾಗಿ ಅವರು ಹಸಿವು ಮತ್ತು ನೋವನ್ನು ಅನುಭವಿಸಿದರು.

ಅವರು 50 ವರ್ಷದವರಿದ್ದಾಗ ಅವರ ದೊಡ್ಡಪ್ಪ ಅಬು ತಾಲಿಬ್ ಮತ್ತು ಪತ್ನಿ ಖದೀಜಾ ನಿಧನರಾದರು. ಅವರು 53 ವರ್ಷದವರಿದ್ದಾಗ ಮಕ್ಕಾ ಪಟ್ಟಣದಲ್ಲಿ ಅವರ ಕೊಲೆಗೆ ಯತ್ನಿಸಲಾಯಿತು. ಅವರು ಅನುಯಾಯಿಗಳೊಂದಿಗೆ ಮದೀನಾಗೆ ಪಾರಾಗಿಹೋದರು. ಹೀಗೆ ಅವರು ವಲಸೆ ಹೋದಂದಿನಿಂದ ಹಿಜರಿ ಶಕೆ ಪ್ರಾರಂಭವಾಯಿತು.

ಪೈಗಂಬರರು ತಮ್ಮ ಅನುಯಾಯಿಗಳ ಜೊತೆಗೂಡಿ ವೈರಿಗಳೊಂದಿಗೆ ಅನೇಕ ಬಾರಿ ಹೋರಾಡಿದರು. ಮದೀನಾ ಪಟ್ಟಣದಿಂದ 80 ಮೈಲಿ ದೂರದಲ್ಲಿನ ಬದ್ರ್ ಎಂಬ ಪ್ರದೇಶದಲ್ಲಿ ನಡೆದ ಯುದ್ಧ 4 ಮೈಲಿ ದೂರದಲ್ಲಿನ ಉಹುದ್ ಬೆಟ್ಟದಲ್ಲಿ ನಡೆದ ಯುದ್ಧ ಮತ್ತು ಮದೀನಾ ಸುತ್ತಲೂ ಕಂದಕ ತೆಗೆದನಂತರ ನಡೆದ ಕಂದಕದ ಯುದ್ಧಗಳು ಪ್ರಸಿದ್ಧವಾಗಿವೆ.

ಉಹುದ್ ಯುದ್ಧದಲ್ಲಿ ಪೈಗಂಬರರ 70 ಅನುಯಾಯಿಗಳು ಹುತಾತ್ಮರಾದರು. ಅವರ ವಿಧವೆಯರ ಮತ್ತು ಅನಾಥಮಕ್ಕಳ ಪ್ರಶ್ನೆ ಎದುರಾಯಿತು. ವಿಧವೆಯರು ಮತ್ತು ಯುದ್ಧದಲ್ಲಿ ಸೆರೆಸಿಕ್ಕ ಮಹಿಳೆಯರು ಗೌರವಯುತ ಜೀವನ ಸಾಗಿಸಲು ಸಾಧ್ಯವಾಗುವ ಉದ್ದೇಶದಿಂದ ನ್ಯಾಯಪಾಲನೆಯೊಂದಿಗೆ ನಾಲ್ಕರವರೆಗೆ ಬಹುಪತ್ನಿತ್ವವನ್ನು ಜಾರಿಗೆ ತರಲಾಯಿತು. (ಈ ಮೊದಲು ಅರಬರು ಬೇಕಾದಷ್ಟು ಪತ್ನಿಯರನ್ನು ಹೊಂದುವ ಅವಕಾಶವಿತ್ತು) ಒಂದು ವೇಳೆ ಮದುವೆಯಾಗದೆ ವಿಧವೆಯರನ್ನು ಮತ್ತು ತಬ್ಬಲಿಗಳನ್ನು ಚೆನ್ನಾಗಿ ನೋಡಿಕೊಂಡರೆ ಕುರಾನ್ ಪ್ರಕಾರ ಆತ ಆದರ್ಶ ಮುಸ್ಲಿಮನಾಗುವನು. ಕುರಾನ್ ದೃಷ್ಟಿಯಲ್ಲಿ ಏಕಪತ್ನಿತ್ವವೇ ಆದರ್ಶವಾಗಿದೆ.


ಪೈಗಂಬರರಿಗೆ ಮಹಿಳೆಯರ ಬಗ್ಗೆ ಅತೀವ ಗೌರವವಿತ್ತು. ಗಂಡಂದಿರು ಹೆಂಡಂದಿರರನ್ನು ಹಿಂಸಿಸುವುದಕ್ಕಿಂತ ತಲಾಖ್ ಕೊಡುವುದೇ ಸಮಂಜಸವಾದ ಕಾಲ ಅದಾಗಿತ್ತು. ಆದರೆ ದೇವರು ಅನುಮತಿ ನೀಡಿದ ಎಲ್ಲವುಗಳಲ್ಲಿ ಆತ ಇಷ್ಟಪಡದ ಕಾರ್ಯವೆಂದರೆ ತಲಾಖ್ ಎಂದು ಪೈಗಂಬರರು ಹೇಳಿದ್ದಾರೆ.

ಅವರಿಗೆ ವೈರಿಗಳ ಬಗ್ಗೆ ಕೂಡ ಕಾಳಜಿ ಇತ್ತು. ಕಂದಕ ಯುದ್ಧದಲ್ಲಿ ವಿರೋಧಿ ಮಕ್ಕಾ ಪಟ್ಟಣದವರಿಗೆ ಹೆಚ್ಚಿನ ಹಾನಿಯಾಯಿತು. ಮಕ್ಕಾ ಬರಗಾಲ ಪೀಡಿತವಾದಾಗ ಪೈಗಂಬರರು ಅಲ್ಲಿನ ಬಡವರಿಗೆ ಹಂಚಲು 500 ಬಂಗಾರ ನಾಣ್ಯ ಮತ್ತು ಖರ್ಜೂರ ಕಳುಹಿಸಿದರು. ಪೈಗಂಬರರು ತಮ್ಮ ಬೃಹತ್ ಸಂಖ್ಯೆಯ ಅನುಯಾಯಿಗಳ ಜೊತೆ ಕ್ರಿಸ್ತಶಕ 630ರಲ್ಲಿ ಮಕ್ಕಾ ಪಟ್ಟಣದ ಮೇಲೆ ರಕ್ತಪಾತವಿಲ್ಲದೆ ವಿಜಯ ಸಾಧಿಸಿದರು. ಆದರೆ ತಮಗೆ ವಿಪರೀತ ಹಿಂಸೆ ನೀಡಿದ ಅಲ್ಲಿನ ಜನರ ಮೇಲೆ ಪ್ರತೀಕಾರದ ಕ್ರಮ ಕೈಗೊಳ್ಳಲಿಲ್ಲ, ಅವರಿಗೆ ಸಾರ್ವಜನಿಕ ಕ್ಷಮೆ (ಪಬ್ಲಿಕ್ ಅಮ್ನೆಸ್ಟಿ) ಘೋಷಿಸಿದರು.

ಇಸ್ಲಾಂ ಧರ್ಮದ ಸಂಸ್ಥಾಪಕ ಮುಹಮ್ಮದ್ ಪೈಗಂಬರರು ರಾಜಾಧಿರಾಜರಾಗಿ ಮೆರೆಯಬಹುದಿತ್ತು, ಆದರೆ ಅವರು ನಿರಾಡಂಬರ ಜೀವನ ಸಾಗಿಸಿದರು. ಅವರು ಮಣ್ಣಿನ ಗೋಡೆಯ ಚಪ್ಪರದಲ್ಲಿ ವಾಸಿಸುತ್ತಿದ್ದರು. ತಮ್ಮ ಕೆಲಸವನ್ನು ತಾವೇ ಮಾಡುತ್ತಿದ್ದರು. ಕೂಲಿಗಳ ಜೊತೆ ಕೂಲಿಯಾಗಿ ದುಡಿದು ಕಾಯಕದ ಮಹತ್ವವನ್ನು ಎತ್ತಿಹಿಡಿದರು. ತಮ್ಮ ಚಪ್ಪಲಿಗಳನ್ನು ತಾವೇ ಹೊಲಿದುಕೊಂಡು ಯಾವ ಕೆಲಸವೂ ಕೀಳಲ್ಲ ಎಂಬುದನ್ನು ತೋರಿಸಿಕೊಟ್ಟರು.


ದೇವಾ ನನ್ನನ್ನು ಯಾವಾಗಲೂ ಬಡತನದಲ್ಲೇ ಇಡು ಎಂದು ಪ್ರಾರ್ಥಿಸುತ್ತಿದ್ದರು. ಅವರು ಗುಂಪಿನಲ್ಲಿ ಗುರುತಿಸಲಿಕ್ಕೆ ಸಾಧ್ಯವಾಗದಷ್ಟು ಸರಳವಾಗಿದ್ದರು. ಅವರ ಬಟ್ಟೆ ಬಡವರು ಧರಿಸುವ ಬಟ್ಟೆಯಾಗಿತ್ತು. ಅವರು ಎಂದೂ ಹೊಟ್ಟೆತುಂಬ ಊಟ ಮಾಡಲಿಲ್ಲ, ತನ್ನ ನೆರೆಯವನು ಉಪವಾಸವಿದ್ದಾಗ ಹೊಟ್ಟೆತುಂಬ ಉಣ್ಣುವವನು ಮುಸ್ಲಿಮನಲ್ಲ ಎಂದು ಅವರು ಹೇಳಿದರು. ಕೋಮುವಾದ ಎಂದರೆ ಒಬ್ಬನು ತನ್ನವರಿಗೆ ಅವರ ಅಕ್ರಮ ಕಾರ್ಯಗಳಲ್ಲಿ ನೆರವಾಗುವುದು ಎಂದು ಅವರು ಸ್ಪಷ್ಟಪಡಿಸಿದರು. ಒಬ್ಬ ಮನುಷ್ಯನನ್ನು ಅನ್ಯಾಯವಾಗಿ ಕೊಂದವನು ಸಮಸ್ತ ಮಾನವ ಕುಲವನ್ನು ಕೊಂದಂತೆ ಮತ್ತು ಒಬ್ಬನಿಗೆ ಜೀವದಾನ ಮಾಡಿದವನು ಸಮಸ್ತ ಮಾನವ ಕುಲಕ್ಕೆ ಜೀವದಾನ ಮಾಡಿದಂತೆ ಎಂದು ಅವರು ಸಾರಿದರು. ಎದುರು ಬಂದ ಬಡವರಿಗೆ ಮತ್ತು ಮಕ್ಕಳಿಗೆ ಅವರು ತಾವೇ ಮೊದಲು ಸಲಾಂ ಮಾಡುತ್ತಿದ್ದರು. ಕೂಲಿಗಳು ಕೆಲಸ ಮುಗಿಸಿ ಬೆವರು ಒರೆಸಿಕೊಳ್ಳುವ ಮೊದಲೇ ಅವರಿಗೆ ಕೂಲಿ ಕೊಟ್ಟು ಕಳಿಸಿರಿ ಎಂದು ಅವರು ತಿಳಿಸಿದರು.

ಕ್ರಿಸ್ತಶಕ 632ರಲ್ಲಿ ಮದೀನಾದಿಂದ ಮಕ್ಕಾಗೆ ಕೊನೆಯ ಹಜ್ ಯಾತ್ರೆ ಮಾಡಿದ ನಂತರ ಪೈಗಂಬರರು ಇಹಲೋಕದ ಯಾತ್ರೆ ಮುಗಿಸಿದರು. ಆದರೆ ಅವರು ಮಾನವಕುಲದ ಹೆಮ್ಮೆಯಾಗಿ ವಿಶ್ವದ ಮಾನವತಾವಾದಿಗಳೆಲ್ಲರ ಮನದಲ್ಲಿ ಅಮರರಾಗಿದ್ದಾರೆ.



- ರಂಜಾನ್ ದರ್ಗಾ

ಎಂಟೈರ್ ಪೊಲಿಟಿಕಲ್ ಸೈನ್ಸ್ ಓದಿರುವ ಮೋದಿ ಪ್ರಮಾದಗಳು



ಆರೆಸ್ಸೆಸ್‌ನಲ್ಲಿ 'ಸಂಘ್ ಪ್ರಚಾರಕ್' ಎಂಬ ಒಂದು ಮುಖ್ಯ ಹುದ್ದೆಯನ್ನು ಅದರ ನಿಷ್ಠ ಸದಸ್ಯರಿಗೆ ಕೊಡಲಾಗುತ್ತದೆ. ಇವರ ಏಕೈಕ ಜವಾಬ್ದಾರಿಯೆಂದರೆ ಆರೆಸ್ಸೆಸ್ ಸಿದ್ಧಾಂತಗಳನ್ನು ಪ್ರಚಾರ ಮಾಡುವುದು ಎಂದು ಜನರು ತಿಳಿದಿದ್ದರು. ಆದರೆ ಈಗ ಈ ಪ್ರಚಾರಕ್ ಹುದ್ದೆಯಲ್ಲಿರುವವರ ಮುಖ್ಯ ಕೆಲಸ ಮೋದಿ ಸರಕಾರದ ಬಗ್ಗೆ ಸುಳ್ಳು ಹೊಗಳಿಕೆಗಳನ್ನು ಹಾಗೂ ಹಿಂದೂ ಪುರಾಣಗಳ ಕುರಿತು ವೈದಿಕರ ಪರ ತಿರುಚಿದ ಕತೆಗಳನ್ನು ತಮ್ಮ ಸುಳ್ಳಿನ ಕಾರ್ಖಾನೆಗಳಲ್ಲಿ ಉತ್ಪಾದಿಸಿ ಅದನ್ನು ದೃಶ್ಯ ಮತ್ತು ಪ್ರಿಂಟ್ ಮಾಧ್ಯಮ ಹಾಗೂ ಸೋಷಿಯಲ್ ಮೀಡಿಯಾ ಮುಖಾಂತರ ಪ್ರಸಾರ ಮಾಡುವುದು ಅಥವಾ ವಿದೇಶ ಭೇಟಿಯ ಸಮಯ ಮೋದಿಯ ಬಾಯಿಂದ ಹೇಳಿಸುವುದು.

ಮೋದಿಯ ಇರಾನ್ ಭೇಟಿಯ ವೇಳೆ ಈ ಕೇಸರಿ ಪ್ರಚಾರಕ್ ಗ್ಯಾಂಗ್ ದೊಡ್ಡ ಸುಳ್ಳುಗಳನ್ನು ಮಾಧ್ಯಮದಲ್ಲಿ ತೂರಿಬಿಟ್ಟಿತ್ತು. ಇರಾನ್ ದೇಶದಿಂದ ಹಿಂದಿನ ಸರಕಾರಗಳು ಪಡೆದ 40,000 ಕೋಟಿ ಸಾಲವನ್ನು ಭಾರತದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಮೋದಿ ಸರಕಾರ ಬಡ್ಡಿಸಹಿತ ತೀರಿಸಿದೆಯೆಂದು ಅಪ್ಪಟ ಸುಳ್ಳೊಂದನ್ನು ಕೇಸರಿ ಪ್ರಚಾರಕ್ ಗ್ಯಾಂಗ್ ಸೋಷಿಯಲ್ ಮೀಡಿಯಾದಲ್ಲಿ ಹರಿಯಬಿಟ್ಟಿತ್ತು. ಅಗ್ನಿಯನ್ನು ಪೂಜಿಸುವ ಇರಾನ್ ಮತ್ತು ಭಾರತದ ಸಂಬಂಧ ಹತ್ತು ಸಾವಿರ ವರ್ಷ ಹಳೆಯದೆಂದು ಈ ಗ್ಯಾಂಗ್ ಕಥೆ ಕಟ್ಟಿ ಮೋದಿಯಿಂದ ಹೇಳಿಸಿತ್ತು.

ಅಮೆರಿಕದಲ್ಲಿ ಕಳೆದ ವಾರ ಮೋದಿ ಅಲ್ಲಿಯ ಸಂಸತ್ತಿನಲ್ಲಿ ಮಾಡಿದ ಭಾಷಣದ ಬಗ್ಗೆ ಅಲ್ಲಿಯವರು ಎದ್ದು ನಿಂತು ಕರತಾಡನ ಮಾಡಿದ ಬಗ್ಗೆ ಅತ್ಯಂತ ಉತ್ಪ್ರೇಕ್ಷಿತ ವರದಿಗಳು ಪ್ರಕಟವಾಗಿದೆ. ಸಭಿಕರು ಎದ್ದು ನಿಂತು ಚಪ್ಪಾಳೆ ತಟ್ಟುವುದು ಅಲ್ಲಿಯ ಸಂಸತ್ತಿನ ಹಳೆಯ ಶಿಷ್ಟಾಚಾರ ಎಂಬುದೂ ಈ ಸಂಘೀ ಮೀಡಿಯಾಗಳಿಗೆ ಗೊತ್ತಿಲ್ಲ. ಮಾಲ್ಡೀವ್ಸ್‌ನಂತಹ ಅತ್ಯಂತ ಸಣ್ಣ ದೇಶದ ಪ್ರಧಾನಿಯೂ ಅಮೆರಿಕದ ಸಂಸತ್ತಿನಲ್ಲಿ ಭಾಷಣ ಮಾಡಿದರೆ ಕೊನೆಯಲ್ಲಿ ಎಲ್ಲಾ ಸಭಿಕರು ಎದ್ದು ನಿಂತು ಕರತಾಡನ ಮಾಡುತ್ತಾರೆ ಎಂಬುದೂ ಮೋದಿಭಕ್ತರಿಗೆ ಗೊತ್ತಿಲ್ಲ. ಅಷ್ಟೇ ಅಲ್ಲ ಮೋದಿಯ ಈ ಕೊನೆಯ ಒಂದೇ ದೃಶ್ಯವನ್ನು ಬೇರೆಬೇರೆ ಎಂಟು ಕೋನಗಳಿಂದ ಚಿತ್ರೀಕರಿಸಿ ಮೋದಿಯವರ ಭಾಷಣದುದ್ದಕ್ಕೂ ಎಂಟು ವಿಷಯಗಳ ಬಗ್ಗೆ ಎಂಟು ಸಾರಿ ಅಲ್ಲಿಯ ಸಭಿಕರು ಎದ್ದು ನಿಂತು ಚಪ್ಪಾಳೆ ತಟ್ಟಿದರು ಎಂಬಂತೆ ಭಾವನೆ ಹುಟ್ಟಿಸುವ ಪ್ರಯತ್ನ ಮೋದಿಯ ಸೈಬರ್ ಪ್ರಚಾರಕರು ವಾಟ್ಸಪ್-ಫೇಸ್‌ಬುಕ್ಕಿನಲ್ಲಿ ಮಾಡುತ್ತಿದ್ದಾರೆ. ಆದರೆ ಇಂತಹ ಎಂಟು ಕೋನಗಳಿಂದ ಚಿತ್ರಿಸಿದ ಒಂದೇ ದೃಶ್ಯವನ್ನು ಫೋಟೋಷಾಪ್ ಮಾಡಿದ್ದನ್ನು ಅರಿಯದಷ್ಟು ದಡ್ಡರಲ್ಲ ಈಗಿನ ಸ್ಮಾರ್ಟ್‌ಫೋನ್ ಹಾಗೂ ಕಂಪ್ಯೂಟರ್ ಬಳಕೆದಾರರು.

ಭಾರತದಿಂದ ಅಮೆರಿಕಕ್ಕೆ ಕದ್ದು ಸಾಗಿಸಿದ್ದ 200 ಕಲಾಕೃತಿಗಳನ್ನು ಇತ್ತೀಚೆಗೆ ಅಮೆರಿಕದವರು ಭಾರತಕ್ಕೆ ಮರಳಿಸಿದರು. ತಮಿಳುನಾಡು ಪೊಲೀಸರ ಕೋರಿಕೆಯ ಮೇರೆಗೆ ಅಮೆರಿಕದ ಪೊಲೀಸರು ತಮ್ಮಲ್ಲಿಗೆ ಭಾರತದಿಂದ ಕಳ್ಳದಾರಿಯಿಂದ ಬಂದಿರಬಹುದಾದ ಇಂತಹ ಎರಡು ಸಾವಿರ ಕಲಾಕೃತಿಗಳ ಪಟ್ಟಿ ಮಾಡಿದ್ದಾರೆ. ಭಾರತದ ಪುರಾತನ ಕಲಾಕೃತಿಗಳನ್ನು ಕದ್ದು ವಿದೇಶಕ್ಕೆ ಸಾಗಿಸುವ ಮಾಫಿಯಾದ ಮುಖ್ಯಸ್ಥ ಒಬ್ಬ ಮಾರ್ವಾಡಿ ಜೈನ ಆಗಿದ್ದು ಈಗ ಅವನು ಅಮೆರಿಕ ಪೊಲೀಸರ ವಶದಲ್ಲಿದ್ದಾನೆ. ತಮಿಳುನಾಡು ಮತ್ತು ಅಮೆರಿಕದ ಪೊಲೀಸರು ಈ ಬಗ್ಗೆ 2009 ರಲ್ಲಿಯೇ ತನಿಖೆ ಶುರು ಮಾಡಿದ್ದರು. ಹೀಗೆ ಪತ್ತೆಯಾದ ಎರಡು ಸಾವಿರ ಕಲಾಕೃತಿಗಳಲ್ಲಿ ಕೇವಲ ಇನ್ನೂರು ಕಲಾಕೃತಿಗಳ ಮೂಲವನ್ನು ಗುರುತು ಹಚ್ಚುವ ಕಾರ್ಯ ಏಳುವರ್ಷಗಳ ಸತತ ಶ್ರಮದಿಂದ ಈಗಷ್ಟೇ ಮುಗಿದಿದ್ದರಿಂದ ಅದನ್ನು ಭಾರತಕ್ಕೆ ಅಧಿಕೃತವಾಗಿ ಮರಳಿಸುವಾಗಲೇ ಮೋದಿ ಅಲ್ಲಿ ಹೋಗಿದ್ದು ಕಾಕತಾಳೀಯವಾಗಿತ್ತು ಅಷ್ಟೇ. ಆದರೆ ಮೋದಿ ಭಕ್ತರು ಅದರ ಕ್ರೆಡಿಟ್ ಮೋದಿಗೆ ಕೊಟ್ಟು ದೊಡ್ಡ ಪ್ರಚಾರ ಮಾಡಿದರು.

ಈ ಬಗ್ಗೆಯೂ ಸಂಘಿ ಕುಹಕಿಗಳು ಜೋಕ್ ಹೆಣೆದು ಭಾರತದವರೂ ಅಮೆರಿಕದಂತಹದ್ದೇ ಔದಾರ್ಯ ತೋರಿಸಿ ಇಟಲಿಗೆ ಅವರ ಹಳೆಯ ಕಲಾಕೃತಿಗಳಾದ ಸೋನಿಯಾ ಮತ್ತು ರಾಹುಲರನ್ನು ಮರಳಿಸಬೇಕೆಂದು ವಾಟ್ಸಪ್‌ನಲ್ಲಿ ಜೋಕ್ ಹರಿಯಬಿಟ್ಟರು. ಅದಕ್ಕೆ ಉತ್ತರವಾಗಿ ಕೆಲವರು ಸೋನಿಯಾಗಿಂತ ಹೆಚ್ಚು ಹಳೆಯದಾದ ಪಾಕಿಸ್ತಾನ ಮೂಲದ ಎಲ್.ಕೆ.ಅಡ್ವಾಣಿ ಎಂಬ ಕಲಾಕೃತಿಯನ್ನು ಇಂತಹದ್ದೇ ಔದಾರ್ಯ ತೋರಿಸಿ ಮೋದಿ ಸರಕಾರವು ಪಾಕಿಸ್ತಾನಕ್ಕೆ ಮರಳಿಸಬೇಕು ಹಾಗೂ ಜತೆಗೆ ಬೋನಸ್ ಎಂಬಂತೆ ಸೆನ್ಸಾರ್ ಬೋರ್ಡಿನ ಮೋದಿಭಕ್ತ ಪೆಹ್ಲಾಜ್ ನಿಹಲಾನಿ ಎಂಬ ಕರಾಚಿ ಮೂಲದ ಸಿಂಧಿಯನ್ನು ಪಾಕಿಸ್ತಾನಕ್ಕೆ ಮರಳಿಸುವ ಔದಾರ್ಯ ತೋರಿಸಬೇಕೆಂದು ಸೂಕ್ತ ತಿರುಗೇಟು ನೀಡಿದ್ದಾರೆ.

ಮೋದಿ ಹೋದಲೆಲ್ಲಾ ಭಾರತದ ಪುರಾಣ ಮತ್ತು ಇತಿಹಾಸದ ಬಗ್ಗೆ ಹಾಸ್ಯಾಸ್ಪದ ಹೇಳಿಕೆ ಕೊಟ್ಟು ಭಾರತದ ಮಾನ ಕಳೆಯುವುದು ಸಂಘಿಪರ ಮೀಡಿಯಾದವರು ವರದಿ ಮಾಡುತ್ತಿಲ್ಲ. ಅಮೆರಿಕದವರಂತೆ ತುಂಡುಗೆ ಉಟ್ಟು ಕೈಯಲ್ಲಿ ಪರ್ಸ್ ಹಿಡಿದಿರುವ ಎರಡು ಸಾವಿರ ವರ್ಷ ಹಳೆಯ ಶಿಲ್ಪಗಳು ಒಡಿಶಾದ ಕೊನರ್ಕಿನಲ್ಲಿ ಇದೆಯೆಂದು ಮೋದಿ ಹೇಳಿದ್ದಾರೆ (ಕೊನರ್ಕ್ ದೇವಳ ಕಟ್ಟಿಸಿದ್ದು ಕೇವಲ 750 ವರ್ಷಗಳ ಹಿಂದೆ, ಇದೂ ಭಾರತದ ಪ್ರಧಾನಿಗೆ ಗೊತ್ತಿಲ್ಲ!). ಪಾಂಡವರು ವನವಾಸದಲ್ಲಿದ್ದಾಗ ಆಸ್ಟ್ರೇಲಿಯಾದಲ್ಲಿ ಶಮೀ ವೃಕ್ಷದಲ್ಲಿ ಅಸ್ತ್ರ ಬಚ್ಚಿಟ್ಟಿದ್ದಕ್ಕೆ ಅಸ್ತ್ರ-ಲಿಯಾ ಹೆಸರು ಬಂತೆಂಬುದು ಮೋದಿ ಉವಾಚ. ದ್ರೌಪದಿ ಸೀರೆ-ಲಂಗ ತೊಟ್ಟ ಸ್ಥಳ ಸೀರಿಲಂಗವಾಗಿ ಕೊನೆಗೆ ಶ್ರೀಲಂಕಾ ಆಯಿತಂತೆ. ಹಾಗೆಯೇ ಪಾಂಡವರು ಈಜಿಪ್ಟಿನಲ್ಲಿ ಈಜಾಡಿದ್ದು, ರಶಿಯಾದಲ್ಲಿ ರಸಗುಲ್ಲಾ ತಿಂದಿದ್ದು, ಸಿರಿಯಾದಲ್ಲಿ ದ್ರೌಪದಿ ಸೀರೆ ಕೊಂಡಿದ್ದು, ಮ್ಯಾಕ್ಸಿಕೋದಲ್ಲಿ ಮ್ಯಾಕ್ಸಿ ಕೊಂಡಿದ್ದು, ಅರ್ಜೆಂಟೀನಾದಲ್ಲಿ ಅರ್ಜಂಟಾಗಿ ಕಕ್ಕಸಿಗೆ ಹೋಗಿದ್ದು, ಬೆರ್ಮುಡಾ ಟ್ರ್ಯಾಂಗಲ್ಲಿನಲ್ಲಿ ಬೆರ್ಮುಡಾ ತೊಟ್ಟಿದ್ದು, ಥೈಲ್ಯಾಂಡಿನಲ್ಲಿ ಥೈಥೈ ಕುಣಿದದ್ದು, ಕೊಲಂಬಿಯಾದಲ್ಲಿ ಕೋಲು ಊರಿದ್ದು, ಮಲಯಾದಲ್ಲಿ ಮಲ್ಲೆ ತಿಂದಿದ್ದು, ಸೋಮಾಲಿಯಾದಲ್ಲಿ ಸೋಮರಸ ಕುಡಿದಿದ್ದು, ಮಾಲ್ಡೀವ್ಸ್‌ನಲ್ಲಿ ಮಾಲೆ ತೊಟ್ಟದ್ದು, ಚಿಲಿಯಲ್ಲಿ ಚಿಲುಮೆ ಸೇದಿದ್ದು, ಇಟಲಿಯಲ್ಲಿ ಇಡ್ಲಿ ತಿಂದಿದ್ದು, ಸಿಂಗಾಪುರದಲ್ಲಿ ಸೇಂಗಾ ತಿಂದಿದ್ದು, ಜಪಾನಿನಲ್ಲಿ ಜಪತಪ ಮಾಡಿದ್ದು, ಕೊರಿಯಾದಲ್ಲಿ ಕೋಳಿ ತಿಂದಿದ್ದು, ಚೀನಾದಲ್ಲಿ ಚಿನ್ನ ಕೊಂಡಿದ್ದು, ಉತ್ತರ-ದಕ್ಷಿಣ ಧ್ರುವದಲ್ಲಿ ಧ್ರುವ ಋಷಿಯನ್ನು ಭೇಟಿ ಮಾಡಿದ್ದು, ಹೀಗೆ ವನವಾಸದಲ್ಲಿ ಪಾಂಡವರು ಏಳೂ ಖಂಡ ಸುತ್ತಿರುವರಂತೆ. ಎಂಟೈರ್ ಪೊಲಿಟಿಕಲ್ ಸೈನ್ಸ್ ಎಂಬ ವಿಷಯದಲ್ಲಿ ಎಂ.ಎ. ಪದವಿ ಪಡೆದ ಮೋದಿಯಿಂದ ಇಂತಹ ಪ್ರಮಾದಗಳಾಗುವುದು ಆಶ್ಚರ್ಯವಲ್ಲ ಬಿಡಿ.

ಸ್ವಚ್ಛ ಭಾರತ್ ನಾಟಕವಾಡಿ ತೆರಿಗೆದಾರರ ಮೇಲೆ ಸೆಸ್ ವಿಧಿಸಿದಂತೆ, ಕೃಷಿಯ ಹೆಸರಲ್ಲಿ ಕೃಷಿ ಕಲ್ಯಾಣ್ ಸೆಸ್ ಹೇರಿದಂತೆ ಯೋಗಾ ಸೆಸ್ ಎಂಬ ಹೊಸ ತೆರಿಗೆ ಬರಲಿದೆಯಂತೆ. ವಿಶ್ವಯೋಗ ದಿನಕ್ಕಾಗಿ ಮೋದಿ ಸರಕಾರ ಖರ್ಚು ಮಾಡಿರುವ 1000 ಕೋಟಿ ರೂಪಾಯಿ ವಸೂಲು ಮಾಡಬೇಕಲ್ಲವೇ!

-ಆರ್. ಭಾಸ್ಕರ್, ಬೆಂಗಳೂರು

11 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ, ಒಬ್ಬನಿಗೆ ಪ್ರಧಾನಿ ಹುದ್ದೆ

2002 ರ ಗುಜರಾತ್ ಕೋಮು ಗಲಭೆಯಲ್ಲಿ ಅಹ್ಮದಾಬಾದಿನ ಗುಲ್ಬರ್ಗ್ ಸೊಸೈಟಿಯಲ್ಲಿ 69 ಜನರ ಕಗ್ಗೊಲೆಯ ಸಂಬಂಧದಲ್ಲಿ ಕೋರ್ಟ್ ತೀರ್ಪಿನ ಬಗ್ಗೆ ಬಿಜೆಪಿ ಪಕ್ಷದವರೇ ಆದ ಅರುಣ್ ಶೌರಿಯವರು ನಿಷ್ಠೂರವಾಗಿ ಹೇಳಿದ್ದನ್ನು ಮೆಚ್ಚಲೇ ಬೇಕು. ಶೌರಿಯವರು ತಮ್ಮ ಟ್ವೀಟರ್‌ನಲ್ಲಿ ಹೇಳಿದ್ದು ಹೀಗೆ: 'ಹನ್ನೊಂದು ಜನ ಅಪರಾಧಿಗಳಿಗೆ ಜೀವಾವಧಿ ಸೆರೆಮನೆ ವಾಸ, 13 ಅಪರಾಧಿಗಳಿಗೆ ಏಳು ವರ್ಷ ಸೆರೆಮನೆ ವಾಸ ಹಾಗೂ ಒಬ್ಬ ಅಪರಾಧಿಗೆ ಮಾತ್ರ ಪ್ರಧಾನಿ ಮನೆಯ ವಾಸ!'

ಆದರೂ ಶೌರಿಯವರು ಮರೆತಿರುವ ಇನ್ನೊಂದು ವ್ಯಕ್ತಿಯಿದೆ- ಸೆರೆಮನೆಯ ಬದಲು ಅರಮನೆ ವಾಸ ಅನುಭವಿಸುತ್ತಿರುವ ಪಕ್ಷವೊಂದರ ಅಧ್ಯಕ್ಷನಾಗಿರುವ ಇನ್ನೊಬ್ಬ ಹಿಂಸಾವಾದಿ ಜೈನ ಅಪರಾಧಿಯೂ ಇದ್ದಾನೆ!

-ರಾಮಕೃಷ್ಣ ಕುಲಾಲ್, ಬೆಂಗಳೂರು

'ಉಡ್ತಾ ಪಂಜಾಬ್' ತರಹ 'ತೇಲ... ತುಲುನಾಡು' ಸಿನಿಮಾ ಮಾಡಬೇ...


'ಉಡ್ತಾ ಪಂಜಾಬ್' ಹಿಂದಿ ಚಲಚಿತ್ರದ ವಿವಾದ ಪ್ರಸಿದ್ಧಿ ಪಡೆದ ಮೇಲೆ ಪಂಜಾಬಿನ ಹಾವಳಿ ಕುರಿತು ಈಗ ದೇಶದೆಲ್ಲೆಡೆ ಚರ್ಚೆ ಶುರು... ಪಂಜಾಬಿನಂತೆ ನಮ್ಮ ಕರಾವಳಿಯ ಮಂಗಳೂರು... ಉಡುಪಿ ಜಿಲ್ಲೆಗಳಲ್ಲೂ ಡ್ರಗ್ ಹಾವಳಿ ಘೋರ... ಕರಾವಳಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಇರುವ ... ಖಾಸಗಿ ಕಾಲೇಜುಗಳ ಧನಿಕ ವಿದ್ಯಾರ್ಥಿಗಳಿಗೆ ಮೊದ... ಸೆಮಿಸ್ಟರಿನಲ್ಲಿಯೇ ಡ್ರಗ್ ಅಭ್ಯಾಸ ಮಾಡಿಸುವ ... ಜಾಲವೇ ಮಂಗಳೂರು-ಮಣಿಪಾಲದಲ್ಲಿವೆ... ಬೆಂಗಳೂರಿನಲ್ಲಿ ಡ್ರಗ್ ವಿತರಣೆಗೆ ನೈಜೀರಿಯಾ ... ಇದ್ದರೆ ಮಂಗಳೂರಿನಲ್ಲಿ ಮುಂಬೈ ಕನೆಕ್ಷನ್ ಸ್ಥಳೀಯರದೇ ಗ್ಯಾಂಗುಗಳಿವೆ.

ಕರಾವಳಿಯ ಖಾಸಗಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಮಾತ್ರವಲ್ಲ ವಿದ್ಯಾರ್ಥಿನಿಯರೂ ಲೈಫ... ಡ್ರಗ್ಸ್ ಎಂಬ ಮಾದಕ ದ್ರವ್ಯದ ದಾಸರಾಗಿದ್ದಾರೆ. ಮೆಡಿಕಲ್ ಶಾಪುಗಳು ಹೆಸರಿಗೆ ಮಾತ್ರ ಔಷಧ ... ಎಂಬ ಬೋರ್ಡ್ ಹಾಕಿಕೊಂಡು ಕೇವಲ ಲೈಫ... ಡ್ರಗ್ಸ್ ಮಾರುತ್ತವೆ. ಪಾನ್-ಬೀಡಾ ಗೂಡಂಗಡಿ... ಗಾಂಜಾ ಮಾರುತ್ತವೆ. ಡ್ರಗ್ ಮಾಫಿಯಾಗಳ ... ರಾಜಕಾರಣಿಗಳು ಹಾಗೂ ಪೊಲೀಸರೂ ಇದ್ದಾರಂತೆ... ವಿತರಣೆಗೆ ಧಾರ್ಮಿಕ ಮುಖವಾಡದ ದಳ-ಸೇ... ಇವೆ. ಕರಾವಳಿ ಯಲ್ಲಿ ಅನೈತಿಕ ಪೊಲೀಸ್‌ಗಿರಿ ಮ... ಪುಂಡರ ಗುಂಪು ಗಳೆಲ್ಲಾ ಗಾಂಜಾದ ದಾಸರೇ ಆ... ಹಿಂದೂ ಮಾಫಿಯಾ ಮತ್ತು ಮುಸ್ಲಿಂ ಮಾಫಿಯ... ನಡುವೆ ಡ್ರಗ್ಸ್ ಮಾರುವ ಏರಿಯಾದ ಬಗ್ಗೆ ... ಹುಟ್ಟಿ ಹೊಡೆದಾಟ-ಕೊಲೆ ಆದರೆ ಆಗ ಅದಕ್ಕೆ ಕೋ... ಬಣ್ಣ ಬಳಿಯಲಾಗುತ್ತದೆ.

'ಉಡ್ತಾ ಪಂಜಾಬ್' ಎಂಬ ಹಿಂದಿ ಚಿತ್ರ... 'ತೇಲುವ ತುಲುನಾಡು' ಅಥವಾ 'ಹಾರುವ ಕರಾ... (ಕರಾವಳಿ)' ಎಂಬ ಕನ್ನಡ ಚಲಚಿತ್ರ ನಿರ್ಮಿ... ನಿರ್ಮಾಪಕರಿಗೆ ಒಳ್ಳೆಯ ಲಾಭ ಸಿಗಬಹುದು.

-ಜಿ.ರವಿಕಿರಣ, ಮೈ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೆ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ...



ಜಾತಿಯ ಕುರಿತು ಕಸ್ಟಮೈಜ್ಡ್ ಮೈಂಡ್‌ಸೆಟ್ ಅಳವಡಿಸಬೇಕ...

ದೇಶದಲ್ಲಿ ಸುಮಾರು 5000 ವರ್ಷಗಳ ಹಿಂದಿನಿಂದಲೇ ಜನರು ತಮ್ಮ ಮಾನಸಿಕ, ದೈಹಿಕ ಹಾಗೂ ಆಧ್ಯಾತ್ಮಿಕ ಆರೋಗ್ಯಕ್ಕಾಗಿ ಯೋಗವನ್ನು ನಿತ್ಯ ಜೀವನದಲ್ಲಿ ರೂಢಿಸಿಕೊಂಡಿರುವ ಬಗ್ಗೆ ಇತಿಹಾಸದಿಂದ ತಿಳಿಯುತ್ತದೆ ಎಂದು ಬಾಬಾ ಮೋದಿ ಕಂಪನಿ ಪ್ರಚಾರ ಮಾಡುತ್ತಿದೆ. ಹಾಗಾದರೆ 5000 ವರ್ಷಗಳ ಹಿಂದೆ ಯೋಗದ ಬಗ್ಗೆ ಯಾವ ಭಾಷೆಯಲ್ಲಿ ಇತಿಹಾಸ ಬರೆಯಲಾಗಿದೆ? ಆಗ ಭಾರತದಲ್ಲಿ ಯಾವ ಲಿಖಿತ ಭಾಷೆ ಪ್ರಚಾರದಲ್ಲಿ ಇತ್ತು? ಅದು ಪಾಲಿ ಅಥವಾ ಪ್ರಾಕೃತ ಭಾಷೆಯಾಗಿತ್ತೇ? ಯಾಕೆಂದರೆ ಸಂಸ್ಕೃತ ಭಾಷೆಗೆ ಪಾಲಿಯಷ್ಟು ದೀರ್ಘ ಇತಿಹಾಸವಿಲ್ಲ, ಲಿಖಿತ ಸಂಸ್ಕೃತದ ದಾಖಲೆ ಅಥವಾ ಶಾಸನ ನಮಗೆ ಸಿಗುವುದು ಕೇವಲ ಕ್ರಿ.ಶ. 5ನೇ ಶತಮಾನದ ನಂತರದ್ದು ಮಾತ್ರ ಎನ್ನುತ್ತಾರೆ ಸಂಶೋಧಕರು. ಸಂಸ್ಕೃತಕ್ಕೆ ಸ್ವಂತ ಲಿಪಿಯಿಲ್ಲದ್ದರಿಂದ ಅದು ಎರವಲು ಪಡೆದಿರುವುದು ಪಾಲಿ ಭಾಷೆಯ ನಾಗರಿಲಿಪಿಯನ್ನು. ಯೋಗದ ಪ್ರವರ್ತಕ ಪತಂಜಲಿ ಇದ್ದಿದ್ದು ಯಾವ ಕಾಲಘಟ್ಟದಲ್ಲಿ ಹಾಗೂ ಅವನು 5ನೇ ಶತಮಾನಕ್ಕೆ ಮುಂಚೆ ಇದ್ದರೆ ಅವನು ಸಂಸ್ಕೃತ ಭಾಷೆ ಬಳಸಿ ಯೋಗದ ಸೂತ್ರ ಬರೆದಿರುವನೇ? ಪತಂಜಲಿ ಯೋಗ ಕೇವಲ ಮನಸ್ಸಿಗೆ ಸಂಬಂಧಪಟ್ಟದ್ದಾಗಿದ್ದು ಅದರಲ್ಲಿ ದೈಹಿಕ ವ್ಯಾಯಾಮದ ಉಲ್ಲೇಖ ಇಲ್ಲ ಎನ್ನುವುದು ಸರಿಯೇ? ಪತಂಜಲಿ ಮೂಲತಃ ತಮಿಳುನಾಡಿನವ ಎಂಬ ನಂಬಿಕೆಯಿದ್ದರೂ ಅವನನ್ನು ಈಗಿನ ಉತ್ತರ ಪ್ರದೇಶದ ಗೋಂಡಾ ಜಿಲ್ಲೆಯವನು ಎಂದು ಪ್ರಚಾರ ಮಾಡುತ್ತಿರುವುದರ ಹಿಂದೆ ಯಾವ ದುರುದ್ದೇಶವಿದೆ?

ಕಂಪ್ಯೂಟರ್‌ನಲ್ಲಿ ಡಿಫಾಲ್ಟ್ ಸೆಟ್ಟಿಂಗ್ಸ್ ಇರುವಂತೆ ನಮ್ಮ ಮೆದುಳಿನಲ್ಲಿಯೂ ಕೆಲವು ಡಿಫಾಲ್ಟ್ ಸೆಟಿಂಗ್ಸ್ ತನ್ನಿಂದ ತಾನೇ ಉಂಟಾಗಿರುತ್ತವೆ. ನಮ್ಮ ಕುಟುಂಬ, ಪರಿಸರ, ಶಿಕ್ಷಣ, ಜಾತಿ, ಧರ್ಮ ಇವುಗಳ ಆಧಾರದಲ್ಲಿ ಈ ಡಿಫಾಲ್ಟ್ ಸೆಟಿಂಗ್ಸ್ ವಯಸ್ಸಿಗೆ ಅನುಗುಣವಾಗಿ ನಮ್ಮ ಮನಸ್ಸಿನಲ್ಲಿ ಕ್ರಮೇಣ ನಿರ್ಮಾಣವಾಗಿರುತ್ತವೆ. ಇದಕ್ಕೆ ಬೇಕಾದರೆ ಡಿಫಾಲ್ಟ್ ಮೈಂಡ್-ಸೆಟ್ (Default Mindset) ಎಂದು ಹೆಸರಿಸಬಹುದು. ನಮ್ಮಲ್ಲಿ ತನ್ನಿಂದ ತಾನೇ ಹುಟ್ಟಿರುವ ಜಾತಿಪ್ರೇಮ, ಭಾಷಾಭಿಮಾನ, ಧರ್ಮಾಭಿಮಾನ, ಊರಿನ ಅಭಿಮಾನ, ಕುಲದೇವರ ನಂಬಿಕೆ ಇವೆಲ್ಲಾ ಈ ಡಿಫಾಲ್ಟ್ ಸೆಟ್ಟಿಂಗ್ಗಿನ ಫಲ. ಅಂತೆಯೇ ನಮ್ಮಲ್ಲಿರುವ ಅನೇಕ ಜಾತಿ-ಧರ್ಮ-ಭಾಷೆ-ಆಹಾರ-ವಿದೇಶಿ ಸಂಸ್ಕೃತಿ ಇವುಗಳ ಬಗೆಗಿನ ಪೂರ್ವಾಗ್ರಹ ಮತ್ತು ದ್ವೇಷಗಳೂ ಈ ಡಿಫಾಲ್ಟ್ ಮೈಂಡ್‌ಸೆಟ್ಟಿನ ಪರಿಣಾಮ. ಹೆಚ್ಚಿನ ಜನರ ವರ್ತನೆ ಮತ್ತು ಜೀವನದಲ್ಲಿ ಅವರು ತೆಗೆದುಕೊಳ್ಳುವ ಹೆಚ್ಚಿನ ನಿರ್ಧಾರಗಳು ಅವರ ಮೆದುಳಿನಲ್ಲಿ ಉಂಟಾಗಿರುವ ಈ ಡಿಫಾಲ್ಟ್ ಸೆಟ್ಟಿಂಗ್ಗಿನ ಆಧಾರಿತವೇ ಆಗಿರುತ್ತದೆ.

ಭಾರತೀಯರಲ್ಲಿರುವ ಅಂತಹ ಒಂದು ಭಾರಿ ಡಿಫಾಲ್ಟ್ ಮೈಂಡ್‌ಸೆಟ್ ಎಂದರೆ ಹಳೆಯ ಎಲ್ಲಾ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿಯೇ ಇವೆ ಹಾಗೂ ಎಲ್ಲಾ ಪುರಾತನ ಜ್ಞಾನಿಗಳು ಕೇವಲ ಗಂಗಾ ತಟದಲ್ಲಿಯೇ ಹುಟ್ಟಿದ್ದು ಎಂಬುದು, ಅಂದರೆ ಎಲ್ಲರೂ ಆರ್ಯ-ವೈದಿಕ ಮೂಲದವರೇ ಆಗಿದ್ದರು ಎಂಬ ಪೂರ್ವನಿಶ್ಚಿತ ಅಭಿಪ್ರಾಯ. ಜತೆಗೆ ಪಾಪ-ಪುಣ್ಯಗಳ ಭಯ ಮತ್ತು ದೇವರ ಬಗೆಗಿನ ಯಾವುದೇ ನಂಬಿಕೆ-ಪರಂಪರೆ-ಮೌಢ್ಯಗಳನ್ನು ಪ್ರಶ್ನಿಸಬಾರದು ಎನ್ನುವುದು ಸಹ ಈ ಡಿಫಾಲ್ಟ್ ಮೈಂಡ್‌ಸೆಟ್ಟಿನ ಪರಿಣಾಮ. ವೈದಿಕ ಪುರಾಣ-ಇತಿಹಾಸದ ಬಗ್ಗೆ ಹಾಗೂ ಸಂಸ್ಕೃತ ಭಾಷೆಯ ಬಗ್ಗೆ ಭಾರತೀಯರ ಮೆದುಳಿನಲ್ಲಿ ತನ್ನಿಂದ ತಾನೇ ನಿರ್ಮಾಣವಾಗಿರುವ ಈ ಡಿಫಾಲ್ಟ್ ಸೆಟ್ಟಿಂಗ್ ಬದಲಿಸಿ ಕಸ್ಟಮೈಜ್ಡ್ ಸೆಟ್ಟಿಂಗ್ (Customized Settings) ಅಳವಡಿಸುವ ಕಾಲ ಈಗ ಬಂದಿದೆ. ಅದಕ್ಕಾಗಿ ಪೌರಾಣಿಕ ಮತ್ತು ಧಾರ್ಮಿಕ ಜ್ಞಾನ ಹಾಗೂ ಸಂಸ್ಕೃತಿ-ಸಂಸ್ಕಾರಗಳ ನೆಪದಲ್ಲಿ ನಮ್ಮ ತಲೆಯಲ್ಲಿ ಹಿರಿಯರು ತುರುಕಿರುವ ವಿಷಯಗಳ ಮೂಲವನ್ನೇ ಪ್ರಶ್ನಿಸುತ್ತಾ ಹೋಗಬೇಕು ಅಷ್ಟೇ. ಉದಾಹರಣೆಗೆ ಭಾರತೀಯ ನಾರಿಗೆ ಸೀರೆಯೇ ಸರಿ - ಎನ್ನುವ ಡಿಫಾಲ್ಟ್ ಮೈಂಡ್‌ಸೆಟ್ ಎಲ್ಲರಲ್ಲೂ ಇದೆ. ಆದರೆ ಈ ಸೀರೆ ಮತ್ತು ಬ್ಲೌಸ್ ಎರಡೂ ಭಾರತೀಯ ಮೂಲದ್ದು ಅಲ್ಲವೇ ಅಲ್ಲ, ಅದು 12-13ನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದು ಎಂದು ಎಷ್ಟು ಜನರಿಗೆ ಗೊತ್ತಿದೆ?

ಮನುಷ್ಯನಲ್ಲಿ ಪ್ರಶ್ನಿಸುವ ಮತ್ತು ಪರಾಮರ್ಶಿಸುವ ಶಕ್ತಿಯಿದೆ (Reasoning & Dedu... power), ಆದರೆ ಇತರ ಪ್ರಾಣಿಗಳಲ್ಲಿ ಈ ಶಕ್ತಿ ... ಅದು ತುಂಬಾ ಕಡಿಮೆಯಿದೆ. ಹಾಗಾಗಿ ಲಕ್ಷ... ವರ್ಷಗಳಲ್ಲಿ ಪ್ರಾಣಿಗಳ ಬುದ್ಧಿ ಶಕ್ತಿ ಇದ್ದಲ್ಲೇ ... ಮಾನವ ಮಾತ್ರ ಗುಹಾ-ಯುಗದಿಂದ ಕಂಪ್ಯೂಟರ್-ಯ... ಮುಟ್ಟಲು ಸಾಧ್ಯವಾಗಿದ್ದು ಕೇವಲ ಅವನಲ್ಲಿರುವ ಪ್ರ... ಮತ್ತು ಪರಾಮರ್ಶಿಸುವ ಶಕ್ತಿಯಿಂದಾಗಿ ಮಾತ್ರ. ... ಈಗ ಭಾರತೀಯರು ಇನ್ನೂ ಹೆಚ್ಚು ಪರಿಣಾಮಕಾರಿ... ಉಪಯೋಗಿಸುವ ಕಾಲ ಬಂದಿದೆ.

ಪುರಾಣಕಾಲದಲ್ಲಿ ವೈದಿಕರು ನಮ್ಮ ಸಮಾಜದ ... ಹೇರಿದ್ದ ಮೇಲು-ಕೀಳೆಂಬ ಜಾತಿವ್ಯವಸ್ಥೆಯೂ ಇಂದಿ... ನಡೆದುಕೊಂಡು ಬಂದಿರುವುದಕ್ಕೆ ಮಧ್ಯಮ ಜಾತಿಯ... ಇರುವ ಡಿಫಾಲ್ಟ್ ಮನಸ್ಥಿತಿ ಕಾರಣ. ನಿಜವಾಗಿ ... ನಾಶವಾಗದೇ ಇರಲು ಬ್ರಾಹ್ಮಣರಿಗಿಂತ ಮ... ಜಾತಿಯವರೇ ಹೆಚ್ಚು ಕಾರಣ. ಯಾರೋ ಬ್ರಾ... ಮಾತು ಕೇಳಿ ಶಂಭೂಕನನ್ನು ಕೊಂದಿದ್ದು ಕ್ಷತ್ರಿಯ ... ಹಾಗೂ ಕರ್ಣನನ್ನು ಮೋಸದಿಂದ ಕೊಲ್ಲಿಸಿದ್ದು ... ಅಲ್ಲವೇ? ಈಗಲೂ ಹಳ್ಳಿಗಳಲ್ಲಿ ದಲಿತರ ಕೇರಿಗೆ ... ದಲಿತರ ಮನೆಗಳನ್ನು ಸುಟ್ಟು ಹಾಕುವವರು ಈ ಮ... ಜಾತಿಯವರೇ ಅಲ್ಲವೇ. ಮರ್ಯಾದಾ ಹತ್ಯೆ ಮಾಡುವ... ಈ ಮಧ್ಯಮ ಜಾತಿಯವರೇ! ಬ್ರಾಹ್ಮಣರು ತಮ... ಹೆಚ್ಚು ಬುದ್ಧಿವಂತರು ಹಾಗೂ ಕೆಳಜಾತಿಯವರು ತಮ... ಕಡಿಮೆ ಬುದ್ಧಿವಂತರು ಎಂದು ಕೇವಲ ಜಾತಿಯಿಂ... ಜನರ ಬುದ್ಧಿವಂತಿಕೆ ಅಳೆಯುವ ಡಿಫಾಲ್ಟ್ ಮೈ... ಮಧ್ಯಮ ಜಾತಿಯವರಲ್ಲಿ ತಾನೇ ತಾನಾಗಿ ಬೆಳೆದಿರು... ನಮ್ಮ ದೇಶದಲ್ಲಿ ಕ್ರೂರ ಜಾತಿವ್ಯವಸ್ಥೆ ಗಟ್ಟಿಗೊಳ್ಳುತ್ತಿರು... ಮೂಲಕಾರಣ. ಈ ಮಧ್ಯಮ ಜಾತಿಯವರು ವೈ... ಮಾನಸಿಕ ಗುಲಾಮರು ಎನ್ನುವುದು ಬೇರೆ ವಿ... ಹಾಗಾಗಿ ಜಾತಿಯ ಕುರಿತು ಇವರ ತಲೆಯಲ್ಲಿರುವ ಡಿ... ಸೆಟ್ಟಿಂಗ್ಗನ್ನು ಬದಲಿಸಿ ಕಸ್ಟಮೈಜ್ಡ್ ಸೆಟಿಂಗ್ಸ್ ಅಳವಡಿ... ಜಾತಿ ಸಮಸ್ಯೆ ಕಡಿಮೆಯಾಗಬಹುದೇನೋ!

-ಪ್ರವೀಣ್ ಎಸ್ ಶೆಟ್ಟಿ, ಮಂಗಳ...

ನ್ಯೂಟನ್ನನ ಬೀಫ್ ನಿಯಮ

ಅಣಕ

• ಎಚ್.ಎಲ್.ಕೇಶವಮೂರ್ತಿ


ನಮ್ಮ ಹಳ್ಳಿ ಕಡೆ ಕಾಳಿ ಚೋಳಿ ಮಾಡ್ತಾನ ಚೋಳಿ ಕಾಳಿ ಮಾಡ್ತಾನೆ ಅನ್ನೊ ಮಾತದೆ. ಹಂಗೆ ಮಾಡೋರ್ನ ಬಲೇ ಐನಾತಿ ಬಡ್ಡಿ ಹೈದ ಅಂತ ತಾರೀಫು ಮಾಡ್ತಾರೆ. ಹಿಂಗೆ ಮಾಡೋಕೆ ವಿಜ್ಞಾನ ಅನ್ನೋದು ಅವಕಾಶ ಕೊಡೋದಿಲ್ಲ, ಅದು ಎಲ್ಲಾನೂ ನಿಖರವಾಗಿ ತಿಳಿಸುತ್ತೆ, ಸತ್ಯವನ್ನ ಬಯಲು ಮಾಡುತ್ತೆ. ಅದಕ್ಕೆ ವೈಜ್ಞಾನಿಕ ಸತ್ಯ ಅನ್ನೋದು ಅಂತೆಲ್ಲ ನಂಬದೀವಿ ಅಲ್ವಾ. ಆದರೆ ಒಂದು. ವಿಜ್ಞಾನ ಸತ್ಯಾನೆ ಹೊರಹಾಕಬಹುದು. ಇಂತಹ ಹೇಳ್ತಾ ಇದೆ ಅಂತ ಹೇಳೋರು ಮನುಷ್ಯರೇ ಅಲ್ವಾ! ಅಲ್ಲೂ ಕಾಳಿ ಚೋಳಿ, ಚೋಳಿ ಕಾಳಿ ಚಮತ್ಕಾರ ನಡೀತದಂತೆ! ಅದಕ್ಕೋ ಏನೋ ಯಾರೋ ಪುಣ್ಯಾತ್ಮರು ಫೇಸ್‌ಬುಕ್ಕಲಿ 'ಮಟನ್ ಅನ್ನು ಸೃಷ್ಟಿಸಲೂ ಸಾಧ್ಯವಿಲ್ಲ, ನಾಶ ಮಾಡಲೂ ಸಾಧ್ಯವಿಲ್ಲ; ಸನಿಹದಲ್ಲಿರುವ ಚುನಾವಣಾ ವೇಗವರ್ಧಕವಾಗಿ ಕೆಲಸ ಮಾಡಿದಾಗ ಅದನ್ನು ಬೀಫ್ ಆಗಿ ಪರಿವರ್ತಿಸಲು ಸಾಧ್ಯ' ಅನ್ನೊ ನ್ಯೂಟನ್ನನ ಆಧುನಿಕ ನಿಯಮವೊಂದನ್ನು ಪ್ರಚುರಪಡಿಸಿದ್ದಾರಂತೆ!

ಈ ಬೀಫು ಮಟನ್ನು ನ್ಯೂಟನ್ನು ಇವೆಲ್ಲ ಎತ್ತೆಣಿಂದೆತ್ತಗಿ ಸಂಬಂಧವಯ್ಯ ಅಂದ್ರೆ.....

ಉತ್ತರ ಪ್ರದೇಶದ ದಾದ್ರಿಯಲ್ಲಿ ಯಾರೋ ಮನೆ ಹಾಳ ಸಾಬಿ ದನ ಮಾಂಸವ ತಂದು ಮನೆ ಒಳಗೆ ಫ್ರೀಜ್‌ನಲ್ಲಿಟ್ಟಿದ್ನಂತೆ. ಗೋವು ಅಂದ್ರೆ ಸಾಮಾನ್ಯ ಆಯಿತಾ. ಮೂವತ್ತು ಮೂರು ಕೋಟಿ ದೇವತೆಗಳಿಗೆ ತನ್ನ ದೇಹದಲ್ಲಿ ಆವಾಸಸ್ಥಾನ ಕೊಟ್ಟಿರೋ ಮಾತೆ. ದನಿನ ಮಾಂಸ ಅಂದರೆ ಅದರ ಜೀವ ತೆಗೆದವ್ನೆ ಅಂದ ಹಾಗಾಯ್ತು. ಅಂದ್ರೆ ಮೂವತ್ತು ಮೂರು ಕೋಟಿ ದೇವತೆಗಳನ್ನೂ ಒಟ್ಟಿಗೆ ಸಾಯಿಸಿದಂಗಾಯ್ತದೆ ಅಲ್ವಾ. ಇದರ ಅರ್ಥಮಾಡಿಕೊಂಡೇ ಅಲ್ಲಿನ ಸರ್ಕಾರ ಗೋವಧೆ ನಿಷೇಧ ಮಾಡಿ ಗೋಭಕ್ತರ ಸಮಸ್ಯೆಗೆ ಸಮಾಧಾನ ತಂದಿತ್ತು ಅನ್ನಿ. ಆದ್ರೆ ಈಗೇನಾಗದೆ ನಿಷೇಧ ಹೇರಿದ್ರೂ ಗೋವಧೆ ಆಗೋಗದೆ. ಯಾವ್ನೋನೋ ಸಾಬಿ ಮನೆ ಒಳಗೆ ಅದರ ಮಾಂಸವ ತಂದು ಮಡಗವ್ನೆ ಅನ್ನೋದ ತಿಳಿದು ಗೋಭಕ್ತ ಹಿಂದೂಗಳ ಭಾವನೆಗಳಿಗೆ ತೀರ ನೋವಾಗದೆ. ಒಬ್ಬನಿಗೇ ಹಿಂಗಾಗಿದ್ದರೆ ಹೆಂಗೋ ಸುಮ್ಮನೆ ಅನುಭವಿಸಿ ತೆಪ್ಪಗಿರುತ್ತಿದ್ದನೇನೋ. ಬಹಳ ಜನಕ್ಕೆ ಹಿಂಗಾಗಿತ್ತಲ್ವ. ನೋವು ಆಕ್ರೋಶಕ್ಕೆ ತಿರುಗಿತು. ಆ ಸಾಬಿ ಮನೆಗೆ ನುಗ್ಗಿ ಅವನ್ನ ಬೀದಿಗೆ ಎಳೆದುತಂದು ಚಚ್ಚಿ ಸಾಯಿಸಿದಾಗಲೇ ಗೋಮನಸ್ಸುಗಳಿಗೆ ಸಮಾಧಾನ ಆಗಿದ್ದು.

ಏನೋ ಆ ಧರ್ಮ ಉಳಿಸುವ ಕಾರ್ಯ ಮಾಡವ್ರೆ. ಅವರು ಮಾಡಿದ್ದು ಸರಿಯಾಗೇ ಅವೆ ಅಂತ ಅಲ್ಲಿನ ಈಗಿನ ಸರ್ಕಾರ ಕಂಡರೂ ಕಾಣದಂಗೆ ಇರ್ಲಿಲ್ಲ. ಹಿಂಗೆಲ್ಲ ಸಾಯಿಸೋದು ಅಪರಾಧ ಅಂತಾವ ವಸಿ ಜನ ಹಿಡ್ದು ಕೇಸ ಜಡ್ದದೆ. ಮನೇ ಒಳಗೆ ಫ್ರಿಡ್ಜಲಿ ದನಿನ ಮಾಂಸ ಇತ್ತು ಅಂತಿದ್ರಲ್ಲಾ ಅಂತಾವ ಅದು ಯಾವುದರ ಮಾಂಸ ಅಂತ ತಿಳಿಯೋಕೆ ಅದ ದನಿನ ಆಸ್ಪತ್ರೆಗೆ ಕಳಿಸವ್ರೆ. ಅಲ್ಲಿ ಅದರ ವೈಜ್ಞಾನಿಕ ಪರೀಕ್ಷೆ ನಡೆಸಿ ಅದು ದನದ ಮಾಂಸ ಅಲ್ಲ ಕುರಿ ಮಾಂಸ ಅಂತ ವರದಿ ನೀಡಿದೆ.

ಗೋಭಕ್ತ ಹಿಂದೂಗಳು ಇದ್ರಲ್ಲ ಅವ್ರುಗ್ಗೆ ಈ ವರದಿ ಬಗ್ಗೇನೆ ಅನುಮಾನ ಬಂದದೆ. ಅದ್ಕೆ ಏನು ಮಾಡವ್ರೆ ಅವ್ರು ಅಂದ್ರೆ, ಅದ್ದೇ ಮಾಂಸವನ್ನು ವಿಧಿವಿಜ್ಞಾನ ಪ್ರಯೋಗಶಾಲೆಗೆ ಕಳುಸೋ ಹಂಗೆ ನೋಡ್ಕಂಡವ್ರೆ. ಅಲ್ಲಿಂದಾನು ಆ ವರದಿ ತರಿಸವ್ರೆ. ಏನಾಶ್ಚರ್ಯ ಅಂತೀರಿ.



ದನದ ಆಸ್ಪತ್ರೆ ವಿಜ್ಞಾನದಲ್ಲಿ ಬರಿ ಮಾಂಸ ಆಗಿದ್ದು ವಿಧಿವಿಜ್ಞಾನ ಪ್ರಯೋಗಶಾಲೆಯಲ್ಲಿ ದನದ ಮಾಂಸ ಆಗಿತ್ತು! ಈಗ ಆ ಸಾಬಿ ಮನೆಯವರು ದನದ ಮಾಂಸ ತಿಂದವ್ರಲಾ ಅವರ ಮೇಲೆ ಕೇಸಾಕಿ ಅಂತ ಕೂಗೆಬ್ಬಿಸವ್ರೆ. ಅಷ್ಟೇ ಅಲ್ಲ, ಧರ್ಮಕ್ಕೆ ಅವಮಾನ ಮಾಡ್ದ ಅನ್ನೊ ಆಕ್ರೋಶದಲ್ಲಿ ಸಾಬಿ ಸಾಯಿಸವ್ರೆ. ಅವನು ಹಂಗೆ ಮಾಡಿದ್ದೇ ಇವರು ಹಿಂಗೆ ಮಾಡವ್ರೆ. ಇವದ್ದೇನೂ ತಪ್ಪಿಲ್ಲ. ಇವರ್ನೆಲ್ಲ ಬಿಡುಗಡೆ ಮಾಡಿ ಅಂತ ಕೇಳ್ತಾ ಅವ್ರೆ. ನ್ಯಾಯವೇ ಅಲ್ಲವಾ.....!

ಈ ನ್ಯಾಯವ ಕೆಲವರು ಒಪ್ಪೋಕೆ ತಯಾರಿಲ್ಲ. ಅಂತೋವ್ರು ಅಲ್ರಪಾ ದನದ ಮಾಂಸಾನೆ ಇತ್ತು ಅಂತ ತಿಳ್ಕಳಾವ. ಅದ್ಕೆ ಕಾನೂನಿದೆ. ಅದೆ ಶಿಕ್ಷೆ ನೀಡ್ತದೆ. ಕಾನೂನನ್ನು ಕೈಗೆ ತೆಗೆದುಕೊಂಡು ಆ ಮನುಷ್ಯನ್ನ ಸಾಯಿಸಿದ್ದು ತಪ್ಪಲ್ಲವಾ ಅಂತ ನ್ಯಾಯ ಕೇಳಕೆ ಬರ್ತಾರೆ. ಅಲ್ಲ ಕಣ್ರೀ ನ್ಯಾಯಸ್ಥರೇ ಅವರೇನು ಸುಮ್ಮನೆ ಸಾಯಿಸದರೇನ್ರಿ. ಗೋಹತ್ಯೆ ಮಾಡ್ದ ಅದ್ಕೇ ವಧೆ ಮಾಡಿದ್ರು. ಅದು ತಪ್ಪಾ? ಚುನಾವಣೆ ಹತ್ತಿರಕ್ಕೆ ಬಂತು ಅಂತ ಹಿಂಗೆ ಮಾಡ್ತಾ ಬಿದ್ದವೆ ಅಂತಾರಲ್ರೀ. ಹಂಗಾರೆ ಚುನಾವಣೆ ಬಂತು ಅಂತ ಹಂಗಾದೆ ಧರ್ಮ ರಕ್ಷಿಸೋದೂ ತಪ್ಪು ಅನ್ನಿ.....!

ಹೀನಸುಳಿ ಬೋಳಿಸಿದ್ರೂ

ಹಿಂದೂಗಳಲ್ಲಿ ಎರಡು ವಿಧ ಇದೆಯಂತೆ. ಒಂದು ನಾಗಪುರದ ಹಿಂದೂ ಇನ್ನೊಂದು ಸಾಮಾನ್ಯ ಹಿಂದೂ. ಮೊದಲಿನವರಿದಾರಲ್ಲ ಅವರು ಸರ್ವಶ್ರೇಷ್ಠರಂತೆ. ಎರಡನೆಯವರಿದಾರಲ್ಲ ಅವರ ಮೊದಲಿನವರು ತಮ್ಮ ಹಿತ ಕಾಯುವುದಕ್ಕೆ ಇರಿಸಿಕೊಂಡಿರುವುದರಂತೆ. ಇಲ್ಲದೆ ಇದ್ದರೆ ಇಷ್ಟರಲ್ಲಿ ಸಾಮಾನ್ಯ ಹಿಂದೂಗಳ ನಿರ್ನಾಮ ಆಗುತ್ತಿತ್ತಂತೆ. ಯಾಕೆಂದರೆ ಸಾಧ್ವಿ ಪ್ರಾಚಿ ಎಂಬ ಸಾಧ್ವಿ ಮೋದಿ ದನೀಲೇ ಕಾಂಗ್ರೆಸ್ ಮುಕ್ತ ಭಾರತ ಮಾಡ್ತೀವಿ ಅಂತ ಹೇಳಿ ಅಲ್ಲಿಗೇ ನಿಲ್ಲಿಸಿಲ್ಲ. ಮುಂದುವರೆದು ಮುಸಲ್ಮಾನ ಮುಕ್ತ ಭಾರತ ಮಾಡ್ತೀವಿ ಅಂತ ಹೇಳಿ ಅಲ್ಲಿಗೇ ನಿಲ್ಲಿಸಿಲ್ಲ. ಹಂಗೇಯ ಸಾಮಾನ್ಯ ಹಿಂದೂ ಮುಕ್ತ ಭಾರತ ಮಾಡ್ತೀವಿ ಅಂತಿದ್ದರೇನೋ! ಇರಲಿ. ಈ ನಾಗಪುರದ ಹಿಂದೂಗಳು ಇದ್ದಾರಲ್ಲ ಅವ್ರು ಭಾರತೀಯ ಪರಂಪರೆಯನ್ನ ಉಳಿಸೋದ್ನೆ ಅವರ ಕಾಯಕ ಮಾಡಿಕೊಂಡವ್ರಂತೆ. ಇದ ಅರೀದೋವ್ರು ಅಂತೋರನ್ನ ಕಂಡ್ರೆ ಊರಿಗೆಲ್ಲ ಬಂದು ದಾರಿ ಆದ್ರೆ ನಮ್ಮನೆ ಯಡವಟ್ಟನಿಗೇ ಒಂದು ದಾರಿ ಅಂತಾವೆ.

ನಾಗಪುರದ ಹಿಂದೂಗಳು ನಾಯಿ ಬೊಗಳಿದರೆ ದೇವಲೋಕ ಹಾಳಾದೀತೆ ಅಂತಾವ ಇಂತಹ ಮೂರ್ಖರನ್ನ ಕರುಣೆಯಿಂದ್ಲೇ ಕಾಣ್ತಾರೆ. ಅಂತಹವರಿಗೂ ಯಾವುದು ಸಂಸ್ಕೃತಿ ಯಾವುದು ಅಲ್ಲ ಯಾವುದು ಪರಂಪರೆ ಯಾವುದು ಅಲ್ಲ, ಪರಂಪರೆ ಸಂಸ್ಕೃತಿಯನ್ನೂ ಉಳಿಸಿ ಬೆಳೆಸಬೇಕಾದ ವಿಧಿವಿಧಾನಗಳನ್ನು ಅರಿವು ಮಾಡಿಕೊಡಲೆಂದೇ ಆರ್ಗನೈಸರ್ ಅನ್ನೋ ಪತ್ರಿಕೆ ತರ್ತಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂತಲ್ಲಾ ಆಗ ದೇಶವಾದ ದೇಶ ಎಲ್ಲ ಗುಲಾಮಗಿರಿ ತಪ್ಪು ಅಂತಾವ ಕುಣಿದು ಕುಪ್ಪಳಿಸಿತು ಅಲ್ವಾ. ಆಗ್ಲೆ ಆರ್ಗನೈಸರ್ 'ಏನೋ ಅದೃಷ್ಟವಶಾತ್ ಅಧಿಕಾರಕ್ಕೆ ಬಂದಿದೀರಿ. ದೇಶಕ್ಕೆ ತ್ರಿವರ್ಣಧ್ವಜ ಕೊಟ್ಟದ್ದೀರಿ. ಅದನ್ನು ಹಿಂದೂಗಳು ಎಂದೂ ಗೌರವಿಸುವುದಿಲ್ಲ, ತಮ್ಮದಾಗಿಸಿಕೊಳ್ಳುವುದಿಲ್ಲ, ಮೂರು ಎಂಬ ಶಬ್ದವೇ ಕೆಡಕನ್ನು ಸೂಚಿಸುತ್ತದೆ. ಮೂರು ಬಣ್ಣದ ಧ್ವಜ ಮಾನಸಿಕವಾಗಿ ದುಷ್ಪರಿಣಾಮ ಬೀರುತ್ತದೆ. ದೇಶಕ್ಕೆ ಹಾನಿ ಉಂಟಾಗುತ್ತದೆ, ಎಂದು ಎಚ್ಚರಿಸಿತ್ತು, ತ್ಯಾಗದ ಸಂಕೇತವಾದ ಕೇಸರಿ ಬಣ್ಣದ ಭಗವಾನ್ ಧ್ವಜ ರಾಷ್ಟ್ರೀಯ ಧ್ವಜ ಆಗಬೇಕು ಎಂಬುದು ಅದರ ಅಂತರಾಳದ ಕೂಗಾಗಿತ್ತು, ಅಷ್ಟಕ್ಕೇ ಅದು ಸುಮ್ಮನಾಗಲಿಲ್ಲ, ಸ್ವಾತಂತ್ರ್ಯ ಬಂದಮೇಲೆ ಸಂವಿಧಾನ ಅಂತ ಒಂದು ಇರಬೇಕಲ್ಲಾ, ಅದ್ಕೆ ಅಂಬೇಡ್ಕರ್ ಅನ್ನೊ ಒಬ್ಬನ್ನ ಕದ್ದು ಬರಿ ಅಂದ್ರು. ಅವನೇನು ಮಾಡ್ದ, ಲೋಕದ ಎಲ್ಲಾ ಸಂವಿಧಾನಗಳನ್ನು ಕದ್ದ, ಭಾರತೀಯ ಸಂವಿಧಾನ ಬರ್ದಿದೀನಿ ಅಂದ. ಅದ್ರಲ್ಲಿ ಭಾರತೀಯ ಅನ್ನೋದು ಎಲ್ಲೂ ಇಲ್ಲವೇ ಇಲ್ಲ ಅನ್ನೋದು ಆರ್ಗನೈಸರ್ ಸಂಶೋಧಿಸಿತು. ಇಂತಹದ್ದು ಬೇಕಾಗೇ ಇರಲಿಲ್ಲ ಅನ್ನುವುದು ಅದರ ಅಭಿಪ್ರಾಯ ಆಗಿತ್ತು, ನಮ್ಮಲ್ಲೇ ಅದಾಗಲೇ ಇತ್ತು, ಅದು ಜಗತ್ತಿನ ಗಮನ ಸೆಳೆದು ಎಲ್ಲರ ಮೆಚ್ಚುಗೆ ಪಡೆದಿತ್ತು, ಭಾರತೀಯರೆಲ್ಲರ ಸ್ವಯಂಸ್ಫೂರ್ತಿ ಸಮ್ಮತಿ ಮತ್ತು ಅನುಸರಣೆಗೆ ಪಾತ್ರವಾಗಿದ್ದ ಗ್ರಂಥ ಅದಾಗಿತ್ತು, ಅದೇ ಮನುಸ್ಮೃತಿ ಎಂದು ಸ್ಪಷ್ಟಪಡಿಸಿತ್ತು, ಇದು ಆಗಲಿಲ್ಲವಲ್ಲಾ ಎಂಬ ಕೊರಗು ಅದಕ್ಕೆ ಇನ್ನೂ ಇದೆ.

ಇದನ್ನೆಲ್ಲ ಯಾಕೆ ಹೇಳುವುದಕ್ಕೆ ಬಂದೆ ಅಂದ್ರೆ ಭಾರತೀಯ ಪರಂಪರೆಯನ್ನು ಉಳಿಸಬೇಕು ಅನ್ನೋದು ನಾಗಪುರದ ಹಿಂದೂಗಳ ಕಣಕಣದಲ್ಲಿಯೂ ಜೀವಂತವಾಗಿದೆ. ಇದ ತಿಳ್ಕೆ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರದ ಅಧ್ಯಕ್ಷ ಬಹದ್ದೂರ್ ರಾಯ್ ಅನ್ನುವ ಮಹಾಶಯರು ಸಂವಿಧಾನದ ರಚನೆಯಲ್ಲಿ ಅಂಬೇಡ್ಕರ್ ಅವರ ಪಾತ್ರ ಬರೀ ಕಲ್ಪನೆ ಅಂತಹೇಳವ್ರೆ ಅಂತ ಹಾರಾಡ್ತ ಅವ್ರಲ್ಲಾ, ಎಲ್ಲಾ ಕಾಲದಿಂದಲೂ ಮಾಡ್ತಿರೋದ್ನೆ ಈಗಲೂ ಮಾಡ್ತಾ ಅವ್ರೆ ಅದ್ರಲ್ಲೇನು ತಪ್ಪು ಅಂತೀನಿ! ●

11⇦

ಅನ್ನೊಂತ ಕಣ್ಣೀರ ಒರಸತಿದ್ದಳು. ಆ ಹರವಿನ್ನ ಎತಗೊಂಡು ಹೋಗಿ ಗಟಾರದೊಳಗ ಒಡದರು. ಒಂಥರಾ ಕೊಳಕು ವಾಸನೆ. "ಬಾ ಹತ್ತು ಜೀಪ್" ಎಂದು ಅವನ್ನೂ ಕರಕೊಂಡು ಹೋದರು. ಬಾಬಣ್ಣನ ಮಕ್ಕಳು ಅನಿತಾ, ಸುನಿತಾ ಗಾಬರಿಯಾಗಿ ನಿಂತು ನೋಡತಿದ್ದರು. ಓಣ್ಯಾಗಿನ ಮಂದಿ ಇವರ ಮನಿ ಕಡಿ ನೋಡಿ ಗುಸು ಗುಸು ಪಿಸು ಪಿಸು ಅಂತಿದ್ದರು. ಗಂಗಾಬಾಯಿ ಜೀವ ಖಜೀಲ್ ಆದಂಗ ಆಯ್ತು, ಸೆರಗ ಮುಚಗೊಂಡು ಸೀದಾ ಆಕಿ ದೊಡ್ಡವ್ವಳ ಮನಿ ಕಡಿ ನಡದಳು. ಈರವ್ವಜ್ಜಿಗೂ ಬಾಳ ಬ್ಯಾಸರ ಆಯ್ತು "ಪೊಲೀಸರು ಮನಿ ಮಟ ಬಂದು ಹೋಗೂದಂದ್ರ ಸಣ್ಣ ಮಾತಾಗಲಿಲ್ಲ, ಅಂವಗ ಯಾವದೂ ಬ್ಯಾನಿಲ್ಲ ಅದಕೇ ಹಿಂಗ ಮಾಡ್ತಾನ. ಅಂವಗ ಒಂದು ಪಾಠ ಕಲಸಬೇಕು. ನೀನು ಮಕ್ಕಳು ಇಲ್ಲೇ ಇದ್ದು ಬಿಡ್ರಿ. ಸಾಯ್ಲಿ ಅಲ್ಲೇ ಕುಡಕೊಂಡು ಬೀಳಲಿ. ಯಾವಕ್ಕಿ ಕರದು ರೊಟ್ಟಿ ಮ್ಯಾಲ ವಣಗೀ ಹಚ್ಚಿಕೊಡ್ತಾಳ ನೋಡಮ್ಮು" ಅಂತ ಮುದಕಿ ಹೇಳದಂಗೇ ಮಾಡಿ ನೋಡಿದ್ದೂ ಆಯ್ತು, ಮನಿ ಅನ್ನೂದು ವಾರದೊಳಗ ಇಸ್ಪೇಟ್ ಆಡವರ ಕ್ಲಬ್ ಆಗಿಬಿಟ್ಟಿತ್ತು, ಎಂತೆಂಥವರೋ ಬರೂದು ಹೂಗೂದು ಸುರು ಆಗಿತ್ತು, ಕುಡಿಲಾಕ ದುಡ್ಡ ಕಡಿಮಿ ಬಿದ್ದರ ಮನಿನೂ ಅಂವಾ ಒತ್ತೆ ಇಡೂ ಪೈಕಿ ಅಂತ ಗಂಗಾಬಾಯಿಗಿ ಗೊತ್ತಾಗಿ ಮತ್ತ ಮನಿಗಿ ಬಂದಾಗಿತ್ತು, ಬಾಬಣ್ಣ ಮದುವಿ-ಆದ ಹೊಸತರಲ್ಲಿ ಕುಡೀತಿರಲಿಲ್ಲ, ಹಿರಿ ಮಗಳು ರಜನಿ ಹುಟ್ಟೂವರೆಗೆ ಕುಡಿಯವರನ್ನ ಕಂಡ್ರೆ ಅಂವಗ ಆಗತಿರಲಿಲ್ಲ, ಯಾವಾಗ ಅನಿತಾ ಹುಟ್ಟಿದ್ಲೋ ಅಲ್ಲಿಂದ ಕುಡಿಯಾಕ ಸುರು ಮಾಡಿದ. ಮೊದಲ ಒಂದು ರೀತಿ ಮ್ಯಾಲಿತ್ತು ಸುನಿತಾ ಹುಟ್ಟಿದ ಮ್ಯಾಲಂತೂ ದಿನಾ ಕುಡಿಯಾಕ ಸುರು ಮಾಡದ. ಈರವ್ವಜ್ಜಿ ಅವನ್ನ ಕುಂದ್ರಿಸಿ ಗಿಣಿಗಿ ಹೇಳದಂಗ ಹೇಳಿದ್ದಳು. "ನೋಡು ತಮ್ಮಾ, ಮಕ್ಕಳು ಮಕ್ಕಳೇ.. ಈಗಿನ ಕಾಲದೊಳಗ ಗಂಡು ಹೆಣ್ಣು ಎರಡೂ ಒಂದೇ.. ಹೆಣ್ಣು, ಗಂಡು ಎಲ್ಲಾ ಅವನ ಇಚ್ಛೆ ಐತಿ. ನಮ್ಮ ಕೈಯಾಗ ಏನೈತಿ" ಅಂತೆಲ್ಲ ಹೇಳಿದ ಮ್ಯಾಲೂ ಅಂವಾ ಅಜ್ಜಿ ಮಾತ ಕಿವ್ಯಾಗ ಹಾಕೊಂಡಿರಲಿಲ್ಲ, ಅಜ್ಜಿಗೂ 'ಪಾಪ ಒಂದರೇ ಗಂಡು ಆಗಬಾರದಿತ್ತಾ..?' ಅನ್ನೂದು ಒಳಗೊಳಗ ಇದ್ದರೂ ಅದನ್ನೆಲ್ಲಾ ತೋರಿಗೊಟ್ಟಿರಲಿಲ್ಲ, ಬಾಬಣ್ಣ ಬಾಳ ಓದದವನಲ್ಲ, ಆಸ್ತಿ ಚಲೊ ಐತಿ ಅನ್ನೋ ಕಾರಣಕ್ಕ ಲಗ್ನ ಮಾಡಿ ಕೊಟ್ಟಿದ್ದರು. ಈರವ್ವಳ ತಂಗಿಗಿ ತನ್ನ ಅಕ್ಕ ಅದೇ ಊರಾಗದಾಳ ಅನ್ನೂ ಸಮಾಧಾನ ಇತ್ತು, ಬರಬರತಾ ಆ ಸಮಾಧಾನ ಅನ್ನೂದು ಸಂಕಟಕ ಕಾರಣಾಗಿತ್ತು, ಅಂವಾ ಈ ಪರಿ ಕುಡುಕ ಆಗ್ತಾನಂತ ಯಾರೂ ಎಣಿಸಿರಲಿಲ್ಲ; ಮೊದಲ ಮಗಳು ರಜನಿ ಲಗ್ನ ದಿವಸ ಸೈತ ಫುಲ್ ಟೈಟ್ ಆಗಿ ಒಂದು ಕಡಿ ಸುಮ್ಮ ಕುಂತಗೊಂಡಿದ್ದ, ಬೀಗರಿಗಿ ಮುಯ್ಯಾ ಮಾಡೂ ಮುಂದ ಸೈತ ಅಂವಗ ಎದ್ದು ನಿಲ್ಲಾಕ ಬರ್ತಿರಲಿಲ್ಲ, ಇಂಥಾ ಬಾಬಣ್ಣ ಪೊಲೀಸರ ಒಡೆತಕ್ಕೂ ಜಗ್ಗಿರಲಿಲ್ಲ, ಒಂದು ವಾರದಮಟ ಗಂಪ್ಯಾ ಜೋಡಿ ಜೈಲಿಗಿ ಕಳಸದರೂ ಬದಲ್ ಆಗಿರಲಿಲ್ಲ, ಗಂಗಾಬಾಯಿಗಿ ತನಗ ಎರಡು ಮಕ್ಕಳು ಮದುವಿಗಿ ಬಂದಾವ ಅನ್ನೋದಕ್ಕಿಂತಲೂ ಗಂಡನ ಲಪುಟತನಾನೇ ಸಾಕಾಗಿಹೋಗಿತ್ತು, ಏನು ಮಾಡೂದಂತ ತಿಳಿದಂಗ ಆಗಿತ್ತು.

ಕತೆ

ಆ ದಿವಸ ಮಲಕ್ಕಣ್ಣದೇವರ ಜಾತ್ರಿ. ಗುಡಿ ಅನ್ನೂದು ಸುಣ್ಣ ಬಣ್ಣ ಬಳಕೊಂಡು ರಚ್ ಆಗಿತ್ತು, ಓಣ್ಯಾಗ ಎಲ್ಲಾರ ಮನಿ ಮುಂದೂ ರಂಗೋಲಿ. ಬಾಗಿಲ ಮುಂದ ಮಾವಿನ ತೊಳಲು. ಬಾಬಣ್ಣ ಅವತ್ತು ದೊಡ್ಡ ಜಾತ್ರಿ ಅನ್ನೂದು ಗೊತ್ತಿದ್ರೂ ಇನ್ನೂ ಎದ್ದು ಜಳಕಾ ಮಾಡಿರಲಿಲ್ಲ, ಊರ ಜಾತ್ರಿ ಅಂತ ಹೇಳಿ ಈರವ್ವಜ್ಜಿನೂ ಇಲ್ಲೇ ಮಗಳ ಮನಿಗೇ ಬಂದಿದ್ದಳು. ಇನ್ನೇನು ಅರ್ಧ ತಾಸಿನೊಳಗ ತೇರು ಎಳೀಬೇಕು ಅನ್ನೂದರೊಳಗ ಪೊಲೀಸರ ಜೀಪು ಭಂವ್ ಅಂತ ಬಾಬಣ್ಣನ ಮನಿ ಮುಂದ ಬಂದುನಿಂತಿತು. ಓಣ್ಯಾಗಿನ ಮಂದಿ ನಿಂತು ನೋಡತಿದ್ದರು. ಅನಿತಾ ಹೊರಗಿನಿಂದ ಓಡಿಬಂದು "ಯವ್ವಾ ಪೊಲೀಸರು" ಅಂದಳು. ಬಾಬಣ್ಣ ತಟ್ ಅಂತ ಎದ್ದು ಕುಂತು "ಪೊಲೀಸರಾ..?" ಅಂದ. ಗಂಪ್ಯಾ ಜೀಪಿನಲ್ಲಿದ್ದ. ಕೆಳಗ ಇಳದಿರಲಿಲ್ಲ, ಅಲ್ಲೇ ಕುಂತು ಹಣಿಕಿ ಹಾಕತಿದ್ದ. ಅಜ್ಜಿ ಹೊರಗ ಬಂದು "ಯಪ್ಪಾ ನಿಮಗ ಹಬ್ಬ ಹುಣ್ಣಿವಿ ಏನೂ ಇಲ್ಲನೂ.. ನಾಳಿಗೀಳಿ ಬಂದ್ರ ಏನಾಗತಿತ್ತು..?" ಅಂದಾಗ ಆ ಪೊಲೀಸ್ ಅಧಿಕಾರಿ "ನೌಕರಿ ಅಲ್ಲವಾ ಅಜ್ಜಿ ಮಾಡಬೇಕು. ಈರವ್ವಜ್ಜಿ ಅಂದ್ರ ನೀನೇ ಅನೂ..?" "ಹೌದು ಯಾಕ..?" "ನಡಿ ಈಗ ನಿನ್ನ ಮನಿಗೇ ಹೋಗೂದೈತಿ."

"ಯಾಕ ಹಪ್ಪಳ ಸಂಡಗಿ ಬೇಕಾಗಿತ್ತನೂ..?"

"ಹೌದು ನಡಿ ಏನು ಬೇಕಾಗೈತಿ ಅಂತ ಅಲ್ಲೇ ಹೇಳ್ತೇವಿ" ಅಂದವರೇ ಬಾಬಣ್ಣನ್ನ ಕರಕೊಂಡು ನಡದರು. "ನೀವು ಮುಂದ ನಡೀರಿ" ಅಂತ ಹೇಳಿ ಅಜ್ಜಿ ಗಂಗಾಬಾಯಿ ಹಿಂದಿಂದ ನಡದರು. ಪೊಲೀಸರು ಅಲ್ಲಿ ಹೋಗಿ ಅಜ್ಜಿ ಮನಿ ಸುತ್ತ ಮುತ್ತ ಹುಡಕಾಕ ಸುರು ಮಾಡದರು. ಅಜ್ಜಿ ಅವರು ಹಂಗ ಹುಡಕೂದು ನೋಡಿ "ನೀವು ಏನರೇ ಕಳಕೊಂಡೀರಿ ಹೇಳ್ರಿ" ಅಂದಾಗ ಆ ಪೊಲೀಸ್ ಅಧಿಕಾರಿ "ಅಜ್ಜಿ ನಿನಗ ಇದೆಲ್ಲಾ ಗೊತ್ತಾಗಂಗಿಲ್ಲ. ಈ ಖದೀಮರು ಕಳ್ಳಬಟ್ಟಿ ದಾರೂ ಗಡಗಿ ನಿನ್ನ ಮನಿ ಮುಂದ ಹೂಳ್ಯಾರ" ಅನ್ನೊಂತ ಎಲ್ಲಾ ಕಡಿ ನೋಡದರು. ಒಬ್ಬ ಪೊಲೀಸ್ ಹಗೂರಕ ಮನಿ ಮುಂದಿನ ಬಚ್ಚಲ ಬಾಜೂ ಇರೋ ಬಾಳಿ ಗಿಡದ ಕಡಿ ಹೋದ. ಬಾಬಣ್ಣ ಒಂದೇ ಸವನೇ ಬೆವರತಿದ್ದ ಅಜ್ಜಿ ಅಲ್ಲೇ ನಿಂತು ಬಾಬಣ್ಣನ ಮುಖಾ ನೋಡಿ ಸಿಟ್ಟೀಲೇ "ಯಾಕ ಇಂಥಾ ಹೇಲ ತಿನ್ನೋ ಕೆಲಸಾ ಮಾಡಬೇಕು. ಮುಕಳಿ ಗಂಟ ಒಡದರೂ ಬುದ್ಧಿ ಬರಲಿಲ್ಲಂದ್ರ ಹ್ಯಾಂಗ..?" ಅಂತ ಬೈತಿದ್ದಳು. ಪೊಲೀಸರು ಅಲ್ಲಿದ್ದ ಮಂದಿ ಎದುರೇ ಬೂಟಗಾಲಿಂದ ಮುಕುಳಿ ಮ್ಯಾಲ ಒದ್ದು ಎಳಕೊಂಡು ಬಂದು "ತೋರಸರಿ ಎಲ್ಲಿಟ್ಟೀರಿ" ಅಂದಾಗ ಗಂಪು ಅಲ್ಲಿರೋ ಬಾಳೇಗಿಡದ ಮಗ್ಗಲಕ ಹಡ್ಯಾಕ ಸುರು ಮಾಡಿದ. ಅಲ್ಲೇನೂ ಕಾಣಲಿಲ್ಲ, ಅಂವಗ ದಿಕ್ಕ ತಪ್ಪದಂಗಾಗಿ "ಸಾಯೇಬರ ಇಲ್ಲೇ ಇಟ್ಟಿದ್ವಿ.. ಇಲ್ಲೇ" ಅಂದ. ಆಗ ಆ ಅಧಿಕಾರಿ "ಇಲ್ಲೇ ಇದ್ದದ್ದು ಈಗ ಎಲ್ಲಿ ಹೋಯ್ತು.. ನಾಟಕ ಮಾಡ್ತೀದಿ ಬೋಸ್ಡಿಕೆ" ಅಂತ ಮತ್ತೊಂದು ಜೋರಾಗಿ ಒದ್ದ. ಗಂಪ್ಯಾ ದಪ್ಪಂತ ಬಿದ್ದ. ಅಜ್ಜಿ ಪೊಲೀಸರ ಕಡೆ ಬಂದು "ಇಲ್ಲಿ ಸಿಗಲಿಲ್ಲಂದ್ರ ಮುಗೀತು.. ಸುಳ್ಳೇ ಗದ್ದಲ ಮಾಡ್ಕೊಂತ ನಿಲ್ಲಬ್ಯಾಡ್ರಿ ಜನ ಸೇರತಾರ. ಜಾತಿ ಬ್ಯಾರೆ" ಅಂದಳು. "ಈಗ ಹೋಗ್ತೇವಿ ಮತ್ತ ಬರ್ತೀವಿ. ಇವರನ್ನ ಅಟ್ಟು ಹಗರ ಬಿಡುವಂಗಿಲ್ಲ" ಅಂತ ಹೇಳಿಹೋದರು. "ಹೋಗು ನೀ ಯಾಕ ನಿಂತಿ.. ನಮ್ಮ ಹುಡುಗನ್ನ ಹಾಳ ಮಾಡಿ ಹೊಯ್ಮಾಲಿ ಥರಾ ನಿಂತಾನ" ಅಂತ ಗಂಪೂಗ ಬೈದಳು. ಅಂವಾ ಹೋಗೂ ಮುಂದ ಬಾಬಣ್ಣನ ಕಡಿ ಹೊಳ್ಳಿ ನೋಡದ. ಅಂವಾ ನೋಡಲಿಲ್ಲ, ಅಲ್ಲಿದ್ದ ಮಂದೆಲ್ಲಾ ಹೋದ ಮ್ಯಾಗ ಅಜ್ಜಿ ಬಾಬಣ್ಣನ ಒಳಗ ಕರದಳು. ಕೂಡು ಅಂತ ಹೇಳದಳು. ಕೆಳಗ ಮುಖಾ ಹಾಕೊಂಡು ಕುಂತ. "ಈಗ ಹೇಳು ಅದನ್ನಿಲ್ಲಿ ಯಾವಾಗ ಹೂಳದರಿ..?" "ಇಲ್ಲ ನಾವೇನೂ ಹೂಳಿಲ್ಲ" ಅಂದ. ಅಜ್ಜಿ ಸಿಟ್ಟೀಲೇ "ನೀನು ನಾಯಿ ಬಾಲ.. ಪೊಲೀಸರು ದನಕ್ಕ ಬಡದಂಗ ಬಡೀತಿದ್ದರು. ಬಚಾವ್ ಆದರಿ. ನಿಮ್ಮನ್ನ ಬಚಾವ್ ಮಾಡಿದ್ದು ಅಲ್ಲಿ ಕುಂತೈತಲ್ಲಾ ಅದು" ಅಂತೇಳಿ ಒಲಿ ಮುಂದ ಬೂದಿಯೊಳಗ ಕುಂತಿರೋ ಬೆಕ್ಕಿನ ಕಡಿ ಕೈ ಮಾಡಿ ತೋರಸದಳು. "ನೀವು ಯಾವಾಗ ಹೂಳಿದ್ರಿ ಅನ್ನೂದಂತೂ ನನಗ ಗೊತ್ತಿಲ್ಲ, ಈ ಬೆಕ್ಕ ನಿನ್ನೆ ಸಂಜಿ ಮುಂದ ಅಲ್ಲಿ ಕುಂತು ಪರಪರಾ ಅಂತ ಕೆರೀತಿತ್ತು, ಹೋಗಿ ನೋಡದರ ಅಲ್ಲೇನೋ ಕಂಡಂಗ ಆಯ್ತು, ನಿನ್ನ ಹೆಂಡತಿ ನಾನು ಕೂಡಿ ಹಡ್ಡಿ ನೋಡದಿವಿ, ಹರವಿ ಮುಚ್ಚಳ ಕಂಡತು. ತಗದರ ಗಬ್ಬಂತು.. ಆವಾಗ ಗೊತ್ತಾಯ್ತು, ಅದು ನಿಂದೇ ಕಿಸಾವತಿ ಅಂತ" ಅಂದಾಗ ಅವನ ಮುಖ ಬಿಳಚಿಕೊಂಡಂಗ ಆಗಿತ್ತು, ಗಂಗಾಬಾಯಿ ಸಿಟ್ಟಿಂದ "ಅದನ್ನ ಎತ್ತಿ ಹೊರಗ ತಗೀಬೇಕಾದರ ಹೆಣಾ ತಗದಂಗ ಆಯ್ತು, ಅವ್ವ, ನಾನು, ಮಕ್ಕಳು ಎಲ್ಲಾರೂ ಸೇರಿ ಮನಿ ಹಿಂದಿನ ತಿಪ್ಪಿಯೊಳಗ ಒಯ್ದು ಅದನ್ನ ಒಡದವಿ ಅಂತ ನೀವು ಬಚಾವ್ ಆದ್ರಿ. ಇಲ್ಲಾಂದ್ರ ನಿಮ್ಮನ್ನ ಎಳಕೊಂಡು ಹೋಗತಿದ್ದರು." ಅಜ್ಜಿ ಅವನ ಗದ್ದ ಹಿಡಿದು ಮ್ಯಾಲ ಮುಖಾ ಎತ್ತಿ "ಬಾಬು, ಆ ಮಕ್ಕಳ ಮುಖಾನಾದ್ರೂ ನೋಡು. ಇಂಥಾವೆಲ್ಲಾ ಯಾಕ ಮಾಡತಿ..? ಇನ್ನ ಮುಂದರ ದುಡಿಯೂದು ಕಲಿ. ಮಕ್ಕಳ ಬಗ್ಗಿ ಚಿಂತಿ ಬಿಡು, ಅವರ ಲಗ್ನದ ಜವಾಬ್ದಾರಿ ನಂದು. ನನಗರೇ ಹಿಂದಮುಂದ ಯಾರದಾರ ನಿನಗ ಯಾಕ ತಿಳಿವಲ್ದು, ಮೊದಲ ಇಂಥಾವೆಲ್ಲಾ ಬಿಡು ದಾರಿಗಿ ಬಾ. ನಿನ್ನ ಖರ್ಚಿಗಿ ನಾ ರೊಕ್ಕ ಕೊಡ್ತೀನಿ" ಅಂತ ಹೇಳ್ತಿದ್ದಂಗೆ ಬಾಬಣ್ಣ ದಪ್ಪಂತ ಈರವ್ವಜ್ಜಿ ಪಾದದ ಮ್ಯಾಲ ಬಿದ್ದುಬಿಟ್ಟ. "ತಪ್ಪಾಯ್ತು ಅತ್ತಿ ಇನ್ನ ಮುಂದ ಹಿಂಗ ಮಾಡಲ್ಲ.. ನಾನೂ ನಿಮ್ಮ ಜೋಡಿನೇ ಕೂಡಿ ಕೆಲ್ಸಾ ಮಾಡ್ತೀನಿ" ಅಂತ ಗೋಳಾಡಿ ಅತ್ತ, ಗಂಗಾಬಾಯಿ, ಮಕ್ಕಳಾದ ಅನಿತಾ, ಸುನಿತಾ ಕಣ್ಣಲ್ಲೂ ನೀರು ನಿಲ್ಲಲಿಲ್ಲ.


****

ಈಗ ವಾರದಲ್ಲಿ ಎರಡು ಮೂರು ಬಾರಿ ಬಂದು ಹೋಗೋ ಏಸರ್ ಗಾಡಿ ಬಾಬಣ್ಣಂದೇ.. ಅವನೇ ಡ್ರೈವರ್ ಮತ್ತು ಅವನೇ ಮಾಲಿಕ. ಗಂಪ್ಯಾ ಹಪ್ಪಳ ಮತ್ತು ಸಂಡಗಿಯ ಬಾಕ್ಸ್‌ಗಳನ್ನ ಎತ್ತಿ ಗಾಡಿಗೆ ಹಾಕತಿದ್ದ, ಗಂಗಾಬಾಯಿ ಮತ್ತು ಮಕ್ಕಳು ಈಗ ಹಿಂದಿಗಿಂತಲೂ ಖುಷಿಯಾಗಿ ಕೆಲಸ ಮಾಡತ್ತಿದ್ದರು. ಹಣಕಾಸಿನ ಎಲ್ಲ ವ್ಯವಹಾರ ಬಾಬಣ್ಣನೇ ನೋಡಕೋತಿದ್ದ. ಅಜ್ಜಿ "ಕುಡಿಲಿಕ್ಕ ರೊಕ್ಕಾ ಬೇಕೇನೋ" ಅಂತ ಕೇಳಿದಾಗ ನಾಚಿಕೊಂತ "ಏನತ್ತೆ ನೀನು.. ಬಿಡಸವಳೇ ನೀನು ಈಗ ಮತ್ತ.." ಎನ್ನುತ್ತ ಗಾಡಿ ಕಡೆ ನಡೆ ಗಂಪ್ಯಾ ಅಜ್ಜಿ ಕಡಿ ನೋಡಿ "ಅಯಿ, ಮಾಲೆಲ್ಲಾ ಬರೋಬ್ಬರಿ ಐತಿ. ಬಾಬು ರೈಟ್ ರೈಟ್" ಅಂತ ಗಾಡಿಹತ್ತಿದ. ಗಾಡಿ ಬರ್, ಬರ್ ಎಂದು ಧೂಳು ಹಾರಿಸಿ, ಶಹರ ದಾರಿ ಹಿಡೀತು.

● ಡಾ.ಎಸ್.ಬಿ.ಜೋಗುರ

'ಕಬಾಲಿ'ಗೆ ಕನ್ನಡದ ಶೀರ್ಷಿಕೆ

ರಜನೀಕಾಂತ್ ನಟನೆಯ ಬಹುನಿರೀಕ್ಷಿತ ಚಿತ್ರ 'ಕಬಾಲಿ' ಬಿಡುಗಡೆಗೆ ದಿನಗಣನೆ ಶುರುವಾಗಿದೆ. ಜುಲೈ 15ಕ್ಕೆ ಡೇಟ್ ಫಿಕ್ಸ್ ಆಗಿದ್ದು ಕರ್ನಾಟಕದ ವಿತರಣಾ ಹಕ್ಕನ್ನು ರಾಕ್‌ಲೈನ್ ವೆಂಕಟೇಶ್ ಪಡೆದಿದ್ದಾರೆ. ಕನ್ನಡದಲ್ಲೇ ಈ ಸಿನಿಮಾವನ್ನು ಅರ್ಥ ಮಾಡಿಸಲು ಅವರು ಪಣತೊಟ್ಟದ್ದಾರೆ. ಅದರ ಮೊದಲ ಭಾಗ ಅನ್ನುವಂತೆ 'ಕಬಾಲಿ' ಚಿತ್ರದ ಪೋಸ್ಟರ್ ಅನ್ನು ಕನ್ನಡದಲ್ಲೇ ಪ್ರಿಂಟ್ ಮಾಡಿಸಿದ್ದಾರೆ.



ಪರಭಾಷೆಯ ಸಿನಿಮಾಗಳ ಪೋಸ್ಟರ್ ಸಾಮಾನ್ಯವಾಗಿ ಆಯಾ ಭಾಷೆಯಲ್ಲಿ ಪ್ರಿಂಟ್ ಆಗುತ್ತವೆ. ಎಲ್ಲೇ ರಿಲೀಸ್ ಆದರೂ ಅದೇ ಗೋಡೆ ಪತ್ರಿಕೆಯನ್ನು ಬಳಸಲಾಗುತ್ತದೆ. ಆದರೆ ಈ ಬಾರಿ ಅದು ಬದಲಾಗಿದೆ. ತಮಿಳಿನ 'ಕಬಾಲಿ' ಚಿತ್ರದ ಪೋಸ್ಟರ್‌ಅನ್ನು ಸ್ವಚ್ಛ ಕನ್ನಡದಲ್ಲಿ ಮುದ್ರಿಸಿದ್ದಾರೆ ವಿತರಕರು. ರಾಕ್‌ಲೈನ್ ವೆಂಕಟೇಶ್ ಅವರಿಗೆ ಕನ್ನಡದ ಮೇಲೆ ಅಭಿಮಾನವಿಲ್ಲ; ಕನ್ನಡ ಸಿನಿಮಾ ರಂಗದಲ್ಲಿ ಅವರು ಹಣ ಹೂಡುವುದಿಲ್ಲ ಅನ್ನುವ ಮಾತು ಕೇಳಿಬಂದಿತ್ತು. ಪರಭಾಷೆಯ ಚಿತ್ರಗಳಿಗೆ ಅವರು ನಿರ್ಮಾಪಕ ರಾಗಿದ್ದು ಹಲವರ ಕೆಂಗಣ್ಣಿಗೆ ಗುರಿಯಾಗಿತ್ತು.

ಈಗ ಕನ್ನಡದಲ್ಲೇ ತಮಿಳಿನ ಚಿತ್ರದ ಪೋಸ್ಟರ್ ಪ್ರಿಂಟ್ ಮಾಡಿಸುವ ಮೂಲಕ ಎಲ್ಲರಿಗೂ ಉತ್ತರ ಕೊಟ್ಟಿದ್ದಾರೆ. ಈ ವಾದ ವಿವಾದ ಏನೇ ಇರಲಿ, ತಮಿಳಿನ ಸಿನಿಮಾವೊಂದರ ಪೋಸ್ಟರ್ ಕನ್ನಡದಲ್ಲಿ ಅಚ್ಚಾಗಿ ಬಂದಾಗ, ಹೇಗೆ ಕಾಣುತ್ತದೆ ಅನ್ನುವುದನ್ನೊಮ್ಮೆ ಕಣ್ತುಂಬಿಕೊಂಡು ಬಿಡಿ.

ದೇಸಿ ಹುಡುಗಿ ನಿಧಿ



ಬಾಲಿವುಡ್‌ನಲ್ಲಿ ಕಳೆದೇಹೋಗಿದ್ದ ಕೊಡಗಿನ ಬೆಡಗಿ ನಿಧಿ ಸುಬ್ಬಯ್ಯ 'ನನ್ನ ನಿನ್ನ ಪ್ರೇಮಕಥೆ' ಸಿನಿಮಾದ ಮೂಲಕ ಮತ್ತೆ ಕನ್ನಡಕ್ಕೆ ವಾಪಸ್ಸಾಗಿದ್ದಾರೆ. ಕನ್ನಡಕ್ಕೆ ವಾಪಸ್ಸು ಬರಲ್ಲ ಅಂತ ಹೇಳಿದ್ದವರು ಹಿಂದಿಯಲ್ಲಿ ಯಾವುದೇ ಸಿನಿಮಾ ಸಿಗದ ಕಾರಣ ಮತ್ತೆ ಸ್ಯಾಂಡಲ್‌ವುಡ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಅಂದಹಾಗೆ ಇವರನ್ನು ಕನ್ನಡಕ್ಕೆ ಕರೆತಂದದ್ದು ನಿರ್ದೇಶಕ ಶಿವು ಜಮಖಂಡಿ. ಉತ್ತರ ಕರ್ನಾಟಕದ ಹಿನ್ನೆಲೆಯ ಕತೆಯೊಂದನ್ನು ಈ ನಿರ್ದೇಶಕರು ಸಿನಿಮಾ ಮಾಡಿದ್ದಾರೆ. ಆ ಚಿತ್ರಕ್ಕೆ ನಿಧಿಯನ್ನು ನಾಯಕಿಯನ್ನಾಗಿ ಆರಿಸಿಕೊಂಡಿದ್ದಾರೆ.

ನಿಧಿ ಇಲ್ಲಿ ಪ್ರಿಯಾ ಹೆಸರಿನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಇದೊಂದು ಪಕ್ಕಾ ದೇಸಿ ಹುಡುಗಿಯ ಪಾತ್ರವಂತೆ. ಅಲ್ಲದೇ ನೈಜ ಘಟನೆಯನ್ನು ಆಧರಿಸಿದ ಸಿನಿಮಾ ಇದಾಗಿದ್ದರಿಂದ ಪಾತ್ರಕ್ಕೆ ಹೆಚ್ಚು ಮಹತ್ವವಿದೆಯಂತೆ.

ಈವರೆಗೂ ಸಖತ್ ಗ್ಲಾಮರ್ ಪಾತ್ರಗಳಲ್ಲಿ ಮಿಂಚಿದ್ದ ನಿಧಿ ಈ ಚಿತ್ರದಲ್ಲಿ ಟಿಪಿಕಲ್ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಇಂತಹ ಪಾತ್ರವು ನಿಧಿ ಅವರಿಗೆ ಒಪ್ಪಿದೆಯಾ ಅನ್ನುವುದು ಸಿನಿಮಾ ರಿಲೀಸ್ ಆದ ನಂತರವೇ ಗೊತ್ತಾಗಲಿದೆ.

ಅಜಯ್ ರಾವ್ ಚಿತ್ರಕ್ಕೆ ದ್ವಾರಕೀಶ್ ನಿರ್ಮಾಪಕ

'ಜಾನ್ ಜಾನಿ ಜನಾರ್ದನ್' ಸಿನಿಮಾದಲ್ಲಿ ಬಿಜಿ ಆಗಿರುವ ಅಜಯ್ ರಾವ್, ಈ ನಡುವೆ ಬಿಡುವು ಮಾಡಿಕೊಂಡು ಹೊಸ ಕತೆಯೊಂದನ್ನು ಕೇಳಿದ್ದಾರೆ. ಈ ಚಿತ್ರವನ್ನು ಕರ್ನಾಟಕದ ಕುಳ್ಳ ದ್ವಾರಕೀಶ್ ನಿರ್ಮಾಣ ಮಾಡುತ್ತಾರಂತೆ. 'ಕೃಷ್ಣ ರುಕ್ಕು' ಚಿತ್ರದ ನಂತರ ಅಜಯ್‌ಗೆ ಡಿಮಾಂಡ್ ಹೆಚ್ಚಾಗಿರುವ ಕಾರಣ ಬ್ಯಾಕ್ ಟು ಬ್ಯಾಕ್ ಚಿತ್ರಗಳು ಇವರನ್ನು ಹುಡುಕಿಕೊಂಡು ಬರುತ್ತಿವೆ. ಸದ್ಯ ಇವರು ಗುರು ದೇಶಪಾಂಡೆ ನಿರ್ದೇಶನದ 'ಜಾನ್ ಜಾನಿ ಜನಾರ್ದನ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದು ಮುಗಿಯುತ್ತಿದ್ದಂತೆಯೇ ತೇಜಸ್ ನಿರ್ದೇಶನದ ಚಿತ್ರವಿದೆ. ಆನಂತರವಷ್ಟೇ ದ್ವಾರಕೀಶ್ ಬ್ಯಾನರ್‌ನ ಚಿತ್ರ ಸೆಟ್ಟೇರಲಿದೆ. ಅಲ್ಲದೇ ಶಶಾಂಕ್ ಜತೆ ಮತ್ತೊಂದು ಸಿನಿಮಾ ಮಾಡುವುದಾಗಿಯೂ ಅವರು ಹೇಳಿದ್ದಾರೆ. ಅಂದಹಾಗೆ ದ್ವಾರಕೀಶ್ ನಿರ್ಮಾಣ ಸಿನಿಮಾ ಪಕ್ಕಾ ಆಕ್ಷನ್ ಕಥಾಹಂದರ ಹೊಂದಿದೆಯಂತೆ. ಹಾಗಾಗಿ ಅಜಯ್ ಬಾಡಿ ಬಿಲ್ಡ್ ಮಾಡಬೇಕಿದೆ. ಕೈಯಲ್ಲಿರುವ ಚಿತ್ರಗಳನ್ನು ಮುಗಿಸಿಕೊಂಡು ಈ ಚಿತ್ರಕ್ಕಾಗಿ ತಯಾರಿ ಮಾಡಿಕೊಳ್ಳುತ್ತಾರಂತೆ.

ಪುನೀತ್ ಜತೆ ಸ್ಟೆಪ್ ಹಾಕಿ

ನಿರ್ದೇಶಕ ಸೂರಿ ತಮ್ಮ ಸಿನಿಮಾದಲ್ಲಿ ಒಂದಿಲ್ಲೊಂದು ಗಿಮಿಕ್ ಮಾಡುತ್ತಲೇ ಇರುತ್ತಾರೆ. ಅದು ಪಕ್ಕಾ ಗಿಮಿಕ್ ಅನಿಸಿದರೂ, ನೋಡುಗರಿಗೆ ಮಾತ್ರ ಸಿನಿಮಾದ ಒಂದು ಭಾಗವೇ ಆಗಿರುತ್ತದೆ. ಈಗಾಗಲೇ ರಿಲೀಸ್ ಆಗಿರುವ 'ಕೆಂಡಸಂಪಿಗೆ' ಚಿತ್ರದ ಶೂಟಿಂಗ್‌ಗಾಗಿ ನಾನಾ ಜಿಲ್ಲೆಗಳನ್ನು ಸುತ್ತಿದ್ದರು ಸೂರಿ. ಈಗ 'ದೊಡ್ಮನೆ ಹುಡುಗ'ನಿಗಾಗಿ ಮತ್ತೊಂದು ಯಾತ್ರೆ ಕೈಗೊಂಡಿದ್ದಾರೆ. ಅದ್ದು ಹಾಡಿನ ಚಿತ್ರೀಕರಣಕ್ಕೆ. 'ದೊಡ್ಮನೆ ಹುಡುಗ' ಸಿನಿಮಾದ ಟೈಟಲ್ ಟ್ರ್ಯಾಕ್‌ಅನ್ನು ಅದ್ದೂರಿಯಾಗಿ ಶೂಟ್ ಮಾಡುವ ಪ್ಲಾನ್ ನಿರ್ದೇಶಕರದ್ದು. ಯಾಕೆಂದರೆ ಅದು ಅಭಿಮಾನಿಗಳಿಗೋಸ್ಕರ ಮಾಡುತ್ತಿರುವ ಸಾಂಗ್. ಈ ಹಾಡಿನಲ್ಲಿ ಪುನೀತ್ ಜತೆ ಅಭಿಮಾನಿಗಳಿಗೂ ಡಾನ್ಸ್ ಮಾಡುವ ಅವಕಾಶ ಕೊಟ್ಟಿರುವುದರಿಂದ, ಈ ಅವಕಾಶವನ್ನು ಸದುಪಯೋಗಮಾಡಿಕೊಳ್ಳಿರಿ ಅನ್ನುವುದು ನಿರ್ದೇಶಕರ ಮಾತು. ಒಟ್ಟು ಎಂಟು ದಿನಗಳ ಶೂಟಿಂಗ್. ಬಳ್ಳಾರಿ, ಹೊಸಪೇಟೆ, ಹುಬ್ಬಳ್ಳಿ, ಚಿತ್ರದುರ್ಗ, ಬೆಂಗಳೂರು ಸೇರಿದಂತೆ ಅನೇಕ ಕಡೆ ಚಿತ್ರೀಕರಣ ಮಾಡುವ ಪ್ಲಾನ್ ಇದೆ. ನಿರ್ದೇಶಕ ಯೋಗರಾಜ್ ಭಟ್ ಸಾಹಿತ್ಯದಲ್ಲಿ ಮೂಡಿಬಂದಿರುವ ಹಾಡಿಗೆ, ವಿ.ಹರಿಕೃಷ್ಣ ಸಂಗೀತ ನೀಡಿದ್ದಾರೆ.

ಕನಸುಗಾರನ ಮಗನ ಹೊಸ ಕ

ತಾವೇ ತಮ್ಮ ಮಗನನ್ನು ಸಿನಿಮಾ ರಂಗಕ್ಕೆ ಪರಿಚಯಿಸಲು ಹೊ ಕ್ರೇಜಿಸ್ಟಾರ್ ರವಿಚಂದ್ರನ್. ಆದರೆ ಅದು ಸಾಧ್ಯವಾಗಲಿಲ್ಲ. ರವಿ ಕೈಗೆತ್ತಿಕೊಂಡಿದ್ದ 'ರಣಧೀರ' ಚಿತ್ರವು ಅರ್ಧಕ್ಕೆ ನಿಂತಿತು. ಅಲ್ಲಿ ಮನೋರಂಜನ್ ಅವರ ಕನಸು ಕೂಡ ಕರಗಿತ್ತು. ಚೊಚ್ಚಲು ಸಿನಿಮಾ ಹೀಗ ಅನ್ನುವ ನೋವಿನಲ್ಲಿದ್ದ ಮನೂಗೆ ಮತ್ತೆ ಚೈತನ್ಯ ತುಂಬಿದ್ದು ನಿರ್ಮಾ ಜಯಣ್ಣ ಮತ್ತು ಭೋಗೇಂದ್ರ. ಈ ಹುಡುಗನಿಗಾಗಿಯೇ ಅವರು 'ಸ ಎಂಬ ಚಿತ್ರವನ್ನು ಶುರು ಮಾಡಿದರು. ಈಗ ಚಿತ್ರದ ಬಹುತೇಕ ಶ ಮುಗಿದಿದೆ. ಈ ಬೆನ್ನಲ್ಲೇ ಮತ್ತೊಂದು ಚಿತ್ರಕ್ಕೆ ಮನೂ ಆಯ್ಕೆಯಾಗಿದ ಸಿನಿಮಾವನ್ನು ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಮಾಡಲಿದ್ದಾರೆ.

ತಮಿಳು ನಟ ಧನುಷ್ ನಟನೆಯ 'ವಿ.ಐ.ಪಿ' ಚಿತ್ರದ ರೀಮೇಕ ಅನ್ನು ರಾಕ್‌ಲೈನ್ ಪಡೆದಿದ್ದಾರೆ. ಇದೇ ಚಿತ್ರಕ್ಕೆ ಅವರು ಮನೋರಂಜ ನಾಯಕನನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಈ ಕುರಿತು ರವಿಚಂದ್ರನ್ ಜ ಮಾತುಕತೆ ಆಗಿದೆಯಂತೆ.

ಸದ್ಯ ಮನೋರಂಜನ್ 'ಸಾಹೇಬ' ಸಿನಿಮಾದ ಶೂಟಿ ತೊಡಗಿಕೊಂಡಿದ್ದಾರೆ. ಚಿತ್ರೀಕರಣ ಮುಗಿಯುತ್ತಿದ್ದಂತೆಯೇ 'ವಿಐಪಿ' ಆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com